# ಅಂಗವಿಕಲರ ರಾಜ್ಯ ನೀತಿ

# ಪರಿವಿಡಿ


| ಕ್ರಮ ಸಂಖ್ಯೆ | ವಿವರ | ಪುಟ ಸಂಖ್ಯೆ |
|---|---|---|
| 1. | ಅಂಗವಿಕಲರ ರಾಜ್ಯ ನೀತಿ | 1 – 9 |
| 2. | Karnataka State Policy on disability | 10 – 15 |
| 3. | ಅಂಗವಿಕಲರ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995 | 16 – 56 |
| 4. | ಅಂಗವಿಕಲರ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995 ಕರ್ನಾಟಕ ನಿಯಮಾವಳಿ 2004 | 57 – 74 |

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

**ವಿಷಯ :** ಕರ್ನಾಟಕ ರಾಜ್ಯ ಅಂಗವಿಕಲತೆ ಕಾರ್ಯನೀತಿ ಬಗ್ಗೆ.

**ಓದಲಾಗಿದೆ :** 1) ರಾಜ್ಯ ಆಯುಕ್ತರು, ಅಂಗವಿಕಲರ ಅಧಿನಿಯಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಅಂಅನಿ: ಆಂ.ಪಾ: 2003–04/752, ದಿ:08–10–2004.

**ಪ್ರಸ್ತಾವನೆ:**

ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995ರಡಿ, ಪುನರ್‌ವಸತಿ, ಶಿಕ್ಷಣ, ಆರ್ಥಿಕ ಅವಕಾಶ, ತಡೆರಹಿತ ವಾತಾವರಣ ಮತ್ತು ಇತರೆ ಅವಲಂಬನೆಯ ಸೇವೆಗಳಿಂದ ಅಂಗವಿಕಲ ವ್ಯಕ್ತಿಗಳನ್ನು ಸಮಗ್ರವಾಗಿ ರಾಷ್ಟ್ರೀಯ ಜೀವನದ ಮುಖ್ಯ ವಾಹಿನಿಗೆ ತರುವಲ್ಲಿ ರಾಜ್ಯ ಅವಕಾಶ ಕಲ್ಪಿಸಿ ಕೊಡಬೇಕಾಗಿರುತ್ತದೆ. ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995ರ ಉದ್ದೇಶಗಳನ್ನು ಜಾರಿಗೆ ತರಲು ರಾಜ್ಯ ಆಯುಕ್ತರು, ಅಂಗವಿಕಲರ ಅಧಿನಿಯಮ ಇವರು ಕರ್ನಾಟಕ ರಾಜ್ಯ ಅಂಗವಿಕಲತೆಯ ಕಾರ್ಯನೀತಿಯನ್ನು ರೂಪಿಸಲು ಮೇಲೆ ಓದಲಾದ ಪತ್ರದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಅಂಗವಿಕಲರ ಅಧಿನಿಯಮ ಅನುಷ್ಠಾನ ಕುರಿತು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ನೋಡಲ್ ಸಮಿತಿಯ ದಿನಾಂಕ: 18–01–2006ರಂದು ನಡೆದ ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಯಿತು. ಸದರಿ ಸಭೆಯಲ್ಲಿ ಅಂಗವಿಕಲರ ರಾಜ್ಯ ನೀತಿಯನ್ವಯ ಎಲ್ಲಾ ಇಲಾಖೆಗಳು ಅಂಗವಿಕಲರ ಅಧಿನಿಯಮ 1995ರನ್ವಯ ಅಂಗವಿಕಲರಿಗೆ ವಾರ್ಷಿಕ ಕ್ರಿಯಾ ಯೋಜನೆ ಹಾಗೂ ಪಂಚವಾರ್ಷಿಕ ಮುನ್ನೋಟ ಯೋಜನೆ ತಯಾರಿಸತಕ್ಕದೆಂದು, ಇದಕ್ಕಾಗಿ ಯೋಜನಾ ಮತ್ತು ಆರ್ಥಿಕ ಇಲಾಖೆಗಳು ಅನುದಾನ ಹಂಚಿಕೆ ಮಾಡತಕ್ಕದ್ದು, ಎಂದು ತಿಳಿಸುವುದರೊಂದಿಗೆ ಅಂಗವಿಕಲರ ಕಾರ್ಯನೀತಿಯನ್ನು ಅಳವಡಿಸಿಕೊಳ್ಳಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಅದರಂತೆ, ಕರ್ನಾಟಕ ರಾಜ್ಯ ಅಂಗವಿಕಲರ ಕಾರ್ಯನೀತಿಯನ್ನು ಜಾರಿಗೊಳಿಸಲು ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಮಮಅ.203.ಪಿಹೆಚ್‌ಪಿ.2004 ಬೆಂಗಳೂರು, ದಿನಾಂಕ: 9ನೇ ಜನವರಿ 2007**

ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995ರ ಉದ್ದೇಶಗಳನ್ನು ಜಾರಿಗೆ ತರಲು ಈ ಆದೇಶದ ಅನುಬಂಧಕ್ಕೆ ಲಗತ್ತಿಸಿರುವಂತೆ ಕರ್ನಾಟಕ ರಾಜ್ಯ ಅಂಗವಿಕಲತೆಯ ಕಾರ್ಯನೀತಿಯನ್ನು ಜಾರಿಗೊಳಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

**ಕಾರ್ಯನೀತಿಯ ಪ್ರಮುಖ ಉದ್ದೇಶ ಈ ಕೆಳಕಂಡಂತಿದೆ:–**

ಅ. ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ಶಾಸನ ರಚನೆ ಕಾರ್ಯರೂಪಕ್ಕೆ ತರುವುದನ್ನು ಖಾತ್ರಿಪಡಿಸಿಕೊಳ್ಳುವುದು.

ಆ. ಅಂಗವಿಕಲತೆ ತಡೆಗಟ್ಟುವುದು ಮತ್ತು ಪ್ರಾರಂಭದಲ್ಲೇ ಪತ್ತೆ ಹಚ್ಚುವುದಕ್ಕೋಸ್ಕರ ವಿವಿಧ ವಿಭಾಗಗಳ ಸಮನ್ವಯವನ್ನು [ಸಂಬಂಧಪಟ್ಟ ಏಜೆನ್ಸಿಗಳಲ್ಲಿ]ರಚಿಸುವುದು.

ಇ. ಅಂಗವಿಕಲ ವ್ಯಕ್ತಿಗಳ ಅಧಿನಿಯಮದಲ್ಲಿ ನಮೂದಿಸಿದಂತೆ ಮುಖ್ಯವಾಹಿನಿ ಶಾಲೆಗಳಲ್ಲಿ ದಾಖಲಿಸಿ ಅಂಗವಿಕಲ ಮಕ್ಕಳ ಶಿಕ್ಷಣವನ್ನು ಉತ್ತೇಜಿಸುವುದು, ಹಾಗೂ ವ್ಯಾಪಕ ಶಿಕ್ಷಣ ಯೋಜನೆಯನ್ನು ಜಾರಿಗೆ ತರುವುದು.

ಈ. ಉದ್ಯೋಗ ಸೃಜಿಸುವ ಸರ್ಕಾರದ ಏಜೆನ್ಸಿಗಳನ್ನು ವಿಶೇಷ ಕೇಂದ್ರ ಬಿಂದು ಆಗಿಟ್ಟುಕೊಂಡು ಅಂಗವಿಕಲ ವ್ಯಕ್ತಿಗಳಿಗೆ ಸ್ವಯಂ ಉದ್ಯೋಗ ಉತ್ತೇಜಿಸುವುದು ಮತ್ತು ಅಂಗವಿಕಲ ಉದ್ಯಮದಾರರುಗಳಿಗೆ ವಿವಿಧ ಸರ್ಕಾರದ ಏಜೆನ್ಸಿ ಹಾಗೂ ಇಲಾಖೆಗಳಲ್ಲಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸುವುದು.

ಉ. ವಿವಿಧ ಇಲಾಖೆಗಳ ಯೋಜನೆಗಳನ್ನು ಅಂಗವಿಕಲ ವ್ಯಕ್ತಿಗಳ ಅಭಿವೃದ್ಧಿಗಾಗಿ ಪರಿಣಾಮಕಾರಿಯಾಗಿ ಜಾರಿಗೊಳಿಸುವುದು.

ಊ. ಪುನರ್‌ವಸತಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಹಾಗೂ ಉಸ್ತುವಾರಿ ಮಾಡುವುದು [ರಾಜ್ಯ ಹಾಗೂ ಕೇಂದ್ರ ಸರ್ಕಾರದಡಿಯಲ್ಲಿರುವ ಯೋಜನೆಗಳು].

ಋ. ಸಾರಿಗೆ ರಸ್ತೆ, ಕಟ್ಟಡ, ಸರ್ಕಾರಿ ಹಾಗೂ ಖಾಸಗಿ ಸೇವೆಗಳಲ್ಲಿ ಅಂಗವಿಕಲರಿಗೆ ತಾರತಮ್ಯ ಮಾಡದೇ ಸಮದೃಷ್ಟಿ ನೀಡುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

ೠ. ಅಂಗವಿಕಲತೆ ಕ್ಷೇತ್ರದಲ್ಲಿ ಸ್ವಯಂ ಸೇವಾ ವಿಭಾಗದವರು ಗುಣಾತ್ಮಕ ಸೇವೆ ಕಲ್ಪಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.

ಅಂಗವಿಕಲರ ರಾಜ್ಯ ನೀತಿಯನ್ವಯ ಎಲ್ಲಾ ಇಲಾಖೆಗಳು ಅಂಗವಿಕಲರ ಅಧಿನಿಯಮ 1995ರನ್ವಯ ಅಂಗವಿಕಲರಿಗೆ ವಾರ್ಷಿಕ ಕ್ರಿಯಾ ಯೋಜನೆ ಹಾಗೂ ಪಂಚವಾರ್ಷಿಕ ಮುನ್ನೋಟ ಯೋಜನೆ ತಯಾರಿಸತಕ್ಕದ್ದು, ಹಾಗೂ ಇದಕ್ಕಾಗಿ ಯೋಜನಾ ಮತ್ತು ಆರ್ಥಿಕ ಇಲಾಖೆಗಳು ಅನುದಾನ ಹಂಚಿಕೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಂ. ಚಂದ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

## ಅಂಗವಿಕಲತೆ ಬಗ್ಗೆ ಕರ್ನಾಟಕ ರಾಜ್ಯ ಕಾರ್ಯನೀತಿ (ಪಾಲಿಸಿ)

ಅ. ಪೀಠಿಕೆ :

ರಾಜ್ಯ ತನ್ನ ಪಾತ್ರವನ್ನು ಕಡಿಮೆಗೊಳಿಸುವ ಯುಗದಲ್ಲಿ ನಮ್ಮ ಸಂವಿಧಾನದಲ್ಲಿ ಅಂಗವಿಕಲ ವ್ಯಕ್ತಿಗಳ ಬಗ್ಗೆ ರಾಜ್ಯದ ಜವಾಬ್ದಾರಿ ನಿಸ್ಸಂಶಯವಾಗಿ ಖಾತ್ರಿಪಡಿಸಲಾಗಿದೆ ಎಂಬುದನ್ನು ನಾವು ಅವಶ್ಯವಾಗಿ

ನೆನಪಿಸಿಕೊಳ್ಳಬೇಕಾಗಿದೆ. ರಾಜ್ಯ ಕಾರ್ಯನೀತಿಯ ಅನುಚ್ಛೇದ 41ರ ನಿರ್ದೇಶಕ ತತ್ವಗಳು, ಇನ್ನಿತರವುಗಳ ಜೊತೆಗೆ ಅಂಗವಿಕಲ ವ್ಯಕ್ತಿಗಳ ಕಲ್ಯಾಣಕ್ಕಾಗಿ ರಾಜ್ಯ ಪರಿಣಾಮಕಾರಿಯಾದ ಅವಕಾಶಗಳನ್ನು ಕಲ್ಪಿಸಲು ಆದೇಶಿಸುತ್ತದೆ.

ಕರ್ನಾಟಕ ರಾಜ್ಯದ ಜನಸಂಖ್ಯೆಯಲ್ಲಿ ಸುಮಾರು ಶೇಕಡ 5 ರಿಂದ 6 ರಷ್ಟು ಅಂಗವಿಕಲತೆಯುಳ್ಳ ವ್ಯಕ್ತಿಗಳಿರುತ್ತಾರೆ. ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995 ರಡಿಯಲ್ಲಿ ಅಂಗವಿಕಲ ವ್ಯಕ್ತಿಗಳನ್ನು ನಮ್ಮ ರಾಜ್ಯದ ಮುಖ್ಯವಾಹಿನಿಯಲ್ಲಿ ಸಮನ್ವಯಗೊಳಿಸಲು ಪುನರ್ವಸತಿ, ಶಿಕ್ಷಣ, ಆರ್ಥಿಕ ಅವಕಾಶ, ತಡೆರಹಿತ ವಾತಾವರಣ ಹಾಗೂ ಇತರ ಅವಲಂಬನಾ ಸೇವೆಗಳನ್ನು ರಾಜ್ಯವು ಕಲ್ಪಿಸಬೇಕಾಗಿದೆ

ಎಲ್ಲಾ ಸಂಬಂಧಪಟ್ಟ ಇಲಾಖೆ ಮತ್ತು ಏಜೆನ್ಸಿಗಳಲ್ಲಿ ಅಧಿನಿಯಮದ ಉಪಬಂಧಗಳನ್ನು ಪೂರ್ಣ ರೂಪದಲ್ಲಿ ಕಾರ್ಯಗತಗೊಳಿಸುವುದು ಹಾಗೂ ಅಂಗವಿಕಲರ ಅಧಿನಿಯಮ 1995ರ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಈ ಕರ್ನಾಟಕ ರಾಜ್ಯದಲ್ಲಿ ಅಂಗವಿಕಲತೆ ಕಾರ್ಯನೀತಿಯನ್ನು ರಚಿಸಲಾಗುತ್ತಿದೆ

ಸಚಿವಾಲಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನೋಡಲ್ ಇಲಾಖೆಯಾಗಿದ್ದು ರಾಜ್ಯ ಅಂಗವಿಕಲರ ಆಯುಕ್ತರ ಕಛೇರಿಯು ಅಂಗವಿಕಲರ ಹಕ್ಕುಗಳನ್ನು ಸಂರಕ್ಷಿಸುವಲ್ಲಿ ಕ್ರಮ ತೆಗೆದುಕೊಳ್ಳುವುದು ಹಾಗೂ ಅಂಗವಿಕಲರಿಗಾಗಿ ಇರುವ ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಸಮನ್ವಯಗೊಳಿಸುವುದು ಹಾಗೂ ಮೇಲ್ವಿಚಾರಣೆ ಮಾಡುವುದು.

**ಆ. ಕಾರ್ಯನೀತಿಯ ಉದ್ದೇಶಗಳು :**

1. ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಪಟ್ಟ ಶಾಸನಗಳ ಅನುಷ್ಠಾನವನ್ನು ಖಾತ್ರಿಪಡಿಸಿಕೊಳ್ಳುವುದು ಈ ರಾಜ್ಯ ಕಾರ್ಯನೀತಿಯ ಉದೇಶವಾಗಿರುತ್ತದೆ.
2. ಅಂಗವಿಕಲತೆ ತಡೆಗಟ್ಟುವುದು ಮತ್ತು ಪ್ರಾರಂಭದಲ್ಲೇ ಪತ್ತೆಹಚ್ಚುವುದರಲ್ಲಿ ಸಂಬಂಧಪಟ್ಟ ಏಜೆನ್ಸಿಗಳ ಬಹುವಿಭಾಗ ಸಮನ್ವಯಗೊಳಿಸುವುದು.
3. ಅಂಗವಿಕಲ ಅಧಿನಿಯಮದಲ್ಲಿ ನಮೂದಿಸಿರುವಂತೆ ಮುಖ್ಯವಾಹಿನಿ ಶಾಲೆಗಳಲ್ಲಿ ಅಂಗವಿಕಲತೆಯುಳ್ಳ ಮಕ್ಕಳನ್ನು ದಾಖಲಿಸುವುದು ಹಾಗೂ ಶಿಕ್ಷಣಕ್ಕೆ ಉತ್ತೇಜನ ನೀಡುವುದು ಮತ್ತು ಸಮಗ್ರಶಿಕ್ಷಣ ಯೋಜನೆಯನ್ನು ರೂಪಿಸುವುದು.
4. ಅಂಗವಿಕಲತೆ ಉಳ್ಳ ವ್ಯಕ್ತಿಗಳಲ್ಲಿ ಸ್ವಯಂ ಉದ್ಯೋಗ ಉತ್ತೇಜಿಸುವ ನಿಟ್ಟಿನಲ್ಲಿ ಉದ್ಯೋಗ ಅವಕಾಶವನ್ನು ಸೃಜಿಸುವ ಸರ್ಕಾರದ ಏಜೆನ್ಸಿಗಳ ಮೇಲೆ ವಿಶೇಷವಾಗಿ ಕೇಂದ್ರೀಕರಿಸಿ ಅಂಗವಿಕಲ ಉದ್ದಿಮೆದಾರರಿಗೆ ಸರ್ಕಾರದ ಏಜೆನ್ಸಿ ಮತ್ತು ಇಲಾಖೆಗಳಲ್ಲಿ ಸೇವೆಯ ಅವಕಾಶ ಕಲ್ಪಿಸುವುದು.
5. ಅಂಗವಿಕಲ ವ್ಯಕ್ತಿಗಳ ಅಭಿವೃದ್ಧಿಯನ್ನು ಉತ್ತೇಜಿಸಲು ವಿವಿಧ ಇಲಾಖೆಗಳ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.
6. ಪುನರ್ವಸತಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಹಾಗೂ ಉಸ್ತುವಾರಿ ಮಾಡುವುದು (ರಾಜ್ಯ ಹಾಗೂ ಕೇಂದ್ರ ಸರ್ಕಾರದಡಿಯಲ್ಲಿರುವ ಯೋಜನೆಗಳು).

7. ಸಾರಿಗೆ, ರಸ್ತೆ, ಕಟ್ಟಡ, ಸರ್ಕಾರಿ ಹಾಗೂ ಖಾಸಗಿ ಸೇವೆಗಳಲ್ಲಿ ಅಂಗವಿಕಲರಿಗೆ ಸಮದೃಷ್ಟಿ ನೀಡುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

8. ಅಂಗವಿಕಲತೆ ಕ್ಷೇತ್ರದಲ್ಲಿ ಸ್ವಯಂ ಸೇವಾ ವಲಯ ಗುಣಾತ್ಮಕ ಸೇವೆ ನೀಡುವುದನ್ನು ಖಾತ್ರಿಪಡಿಸಿಕೊಳ್ಳುವುದು.

**ಇ. ಅಂಗವಿಕಲತೆ ತಡೆಗಟ್ಟುವುದು ಮತ್ತು ಪ್ರಾರಂಭದಲ್ಲೇ ಪತ್ತೆ ಹಚ್ಚುವುದು :**

1. ಅಂಗವಿಕಲತೆ ಉಂಟಾಗುವುದನ್ನು ತಡೆಗಟ್ಟುವುದು ಮತ್ತು ಪ್ರಾರಂಭದಲ್ಲಿಯೇ ಪತ್ತೆ ಹಚ್ಚುವ ಕಾರ್ಯದಿಂದಾಗಿ ಕ್ರಮೇಣ ಅಂಗವಿಕಲತೆಯನ್ನು ನಿರ್ಮೂಲನಗೊಳಿಸಿ ಅಂಗವಿಕಲತೆಯನ್ನು ತೊಡೆದು ಹಾಕಬಹುದಾದ್ದರಿಂದ ಸಮನ್ವಯ ಕಾರ್ಯನಿರ್ವಹಣೆ, ಅಂಗವಿಕಲತೆಗೆ ಕಾರಣಗಳ ಬಗ್ಗೆ ಸಮೀಕ್ಷೆ ಮತ್ತು ಸಂಶೋಧನೆ ಕೈಗೊಳ್ಳಬೇಕಾಗಿರುವುದು ಸಮುಚ್ಚಿತ ಸರ್ಕಾರದ ಕರ್ತವ್ಯವಾಗಿರುತ್ತದೆ.

2. ಆರೋಗ್ಯ ಇಲಾಖೆಯು ಅಂಗವಿಕಲತೆಯನ್ನು ಸರಿಪಡಿಸುವ ಶಸ್ತ್ರ ಚಿಕಿತ್ಸೆಗಳನ್ನು ಮೇಲ್ವಿಚಾರಣೆ ಮಾಡತಕ್ಕದ್ದು ಹಾಗೂ ಕೀಲು ಮತ್ತು ಮೂಳೆ ತಜ್ಞರು ಜಿಲ್ಲಾ ಆಸ್ಪತ್ರೆಗಳಲ್ಲಿ ಇದನ್ನು ನಿರ್ವಹಿಸಲು ಉತ್ತೇಜಿಸತಕ್ಕದ್ದು.

3. ಮಾನಸಿಕ ಅಸ್ವಸ್ಥತೆ ಹಾಗೂ ಹೀಮೋಫೀಲಿಯಾ ವ್ಯಕ್ತಿಗಳಿಗೆ ಔಷಧಿ ದೊರೆಯದೆ ಇರುವುದು ಒಂದು ದೊಡ್ಡ ಸಮಸ್ಯೆ, ಯಾಕೆಂದರೆ ಇವರಲ್ಲಿ ಬಹುಶೇಕ ಜನರು ಆರ್ಥಿಕವಾಗಿ ಹಿಂದುಳಿದವರು ಹಾಗೂ ಅವಶ್ಯವಿರುವ ಚಿಕಿತ್ಸೆ/ ಔಷಧಿಗಳನ್ನು ಪಡೆಯಲು ಸಾಧ್ಯವಾಗದೆ ಇರುವವರು. ಆದ್ದರಿಂದ ಔಷಧಿಗಳನ್ನು ಅಗತ್ಯವಿರುವ ವ್ಯಕ್ತಿಗಳಿಗೆ ರಿಯಾಯಿತಿ ದರದಲ್ಲಿ ನೀಡಲು ಸರ್ಕಾರವು ಆಯವ್ಯಯ ಮೀಸಲಿಡುವುದರ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

4. ಅಂಗವಿಕಲ ವ್ಯಕ್ತಿಗಳ ಪುನರ್ವಸತಿ ಕ್ರಮೇಣ ಉಂಟು ಮಾಡಲು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಸರ್ಕಾರಿ ಆಸ್ಪತ್ರೆಗಳಲ್ಲಿ ದೈಹಿಕ ಚಿಕಿತ್ಸೆ (ಫಿಜಿಯೋಥೆರಪಿ) ಹಾಗೂ ಇತರೆ ಸಂಬಂಧಪಟ್ಟ ಸೇವೆಗಳ ಲಭ್ಯತೆಯು ಕಡ್ಡಾಯವಾಗಿರಬೇಕು.

5. ಅಂಗವಿಕಲತೆಯನ್ನು ಪ್ರಾರಂಭದಲ್ಲಿ ಪತ್ತೆಹಚ್ಚುವುದು ಹಾಗೂ ತಡೆಗಟ್ಟುವ ಬಗ್ಗೆ ವೈದ್ಯಕೀಯ ಶಿಕ್ಷಣದ ಪಠ್ಯಕ್ರಮದಲ್ಲಿ ಒಂದು ವಿಷಯ / ಅಧ್ಯಾಯವಾಗಿ ವೈದ್ಯಕೀಯ ಪದವಿಯಲ್ಲಿ ಸೇರಿಸತಕ್ಕದ್ದು.

**ಡಿ. ಶಿಕ್ಷಣ :**

1. ಅಂಗವಿಕಲ ವ್ಯಕ್ತಿಗಳ ಅಧಿನಿಯಮ 1995 ರಡಿ ನಿಗದಿಯಾದಂತೆ ಪ್ರತಿಯೊಂದು ಅಂಗವಿಕಲ ಮಗು 18 ವರ್ಷ ವಯಸ್ಸನ್ನು ಹೊಂದುವವರೆಗೆ ಉಚಿತ ಶಿಕ್ಷಣ ಪಡೆಯುವ ಅವಕಾಶ ಹೊಂದಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.

2. ಅಂಗವಿಕಲ ವ್ಯಕ್ತಿಗಳಿಗೆ ವ್ಯಾಪಕ ಶಿಕ್ಷಣವನ್ನು ಉತ್ತೇಜಿಸಲು ಸೂಕ್ತ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ಇಲಾಖೆ ಪ್ರಯತ್ನಿಸತಕ್ಕದ್ದು.

3. ಸಂಬಂಧಪಟ್ಟ ಸಮುಚ್ಚಿತ ಇಲಾಖೆಗಳು ಪಠ್ಯಕ್ರಮಗಳನ್ನು ವಿಶೇಷವಾಗಿ ಅಂಗವಿಕಲ ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ ಮಾರ್ಪಡಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು ಹಾಗೂ ಶ್ರವಣದೋಷ ಮತ್ತು ಅಂಧತ್ವವುಳ್ಳವರಿಗೆ ಕಲಿಯಲು ಅನುಕೂಲವಾಗುವಂತೆ ಪಠ್ಯಕ್ರಮವನ್ನು ಪುನರ್‌ರಚಿಸುವುದು.

4. ಹತ್ತನೆ ತರಗತಿಯವರೆಗೆ ಓದುತ್ತಿರುವ ಅಂಗವಿಕಲ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಮತ್ತು ಪುಸ್ತಕಗಳನ್ನು ಒದಗಿಸಲು ಸಂಬಂಧಪಟ್ಟ ಸಮುಚ್ಚಿತ ಸರ್ಕಾರವು ಯೋಜನೆಗಳನ್ನು ರೂಪಿಸತಕ್ಕದ್ದು.

5. ಎಲ್ಲಾ ಶಿಕ್ಷಣ ಸಂಸ್ಥೆಗಳು ಅಂಗವಿಕಲರು ಸಂಪರ್ಕಿಸುವ ನಿಟ್ಟಿನಲ್ಲಿ ಸ್ನೇಹಪರವಾಗಿರುವುದಿಲ್ಲ. ಆದುದ್ದರಿಂದ ಶಿಕ್ಷಣ ಸಂಸ್ಥೆಗಳು ತಡೆರಹಿತ ವಾತಾವರಣವನ್ನು ಕಲ್ಪಿಸುವ ಬಗ್ಗೆ ಸರ್ಕಾರದ ಸಂಬಂಧಪಟ್ಟ ಇಲಾಖೆಗಳು ಖಾತ್ರಿಪಡಿಸಿಕೊಳ್ಳುವುದು ಅತ್ಯಗತ್ಯ

6. ಅಂಗವಿಕಲರ ಅಧಿನಿಯಮದ ಪರಿಚ್ಛೇದ 30ರಲ್ಲಿ ವಿವರಿಸಿದಂತೆ ವ್ಯಾಪಕ ಶಿಕ್ಷಣ ಯೋಜನೆಯನ್ನು ರೂಪಿಸುವುದು ಕಡ್ಡಾಯವಾಗಿರುತ್ತದೆ. ಅದರಂತೆ ಶಿಕ್ಷಣ ಇಲಾಖೆ ಯೋಜನೆಯನ್ನು ರೂಪಿಸತಕ್ಕದ್ದು.

7. ಅಂಜಲಿ ಅರೋರ ಪ್ರಕರಣದ ತೀರ್ಮಾನದ ಆಧಾರದ ಮೇರೆಗೆ ವಿವಿಧ ಹುದ್ದೆಗಳ ಆಯ್ಕೆ ಅಥವಾ ಕಾಲೇಜು / ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಹತೆಯನ್ನು ಸಡಿಲಗೊಳಿಸುವುದರ ನಿರ್ಣಯ ಪೂರ್ವ ನಿರ್ದೇಶನ ನೀಡುವಂತಹ ಈ ಪ್ರಕರಣದಲ್ಲಿ ಅಂಜಲಿ ಅರೋರರವರು ತಮ್ಮನ್ನು ಎನ್‌ಟಿಪಿಸಿ ಲಿಮಿಟೆಡ್‌ರವರು ಸಹಾಯಕ ಕಾನೂನು ಅಧಿಕಾರಿ ಹುದ್ದೆಗೆ ನಿಗಧಿಪಡಿಸಿದ ವಿದ್ಯಾರ್ಹತೆ ಹೊಂದಿರುವುದಿಲ್ಲ ಎಂದು ಉಮೇದುವಾರಿಕೆಯನ್ನು ತಿರಸ್ಕರಿಸಿದ ಬಗ್ಗೆ ಸಂವಿಧಾನದ ಸಿಂಧುತ್ವವನ್ನು ಪ್ರಶ್ನಿಸಿರುತ್ತಾರೆ.

ಕೇಂದ್ರ ಸರ್ಕಾರದ 04-09-05ರ ಅಧಿಕೃತ ಜ್ಞಾಪನ ಸಂ: 14026/1/85-Estt. (SCT) ಸಿಬ್ಬಂದಿ ಹಾಗೂ ತರಬೇತಿ ಇಲಾಖೆ ಪ್ರಕಾರ ಇತರ ಮೀಸಲಾತಿ ಕೋಟದ ಅಭ್ಯರ್ಥಿಗಳಿಗೆ ಇರುವ ಸೌಲಭ್ಯಗಳು / ವಿನಾಯಿತಿಗಳು, ದೈಹಿಕ ಅಂಗವಿಕಲ ವಿದ್ಯಾರ್ಥಿಗಳಿಗೂ ಕಾನೂನುಬದ್ಧವಾಗಿ ಲಭ್ಯವಾಗುತ್ತದೆ.

ಎನ್.ಟಿ.ಪಿ.ಸಿ. ಲಿಮಿಟೆಡ್‌ಗೆ ದಿನಾಂಕ: 15-07-2003 ರಂದು ನ್ಯಾಯಾಲಯ ತೀರ್ಪು ನೀಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ವಿದ್ಯಾರ್ಹತೆಯಲ್ಲಿ ಅಂದರೆ ತೇರ್ಗಡೆ ಹೊಂದಲು ನೀಡಲಾಗಿರುವ ವಿನಾಯಿತಿಯನ್ನು ಅಂಗವಿಕಲರ ಅಭ್ಯರ್ಥಿಗಳಿಗೂ ನೀಡುವಂತೆ ಎನ್.ಟಿ.ಪಿ.ಸಿ. ಲಿಮಿಟೆಡ್‌ರವರಿಗೆ ನಿರ್ದೇಶನ ನೀಡಿದೆ. ಆದ್ದರಿಂದ ಕರ್ನಾಟಕದಲ್ಲಿಯೂ ಸಹ ಕಾಲೇಜು / ವಿಶ್ವವಿದ್ಯಾಲಯಗಳಲ್ಲಿ ದಾಖಲೆ ಹಾಗೂ ವಿವಿಧ ಹುದ್ದೆಗಳಲ್ಲಿ ಆಯ್ಕೆ ಬಗ್ಗೆ ದೈಹಿಕ ಅಂಗವಿಕಲ ಅಭ್ಯರ್ಥಿಗಳಿಗೆ ಇತರ ಮೀಸಲಾತಿಗಳಿಗೆ (ಎಸ್.ಸಿ./ಎಸ್.ಟಿ.) ಸಿಗುವ ಸೌಲಭ್ಯವನ್ನು ಕಲ್ಪಿಸಬಹುದಾಗಿದೆ.

ಇ. ಉದ್ಯೋಗ :

1. ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು ಗ್ರೂಪ್ 'ಎ' ಮತ್ತು 'ಬಿ' ವೃಂದದ ಹುದ್ದೆಗಳನ್ನು ಅಂಗವಿಕಲ ವ್ಯಕ್ತಿಗಳಿಗೆ ಮೀಸಲಿಡಲು ಸದರಿ ಹುದ್ದೆಗಳನ್ನು ಗುರುತಿಸಿ ಪ್ರಕಟಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

2. ಅಂಗವಿಕಲರಿಗೆ ಓಡಾಟದಲ್ಲಿ ತೀವ್ರತರ ಸಮಸ್ಯೆ ಇರುವುದರಿಂದ ಸರ್ಕಾರ ಹಾಗೂ ಸರ್ಕಾರದ ಅನುದಾನಿತ ಸಂಸ್ಥೆಗಳ ನೌಕರರಿಗೆ ಕೆಲಸದ ಸಮಯದಲ್ಲಿ ಕೆಲ ರಿಯಾಯಿತಿ ಅವಶ್ಯಕತೆ ಇರುತ್ತದೆ. ಕಾರ್ಮಿಕ ಇಲಾಖೆಯು ಅಂಗವಿಕಲರಿಗೆ ಅನ್ವಯವಾಗುವಂತೆ ಯೋಜನೆಯನ್ನು ಮಿದು ಸಮಯ ಒಳಗೊಂಡಂತೆ ರೂಪಿಸತಕ್ಕದ್ದು.

3. ಅಂಗವಿಕಲರಿಗೆ ಪುನರ್ವಸತಿ ಸೌಲಭ್ಯದ ಕೊರತೆ ಇರುವ ಅವರ ಸ್ವಂತ ಊರುಗಳಿಂದ ದೂರದ ಸ್ಥಳಗಳಿಗೆ ವರ್ಗಾವಣೆ ಮಾಡಿದಲ್ಲಿ ಓಡಾಟದ ತೊಂದರೆಗಳಿಂದ ಅವರ ಕುಟುಂಬದಲ್ಲಿ ಸಮಸ್ಯೆಗಳನ್ನುಂಟು ಮಾಡುತ್ತದೆ. ಅಂಗವಿಕಲರು ತಮ್ಮ ಕುಟುಂಬದ ಸದಸ್ಯರ ಮೇಲೆ ಹೆಚ್ಚಾಗಿ ಅವಲಂಬನೆ ಹೊಂದಿರುವುದರಿಂದ ಸಿಬ್ಬಂದಿ ಹಾಗೂ ಆಡಳಿತ ಸುಧಾರಣೆ ಇಲಾಖೆಯು ಅಂಗವಿಕಲರಿಗೆ ಅವರ ಸೇವಾ ಅವಧಿಯಲ್ಲಿ ಕನಿಷ್ಠ ಸ್ಥಳಾಂತರ ಇರುವ ಹಾಗೆ ವರ್ಗಾವಣೆ ನೀತಿಯನ್ನು ರೂಪಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ.

4. ಅಂಗವಿಕಲರಿಗೆ ಸ್ವಯಂ ಉದ್ಯೋಗದಿಂದ ಸಾಕಷ್ಟು ಆದಾಯವಿದ್ದಲ್ಲಿ ಸ್ವಯಂ ಉದ್ಯೋಗ ಒಳ್ಳೆಯ ಆಯ್ಕೆಯಾಗಿರುತ್ತದೆ. ಮುಕ್ತ ಮಾರುಕಟ್ಟೆ, ಹೆಚ್ಚು ಸ್ಪರ್ಧಾತ್ಮಕವಾಗಿರುವುದರಿಂದ ಸರ್ಕಾರವು ಅಂಗವಿಕಲರು ಸೃಷ್ಟಿಸಿದ ಸರಕು ಮತ್ತು ಸೇವೆಗಳನ್ನು ಗುರುತಿಸಿ ಅವುಗಳನ್ನು ಪೋಷಿಸುವುದಕ್ಕಾಗಿ ಅವರುಗಳಿಗೆ ಸರ್ಕಾರಿ ವಲಯದಲ್ಲಿ ಬೇಡಿಕೆಯನ್ನು ಸೃಷ್ಟಿಸಿ ಕೊಂಡುಕೊಳ್ಳುವ ಆದೇಶ ನೀಡುವುದು.

5. ಅಂಗವಿಕಲರಿಗೆ ವೃತ್ತಿಪರ ತರಬೇತಿಯನ್ನು ಪುನರ್ ರಚಿಸತಕ್ಕದ್ದು ಮತ್ತು ಅದರಂತೆ ವೃತ್ತಿಪರ ತರಬೇತಿ ನೀಡುವ ಸಂಸ್ಥೆಗಳು ಅಂಗವಿಕಲರಿಗೆ ಉದ್ಯೋಗ ದೊರಕುವ ವೃತ್ತಿಪರ ತರಬೇತಿಯನ್ನು ಸೇರಿಸಿಕೊಳ್ಳುವುದು.

6. ಅಂಗವಿಕಲರ ಅಧಿನಿಯಮ 1995ರ ಅನುಚ್ಛೇದ 47 ರಲ್ಲಿ ಅಂಗವಿಕಲರಿಗೆ ಉದ್ಯೋಗದಲ್ಲಿ ತಾರತಮ್ಯ ಮಾಡದಿರುವುದನ್ನು ಖಾತ್ರಿಪಡಿಸುತ್ತದೆ. ಆದ್ದರಿಂದ ಉದ್ಯೋಗದಲ್ಲಿ ಈ ಬಗ್ಗೆ ಸೂಕ್ತ ಸರ್ಕಾರಿ ಆದೇಶ ಹೊರಡಿಸತಕ್ಕದ್ದು.

7. ಸರ್ಕಾರ ಖಾಸಗಿ ವಲಯಗಳ ಸಂಸ್ಥೆಗಳೊಂದಿಗೆ ವ್ಯವಹರಿಸಿ ಅಂಗವಿಕಲರಿಗೆ ಉದ್ಯೋಗ ದೊರಕಿಸಿಕೊಡಲು ಸಹಕಾರಿಯಾಗತಕ್ಕದ್ದು.

ಎಫ್. ಸಕಾರಾತ್ಮಕ ಕ್ರಿಯೆ :

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಗುರುತಿಸಲಾಗಿರುವ ನೋಡಲ್ ಅಧಿಕಾರಿಗಳು ಅಂಗವಿಕಲರ ಕುಂದುಕೊರತೆಗಳನ್ನು ನಿರ್ದಿಷ್ಟ ಸಮಯದಲ್ಲಿ ಆಲಿಸಿ ಪರಿಹಾರ ನೀಡುವುದನ್ನು ಖಾತ್ರಿ ಪಡಿಸಿಕೊಳ್ಳತಕ್ಕದ್ದು.

2. ಎಲ್ಲಾ ಸಮುಚ್ಚಿತ ಸರ್ಕಾರಿ ಇಲಾಖೆಗಳು ಹಾಗೂ ಶಾಸನ ಬದ್ಧ ನಿಗಮಗಳು ಒಳಗೊಂಡಂತೆ ಈ ಕೆಳಕಂಡ ಸೌಲಭ್ಯಗಳಲ್ಲಿ ಅಂಗವಿಕಲರಿಗೆ ರಿಯಾಯಿತಿ ದರದಲ್ಲಿ ಆದ್ಯತೆ ಮೇಲೆ ಭೂಮಿ ಹಂಚಿಕೆಯಲ್ಲಿ ಶೇ. 3 ಕ್ಕಿಂತ ಕಡಿಮೆ ಇಲ್ಲದೆ ಯೋಜನೆಗಳನ್ನು ರೂಪಿಸುವಲ್ಲಿ ಖಾತ್ರಿಪಡಿಸುವುದು ಎ) ಮನೆ ಬಿ) ವ್ಯಾಪಾರ ಸ್ಥಾಪನೆ ಸಿ) ವಿಶೇಷ ಮನೋರಂಜನ ಕೇಂದ್ರಗಳ ಸ್ಥಾಪನೆ ಡಿ) ವಿಶೇಷ ಶಾಲೆಗಳ ಸ್ಥಾಪನೆ ಇ) ಸಂಶೋಧನಾ ಕೇಂದ್ರಗಳ ಸ್ಥಾಪನೆ ಎಫ್) ಅಂಗವಿಕಲ ಉದ್ಯಮಿಗಳಿಂದ ಕಾರ್ಖಾನೆ ಸ್ಥಾಪನೆ, ಶೇಕಡಾ 3ಕ್ಕಿಂತ ಕಡಿಮೆ ಇದ್ದ ಪ್ರಕರಣಗಳಲ್ಲಿ ಅದನ್ನು ಸರಿದೂಗಿಸಲು ಅವಶ್ಯವಿದ್ದಲ್ಲಿ ಪ್ರತ್ಯೇಕ ಹಂಚಿಕೆ ವಿಧಾನವನ್ನು ಅನುಸರಿಸಬಹುದು.

3. ಸಮುಚ್ಚಿತ ಸರ್ಕಾರಿ ಇಲಾಖೆಗಳು ಕೆಲವೊಂದು ಸಾರ್ವಜನಿಕ ಉಪಯೋಗಿತ ಇಲಾಖೆಗಳಲ್ಲಿ ಅಂಗವಿಕಲರ ಕುಂದುಕೊರತೆಗಳಿಗೆ ಪರಿಹಾರ ನೀಡಲು ಅತಿ ಶೀಘ್ರ ಸೇವೆ ನೀಡುವುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು., ಅಂತಹ ಇಲಾಖೆಗಳು ಈ ಬಗ್ಗೆ ಸುತ್ತೋಲೆಯನ್ನು ಹೊರಡಿಸತಕ್ಕದ್ದು, ಈ ಕೆಳಕಂಡ ಇಲಾಖೆಗಳು ಅಂಗವಿಕಲರಿಗೆ ಸಂಬಂಧಪಟ್ಟ ಪ್ರಕರಣಗಳನ್ನು ವಿಲೇವಾರಿ ಮಾಡಲು ಅತೀ ಶೀಘ್ರ ಸೇವೆ ಸೌಲಭ್ಯವನ್ನು ಒದಗಿಸತಕ್ಕದ್ದು :

   1. ಕಂದಾಯ ಇಲಾಖೆ
   2. ಶಿಕ್ಷಣ ಇಲಾಖೆ
   3. ಆರಕ್ಷಕ ಇಲಾಖೆ
   4. ಆರೋಗ್ಯ ಇಲಾಖೆ
   5. ನಗರಾಭಿವೃದ್ಧಿ ಇಲಾಖೆ
   6. ಸಾರಿಗೆ ಇಲಾಖೆ
   7. ವಸತಿ ಇಲಾಖೆ

4. ಬಡತನ ನಿರ್ಮೂಲನ ಯೋಜನೆಗಳಲ್ಲಿ ಸರ್ಕಾರವು ಅಂಗವಿಕಲರಿಗೆ ಕನಿಷ್ಟ ಶೇ. 3 ರಷ್ಟು ಮೀಸಲಾತಿ ಖಾತ್ರಿಪಡಿಸತಕ್ಕದ್ದು.

5. ಕೇಂದ್ರ ಅಧಿನಿಯಮದಡಿಯಲ್ಲಿ ಅಂಗವಿಕಲ ವ್ಯಕ್ತಿಗಳ ರಾಜ್ಯ ಆಯುಕ್ತರಿಗೆ ಸಮನ್ವಯ ಪ್ರಾಧಿಕಾರದ ಅಧಿಕಾರವನ್ನು ನೀಡಲಾಗಿರುವ ಕಾರಣ ಎಲ್ಲಾ ಇಲಾಖೆಗಳು ಹಾಗೂ ಏಜೆನ್ಸಿಗಳು ಅಂಗವಿಕಲರಿಗಾಗಿ ಯಾವುದೇ ಯೋಜನೆ ಹಾಗೂ ನೀತಿಯನ್ನು ನಿರ್ಮಿಸುವ ಮೊದಲು ರಾಜ್ಯ ಅಂಗವಿಕಲರ ಆಯುಕ್ತರ ಕಛೇರಿಯನ್ನು ಸಂಪರ್ಕಿಸುವುದು, ಅದೇ ರೀತಿಯಲ್ಲಿ ಅಂಗವಿಕಲ ವ್ಯಕ್ತಿಗಳನ್ನು ಅವರನ್ನು ಪ್ರತಿನಿಧಿಸುವ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸಂಪರ್ಕಿಸುವುದು ಅಗತ್ಯವಾಗಿದೆ. ಸರ್ಕಾರವು ದೃಢ ಹಾಗೂ ವಾಸ್ತವಿಕ ನೀತಿ ಹಾಗೂ ಕಾರ್ಯಕ್ರಮಗಳನ್ನು ಯೋಜಿಸಿ ಅನುಷ್ಠಾನಗೊಳಿಸಲು ಇಂತಹ ಪೂರಕ ವಿಚಾರ ವಿನಿಯಮ ಅವಶ್ಯವಾಗಿದೆ.

6. ಅಂಗವಿಕಲರ ಅಧಿನಿಯಮದ ಮೇರೆಗೆ ಯಾವುದೇ ವ್ಯಕ್ತಿಯು ಅಂಗವಿಕಲ ವ್ಯಕ್ತಿಗಳಿಗಾಗಿ ಯಾವುದೇ ಸಂಸ್ಥೆಯನ್ನು ನೋಂದಣಿ ಪ್ರಮಾಣ ಪತ್ರವಿಲ್ಲದೆ ಸ್ಥಾಪಿಸಬಾರದು ಅಥವಾ ನಿರ್ವಹಿಸಬಾರದು. ಈ ವಿಷಯವನ್ನು ಅಂಗವಿಕಲರಿಗೆ ಸಂಬಂಧಪಟ್ಟ ನೋಡಲ್ ಇಲಾಖೆ ಖಾತ್ರಿಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ.

**ಜಿ. ಸಮದೃಷ್ಟಿ :**

1. ಎಲ್ಲಾ ಸರ್ಕಾರಿ ಇಲಾಖೆಗಳು ಮತ್ತು ಶಾಸನ ಬದ್ಧ ನಿಗಮಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲರಿಗೆ ರಸ್ತೆ, ಸಾರಿಗೆ ಹಾಗೂ ಕಟ್ಟಡಗಳಲ್ಲಿ ಸಮದೃಷ್ಟಿ ಹೊಂದಲು ಕೇಂದ್ರ ಲೋಕೋಪಯೋಗಿ ಇಲಾಖೆ ನೀಡಿದ ಮಾರ್ಗಸೂಚಿಯಂತೆ ಪುರಸಭೆಗಳ ಮತ್ತು ಮುನಿಸಿಪಾಲಿಟಿಯ ಕಟ್ಟಡ ನಿರ್ಮಾಣ, ಕಾನೂನುಗಳನ್ನು ಸೂಕ್ತವಾಗಿ ಮಾರ್ಪಾಡು ಮಾಡತಕ್ಕದ್ದು.

2. ಉದ್ಯಾನವನಗಳಲ್ಲಿ, ಚಿತ್ರಮಂದಿರಗಳಲ್ಲಿ ಪ್ರಾರ್ಥನೆ ಸ್ಥಳಗಳಲ್ಲಿ ಹಾಗೂ ಸಾರ್ವಜನಿಕ ಸಭಾಂಗಣಗಳಲ್ಲಿ ತಡೆರಹಿತ ವಾತಾವರಣ ಕಲ್ಪಿಸುವುದು ಸಮುಚ್ಚಿತ ಇಲಾಖೆಗಳ ಜವಾಬ್ದಾರಿಯಾಗಿರುತ್ತದೆ.

3. ಸುಮಾರು ಅಂಗವಿಕಲರು ಶ್ರವಣದೋಷವುಳ್ಳ ವರ್ಗಕ್ಕೆ ಸೇರಿದ್ದು ಅವರ ಮೂಲಭೂತ ಹಕ್ಕುಗಳಿಗೆ ಗೌರವ ನೀಡಲು ಸಂಪರ್ಕ ವಿಧಾನ ಕಲ್ಪಿಸಬೇಕಾಗಿದೆ. ಶ್ರವಣದೋಷವುಳ್ಳ ವ್ಯಕ್ತಿಗಳ ಅನುಕೂಲಕ್ಕಾಗಿ ಎಲ್ಲಾ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಸನ್ನೆ ಭಾಷೆ ಅರ್ಥ ವಿವರಣೆ ನೀಡುವ ವ್ಯಕ್ತಿ ಹಾಜರಿರುವುದು ಸಮುಚ್ಚಿತ ಸರ್ಕಾರಿ ಉದ್ಯೋಗಿಗಳು ಖಾತ್ರಿ ಪಡಿಸಿಕೊಳ್ಳತಕ್ಕದ್ದು.

4. ಅಂಗವಿಕಲ ಅಧಿನಿಯಮ 1995ರ ಪ್ರಕಾರ ಯಾವುದೇ ಸಂಸ್ಥೆಯ ಸೇವೆಯಲ್ಲಿರುವಾಗ ಅಂಗವಿಕಲತೆ ಹೊಂದುವ ವ್ಯಕ್ತಿಯನ್ನು ಕೆಲಸದಿಂದ ತೆಗೆದು ಹಾಕತಕ್ಕದ್ದಲ್ಲ ಅಥವಾ ದರ್ಜೆಯಿಂದ ಇಳಿಸತಕ್ಕದ್ದಲ್ಲ. ಅಲ್ಲದೆ ಅಂಗವಿಕಲನೆಂಬ ಕಾರಣಕ್ಕಾಗಿ ಆ ವ್ಯಕ್ತಿಗೆ ಯಾವುದೇ ಬಡ್ತಿಯನ್ನು ನಿರಾಕರಿಸತಕ್ಕದ್ದಲ್ಲ. ಈ ವಿಷಯವನ್ನು ಸಮುಚ್ಚಿತ ಸರ್ಕಾರವು ಖಾತ್ರಿಪಡಿಸಿಕೊಳ್ಳತಕ್ಕದ್ದು.

**ಹೆಚ್. ಸಾಮಾಜಿಕ ಭದ್ರತೆ :**

1. ರಾಜ್ಯ ಸರ್ಕಾರವು ಹಣಕಾಸು ಮತ್ತು ಅಭಿವೃದ್ಧಿ ಮಿತಿಯೊಳಗೆ ಅಂಗವಿಕಲ ವ್ಯಕ್ತಿಗಳಿಗೆ ಅನುಕೂಲವಾಗುವಂತಹ ಒಂದು ವಿಮಾ ಯೋಜನೆಯನ್ನು ರೂಪಿಸತಕ್ಕದ್ದು.

2. ರಾಜ್ಯ ಸರ್ಕಾರವು ಸಾರ್ವಜನಿಕ ಖಾಸಗಿಯವರ ಸಹಭಾಗಿತ್ವದೊಂದಿಗೆ ಅಂಗವಿಕಲರ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸಲು ಒಂದು ಅಂಗವಿಕಲ ನಿಧಿ ಸ್ಥಾಪಿಸತಕ್ಕದ್ದು.

**ಐ. ಅನುಷ್ಠಾನ :**

1. ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಅಂಗವಿಕಲರ ಅಧಿನಿಯಮದ/ ನಿಯಮಗಳ ಅನುಷ್ಠಾನ ಪರಿಶೀಲಿಸಲು ಈಗಾಗಲೇ ರಚಿಸಿರುವ ನೋಡಲ್ ಸಮಿತಿಯು ಈ ಅಂಗವಿಕಲರ ಕಾರ್ಯನೀತಿಯ ಅನುಷ್ಠಾನವನ್ನೂ ಸಹ ಪರಿಶೀಲಿಸುವುದು.

2. ಅಂಗವಿಕಲರ ಅಧಿನಿಯಮ 95ನ್ನು ಅನುಷ್ಠಾನಗೊಳಿಸಲು ಸಂಬಂಧಿಸಿದ ಪ್ರತಿ ಇಲಾಖೆಯು ಪ್ರತ್ಯೇಕ ಆಯವ್ಯಯದೊಡನೆ ಪಂಚವಾರ್ಷಿಕ ಯೋಜನೆಯನ್ನು ತಯಾರಿಸುವುದು. ವಾರ್ಷಿಕ ಗುರಿ ಹಾಗೂ ಆರ್ಥಿಕ ಹಂಚಿಕೆಯನ್ನು ಸ್ಪಷ್ಟವಾಗಿ ನಮೂದಿಸುವುದು. ಸರ್ಕಾರದ ಯೋಜನಾ ಇಲಾಖೆ ಹಾಗೂ ಆರ್ಥಿಕ ಇಲಾಖೆಯು ಸದರಿ ಇಲಾಖೆಗಳಿಗೆ ಅಂಗವಿಕಲರ ಅಧಿನಿಯಮ 1995ರ ಅನುಷ್ಠಾನಕ್ಕೆ ಅಗತ್ಯವಿರುವ ಆಯವ್ಯಯವನ್ನು ಒದಗಿಸತಕ್ಕದ್ದು.

3. ಅಂಗವಿಕಲತೆಗೆ ಸಂಬಂಧಪಟ್ಟಂತಹ ಎಲ್ಲಾ ಮಾಹಿತಿಗಳನ್ನು ಮುದ್ರಣ, ಎಲೆಕ್ಟ್ರಾನಿಕ್ ಹಾಗೂ ಸಾಂಪ್ರದಾಯಿಕ ಸಂಪರ್ಕ ವಿಧಾನಗಳನ್ನು ಬಳಸಿ ಪ್ರಚಾರ ಮಾಡಲು ಒಂದು ಮಾಧ್ಯಮ ತಂತ್ರವನ್ನು ತಯಾರಿಸತಕ್ಕದ್ದು.

4. ಸರ್ಕಾರೇತರ ಸಂಸ್ಥೆಗಳಿಗೆ ಉತ್ತೇಜನ ನೀಡುವುದು ಹಾಗೂ ಮೇಲ್ವಿಚಾರಣೆ ಮಾಡುವುದು. ಸೇವೆ ಸಲ್ಲಿಸದೆ ಇರುವ ಪ್ರಾಂತ್ಯಗಳಲ್ಲಿ ಸರ್ಕಾರೇತರ ಸಂಸ್ಥೆಗಳ ಅಸಮತೋಲನವನ್ನು ಕಡಿಮೆಗೊಳಿಸುವಲ್ಲಿ ಕ್ರಮ ಕೈಗೊಳ್ಳುವುದು. ಸರ್ಕಾರೇತರ ಸಂಸ್ಥೆಗಳ ಮೇಲ್ವಿಚಾರಣೆ ಕಾರ್ಯವನ್ನು ಅಂಗವಿಕಲರ ಕಲ್ಯಾಣ ಇಲಾಖೆ ಹಾಗೂ ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರ ಕಛೇರಿಯು ಕೈಗೊಳ್ಳತಕ್ಕದ್ದು.

**ಆರ್.ಎಂ. ಚಂದ್ರಮ್ಮ**
ಸರ್ಕಾರದ ಅಧೀನ ಕಾರ್ಯದರ್ಶಿ–1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

## KARNATAKA STATE POLICY ON DISABILITY

### A. PREAMBLE

In the era of State wanting to reduce its role, it is necessary to remind ourselves that the State responsibility towards persons with disabilities is unequivocally enshrined in our Constitution. Article 41 of the Directive Principles of the State Policy, inter alia calls upon the State to make effective provisions for the welfare of persons with disabilities.

In Karnataka it is estimated that nearly 5-6 % of the population comprises persons with disabilities. Under the Persons with Disabilities Act 1995, the State is required to provide for rehabilitation, education, economic opportunities, barrier-free environment and other supporting services which facilitate the integration of persons with disabilities within the main stream of our national life.

The Karnataka State Policy on Disability is a response to the objectives enshrined in the Persons with Disabilities Act 1995 and is evolved to create a synergy amongst all concerned stake holders, Departments and Agencies in implementing the provisions of the Act in letter and spirit.

The Women & Child Development Department will be the Nodal Department and the office of the Commissioner for Persons with Disabilities will Co-ordinate and monitor the programmes and schemes for persons with disabilities and take steps to safeguard the rights of persons with Disabilities.

### B. OBJECTIVES OF THE POLICY

1. The objective of the State policy is to ensure implementation of the legislations related to persons with disabilities.
2. Multi-sectoral coordination amongst concerned agencies for prevention and early detection of disabilities.
3. Promotion of education as well as enrollment of children with disabilities in mainstream schools and to formulate a comprehensive education scheme as enshrined in the Disabilities Act.
4. Promotion of self-employment amongst persons with disabilities with special focus on Government agencies, which create opportunities for disabled entrepreneurs to provide services within the various Government agencies and Departments.
5. Effective implementation of various departmental schemes to promote the development of persons with disabilities.

6. Effective implementation and monitoring of rehabilitation schemes (schemes under the State Government and the Govt. of India).
7. Ensure non-discrimination of persons with disabilities in transport, on the road, built in environment and in Government & Private services.
8. Ensure qualitative services are provided by the voluntary sector in the field of disabilities.

## C. PREVENTION AND EARLY DETECTION OF DISABILITIES

1. Since prevention & early detection go a long way in controlling the occurrence and elimination of disabilities, it should be the primary function of the appropriate Government Departments to co-ordinate and make concerted efforts to survey, investigate and research the causes of disabilities.
2. The Health Department shall monitor corrective surgeries and encourage orthopedic surgeons to undertake the same at the District hospitals.
3. Non-availability of medicines for the mentally ill and hemophilic persons is a major problem as the majority of them are economically backward and unable to procure the needed medications. Therefore the Government should ensure that some budgetary provisions are made to provide the necessary drugs at subsidized rates for the needy.
4. Availability of Physiotherapy and other related services in Government hospitals at the taluk as and the districts is a must as they go a long way in rehabilitation of persons with disabilities.
5. The Medical education curriculum shall include prevention and identification of disabilities as one of the subject/topics for the study of medical graduates.

## D. EDUCATION

1. The Government shall ensure that every child with disabilities has access to free education until the attainment of eighteen years of age as is mandated in the Persons with Disabilities Act 1995.
2. The Education department shall also endeavor to promote inclusive education in an appropriate environment for the persons with disabilities.
3. The appropriate departments shall take steps to modify the syllabus especially for the benefit of disabled students and also restructure the curriculum to facilitate learning among the visually and hearing impaired.
4. The appropriate Government shall also provide free uniform and book schemes for disabled students studying through class 10th.

5. All educational institutions are not disabled friendly in terms of access and therefore it is imperative for the appropriate Government Department to ensure barrier-free environment in all educational institutions.

6. The Disabilities Act 1995 makes it mandatory to frame a comprehensive education scheme as elaborated in section 30 of the said Act. The Education Department shall frame a scheme accordingly.

7. Relaxation of Education Qualification for admission to colleges/universities, or selections to various posts based on Anjali Arora's case decision: In a case that sets precedence, Anjali Arora challenged the Constitutional validity of the rejection of her candidature by the NTPC Ltd., for the post of Assistant Law Officer as here educational qualification did not meet the criteria.

   In terms of OM No: 14026/1/85-Estt.(SCT) Dept. Personnel and Training, Govt. of India dated 04-09-1995, candidates belonging to physically handicapped category are also legally entitled to the same benefits/relaxations as other reserved quotas.

   The Court passed an order on 15-7-03 directing the NTPC Ltd to give relaxation to physically handicapped candidates as is available to scheduled caste/ scheduled tribe candidates in educational qualification i.e. pass marks. Hence in Karnataka, educational qualification for admission to colleges/universities, selection to various posts for disabled persons may be relaxed just like in case of other reserved categories (SC/ST).

## E. EMPLOYMENT

1. Every Department in the Government shall take steps to identify and notify group A & B posts in various departments that could be reserved for persons with disabilities.

2. Certain relaxation in working hours is necessary for persons with disabilities employed in Government and Government-aided institutions as they have serious mobility problems. The Labour Department shall formulate schemes including flexi-time for the disabled employees.

3. Transfers away from their hometowns to other places which are lacking in rehabilitation facilities is causing mobility constraints and dislocation in the families of disabled employees. Since persons with disabilities are largely dependent on their family members, it shall be the responsibility of the Department of Personnel and Administrative Reforms to evolve a transfer policy, which shall cause least disruption during their service.

4. Self-employment is a viable option for the disabled provided they are assured of reasonable financial returns. Since the open market is highly competitive, it is

necessary for the Government to create a demand within its sector by identifying those goods and services that could be patronized by various Government agencies and place orders for the same.

5. Vocational training for the disabled should be restructured and therefore institutions providing vocational training should include training in those vocations, which provide job opportunities for persons with disabilities.

6. Section 47 of the Persons with Disabilities Act 1995 ensures non-discrimination in employment. Suitable government order shall be issued to that effect.

7. The Government shall initiate dialogue with private sector organizations to help persons with disabilities in getting employment.

**F. AFFIRMATIVE ACTION**

1. The Deputy Commissioner in the district shall ensure that the Nodal officers already identified in the districts and the taluk shall hear the grievances of persons with disabilities and redress the same within a stipulated time frame.

2. All appropriate Government Departments including statutory corporations shall develop schemes to ensure that whilst land/stalls are allotted for a) house b) setting up of business c) Setting up of special recreation centres d) establishment of special schools e) establishment of research centres f) establishment of factories by entrepreneurs with disabilities, they shall incorporate in their schemes preferential allotment of land at concessional rates to the persons with disabilities to the extent of not less than 3% of the total allotment. For this purpose if necessary a separate allotment procedure could be gone through to make up the short fall if any.

3. Appropriate Government Departments shall ensure that some of the public utility departments provide fast track services in redressing the grievances of disabled persons. Such departments shall issue a circular to that effect. The following departments shall provide fast track services in disposing of the cases related to persons with disabilities;

   1. Revenue
   2. Education
   3. Police
   4. Health
   5. Urban development
   6. Transport
   7. Housing



9

4. The government shall ensure that in all poverty alleviation schemes, there shall be minimum of 3% reservation for persons with disabilities.

5. Since the Commissioner for Disabilities is vested with the powers to act as a coordinating authority under the Central Act, all the departments and agencies of the government shall consult the Office of the State Commissioner for Disabilities before framing any scheme or policy for the disabled. Similarly it is imperative to consult disabled persons themselves through the voluntary organizations who are their representatives. This feedback is required to ensure that sound and practical policies as well as programs are planned and executed by the Government.

6. It shall be the responsibility of the Nodal department dealing with disability to ensure that no person shall establish or maintain an institution for persons with Disabilities except in accordance with a certificate of registration as provided under the Persons with disabilities Act.

## G. NON – DISCRIMINATION

1. All Government Departments, Statutory corporations and local authorities shall take steps to ensure non-discrimination of persons with disabilities on the road, transport and in the built in environment by implementing the CPWD guide lines and suitably amending the building bye-laws of the Municipal corporations and municipalities.

2. Creating barrier-free access in places like parks, cinema theatres, places of worship and auditoriums/public halls shall be the responsibility of appropriate departments.

3. Since considerable number of persons come under the category of hearing impairment, providing communication access is tantamount to honoring their fundamental rights. Appropriate Government officials shall ensure that at all public functions a sign language interpreter be present for the benefit of persons with hearing impairment.

4. In accordance with the provisions of the Persons with Disabilities Act 1995, all Government Departments shall ensure that no establishment shall dispense with, or reduce in rank, an employee who acquires a disability during his service. So also no promotion shall be denied on the basis of his/her disability.

## H. SOCIAL SECURITY

1. State Government shall within the limits of their economic capacity & development frame an insurance scheme for the benefit of persons with disabilities.

2. The State Government shall also set up a "Disability Fund " for implementation of schemes for the welfare of the disabled through public private participation.

## I. IMPLEMENTATION:

1. The Nodal Committee constituted under the Chairmanship of the Additional Chief Secretary, Govt. of Karnataka for reviewing the implementation of Persons with Disabilities Act 1995/Rules will also be the Nodal Committee to review the implementation of the State Policy for persons with disabilities.

2. A five year perspective plan will be prepared by each department associated with the implementation of Persons with Disabilities Act 1995 earmarking separate budgetary allocations. Annual targets will be set with financial allocation clearly indicated. The Planning department and the Finance Department will facilitate budgetary provisions required for implementation to the concerned departments.

3. A media strategy will be prepared for dissemination of information using the print, electronic media and traditional communication methods regarding all the aspects concerning disabilities.

4. Promotion and monitoring of Non-Governmental organizations (NGOs). Action to be taken to reduce the imbalances in the development of NGOs in the un-serviced and inaccessible areas. The monitoring of the work of NGOs will be taken up by the Department of Welfare of Disabled and the State Commissioner for Persons with Disabilities.

**R.M. CHANDRAMMA**
Under Secretary to Government,
Women and Child Development Department.



10

# ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995.

## 1996 ರ 1

**1ನೇ ಜನವರಿ, 1996**

# ಭಾರತೀಯ ರಾಜ್ಯ ಪತ್ರ

ವಿಶೇಷ

ಭಾಗ 2 ಕಂಡ 1

ಪ್ರಾಧಿಕಾರದಿಂದ ಪ್ರಕಾಶಿತ

ನವದೆಹಲಿ, ಸೋಮವಾರ, ಜನವರಿ 1, 1996, ಪೌಷ II, 1917

*ಈ ಭಾಗಕ್ಕೆ ಪ್ರತ್ಯೇಕ ಪುಟ ಸಂಖ್ಯೆಗಳನ್ನು ಒದಗಿಸಿದ್ದು ಇದರಿಂದಾಗಿ ಇದನ್ನು ಪ್ರತ್ಯೇಕ ಸಂಕಲನವಾಗಿಡಲು ಸಾಧ್ಯವಾಗುತ್ತದೆ.*


*ಕಾನೂನು ನ್ಯಾಯ ಹಾಗೂ ಕಂಪನಿ ವ್ಯವಹಾರಗಳ ಮಂತ್ರಾಲಯ*

(ಶಾಸಕಾಂಗ ವಿಭಾಗ)

ನವದೆಹಲಿ 1 ಜನವರಿ 1996 /ಪೌಷ II, 1997 (ಶಕ)

ಈ ಕೆಳಕಂಡ ಸಂಸತ್ತಿನ ಅಧಿನಿಯಮವು ರಾಷ್ಟ್ರಪತಿಯ ಅನುಮೋದನೆಯನ್ನು ದಿನಾಂಕ 1 ಜನವರಿ 1996 ರಂದು ಪಡೆದು ಈ ಮೂಲಕ ಸಾಮಾನ್ಯ ಮಾಹಿತಿಗಾಗಿ ಪ್ರಕಟಿಸಲಾಗಿದೆ.

## *ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995*

ಕ್ರಮಾಂಕ 1 1996

ಏಷ್ಯಾ ಮತ್ತು ಪೆಸಿಫಿಕ್ ಪ್ರಾಂತಗಳಲ್ಲಿ ಅಂಗವಿಕಲ ವ್ಯಕ್ತಿಗಳ ಪೂರ್ಣ ಭಾಗವಹಿಸುವಿಕೆ ಮತ್ತು ಸಮಾನತೆಯ ಮೇಲಿನ ಉದ್ಘೋಷಣೆಯನ್ನು ಜಾರಿಗೆ ತರುವ ಅಧಿನಿಯಮ

ಏಷಿಯ ಮತ್ತು ಫೆಸಿಫಿಕ್ ಅಂಗವಿಕಲ ವ್ಯಕ್ತಿಗಳ ದಶಕದ (1993-2002) ಪ್ರಾರಂಭದ ಅಂಗವಾಗಿ ಏಶಿಯ ಮತ್ತು ಫೆಸಿಫಿಕ್ ಆರ್ಥಿಕ ಮತ್ತು ಸಾಮಾಜಿಕ ಆಯೋಗ 1992 ರ ಡಿಸೆಂಬರ್ 1 ರಿಂದ 5ರವರೆಗೆ ಬೀಜಿಂಗ್‌ನಲ್ಲಿ ನಡೆಸಿದ ಸಭೆಯಲ್ಲಿ ಏಷಿಯ ಮತ್ತು ಫೆಸಿಫಿಕ್ ಪ್ರಾಂತದಲ್ಲಿ ಅಂಗವಿಕಲ ವ್ಯಕ್ತಿಗಳ ಪೂರ್ಣ ಭಾಗವಹಿಸುವಿಕೆ ಮತ್ತು ಸಮಾನತೆ ಬಗ್ಗೆ ಉದ್ಘೋಷಣೆಯನ್ನು ಅಂಗೀಕರಿಸಲಾಗಿರುವುದರಿಂದ,

ಸದರಿ ಉದ್ಘೋಷಣೆಗೆ ಭಾರತವು ಸಹ ರುಜು ಮಾಡಿರುವುದರಿಂದ ;

ಮೇಲೆ ಹೇಳಿದ ಉದ್ಘೋಷಣೆಯನ್ನು ಜಾರಿಗೆ ತರುವುದು ಆಗತ್ಯವೆಂದು ಭಾವಿಸಿರುವುದರಿಂದ ;

ಭಾರತ ಗಣರಾಜ್ಯದ ನಲವತ್ತಾರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿಸಲಾಗಿದೆ.

## ಅಧ್ಯಾಯ – I
## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ**

1. ಈ ಅಧಿನಿಯಮವನ್ನು ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣಭಾಗವಹಿಸುವಿಕೆ) ಅಧಿನಿಯಮ, ೧೯೯೫ ಎಂದು ಕರೆಯತಕ್ಕದ್ದು.

2. ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ಅನ್ವಯವಾಗತಕ್ಕದ್ದು.

3. ಇದು, ಕೇಂದ್ರ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು :**

2. ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,

(ಎ) ಸಮುಚಿತ ಸರ್ಕಾರ ಎಂದರೆ–

1. ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂತೆ ಅಥವಾ ಆ ಸರ್ಕಾರದ ಮೂಲಕ ಸಂಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸು ನೆರವು ಪಡೆದಿರುವ ಯಾವುದೇ ಸಂಸ್ಥೆ, ಅಥವಾ ದಂಡು ಪ್ರದೇಶ ಅಧಿನಿಯಮ, 1924ರ ಮೇರೆಗೆ ರಚಿತವಾದ ದಂಡು ಪ್ರದೇಶದ ಮಂಡಲಿ ಸಂಬಂದದಲ್ಲಿ ಕೇಂದ್ರ ಸರ್ಕಾರ ;

2. ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಂತೆ ಅಥವಾ ಆ ಸರ್ಕಾರದಿಂದ ಸಂಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸು ನೆರವು ಪಡೆದಿರುವ ಯಾವುದೇ ಸಂಸ್ಥೆ, ಅಥವಾ ದಂಡು ಪ್ರದೇಶ ಮಂಡಲಿಯನ್ನು ಹೊರತುಪಡಿಸಿ, ಯಾವುದೇ ಸ್ಥಳೀಯ ಪ್ರಾಧಿಕಾರ ಸಂಬಂಧದಲ್ಲಿ ರಾಜ್ಯ ಸರ್ಕಾರ ;

3. ಕೇಂದ್ರ ಸಮನ್ವಯ ಸಮಿತಿ ಮತ್ತು ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಸಂಬಂದದಲ್ಲಿ, ಕೇಂದ್ರ ಸರ್ಕಾರ;

4. ರಾಜ್ಯ ಸಮನ್ವಯಸಮಿತಿ ಮತ್ತು ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಸಂಬಂದದಲ್ಲಿ, ರಾಜ್ಯ ಸರ್ಕಾರ;

(ಬಿ) "ಅಂಧತ್ವ" ಎಂದರೆ ಒಬ್ಬ ವ್ಯಕ್ತಿಯು ಈ ಕೆಳಕಂಡ ದೋಷಗಳ ಪೈಕಿ ಯಾವುದಾದರು ಒಂದರಿಂದ ಬಳಲುತ್ತಿರುವುದು; ಎಂದರೆ :

(1) ಸಂಪೂರ್ಣ ದೃಷ್ಟಿಹೀನತೆ; ಅಥವಾ

(2) ಕನ್ನಡಕ ಹಾಕಿಕೊಂಡಾಗ ಕಣ್ಣಿನ ದೃಷ್ಟಿ ಸರಿಯಾದ ಕಣ್ಣಿನ ದೃಷ್ಟಿ 6/60 ಅಥವಾ 20/200 (ಸ್ನೆಲೇನ್)ಕ್ಕಿಂತ ಮೀರದ್ದಾಗಿರುವುದು; ಅಥವಾ

(3) ಕಣ್ಣಿನ ದೃಷ್ಟಿ ಎಲ್ಲಿಯವರೆಗೆ ಕಾಣುವುದೂ ಆ ದೂರದ ಮಿತಿ 20 ಡಿಗ್ರಿ ಕೋನದಷ್ಟು ಕಾಣುತ್ತಿರುವುದು ಅಥವಾ ಅದಕ್ಕಿಂತ ತೀರಾ ಕಡಿಮೆ ಇರುವುದು ;

(ಸಿ) "ಕೇಂದ್ರ ಸಮನ್ವಯ ಸಮಿತಿ" ಎಂದರೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿಸಲಾದ ಕೇಂದ್ರ ಸಮನ್ವಯ ಸಮಿತಿ ;

(ಡಿ) "ಕೇಂದ್ರ ಕಾರ್ಯ ನಿರ್ವಾಹಕ ಸಮಿತಿ" ಎಂದರೆ ೯ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ರಚಿಸಲಾದ ಕೇಂದ್ರ ಕಾರ್ಯನಿರ್ವಾಹಕ ಸಮಿತಿ;

(ಇ) "ಮಿದುಳಿನ ಪಾರ್ಶ್ವವಾಯು (ಸೆರೆಬ್ರಲ್ ಪಾಲ್ಸಿ)ಎಂದರೆ ಜನನಕ್ಕೆ ಮೊದಲೇ, ಗರ್ಭಾವಸ್ಥೆಯನ್ನು ಅಥವಾ ಶೈಶಾವಸ್ಥೆಯ ಬೆಳವಣಿಗೆ ಅವಧಿಯಲ್ಲಿ ಉಂಟಾಗುವ ಮಿದುಳಿನ ಹೀನಾಯ ಸ್ಥಿತಿ ಅಥವಾ ಗಾಯಗಳ ಪರಿಣಾಮವಾಗಿ ಅಸಾಮಾನ್ಯ ಚಲನಾ ನಿಯಂತ್ರಣ ಸ್ಥಿತಿಯ ಲಕ್ಷಣದಿಂದಾಗಿ ವ್ಯಕ್ತಿಯ ಪ್ರಗತಿ ರಹಿತ ಪರಿಸ್ಥಿತಿಗಳ ವಿನ್ಯಾಸ.

(ಎಫ್) "ಮುಖ್ಯ ಆಯುಕ್ತರು ಎಂದರೆ 57ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಮುಖ್ಯ ಆಯುಕ್ತರು.

(ಜಿ) "ಆಯುಕ್ತರು ಎಂದರೆ 60ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ನೇಮಕಗೊಂಡ ಆಯುಕ್ತರು:

(ಹೆಚ್) "ಸಕ್ಷಮ ಪ್ರಾಧಿಕಾರ" ಎಂದರೆ 50ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರಾಧಿಕಾರ ;

(ಐ) "ಅಂಗವಿಕಲತೆ" ಎಂದರೆ :–

(1i) ಅಂಧತ್ವ

(2) ಮಂದದೃಷ್ಟಿ

(3) ಕುಷ್ಠರೋಗ ನಿವಾರಿತರಾದ

(4) ಶ್ರವಣದೋಷವುಳ್ಳವರು

(5) ಚಲನವಲನ ಅಂಗವಿಕಲತೆ

(6) ಬುದ್ಧಿಮಾಂದ್ಯತೆ

(7) ಮಾನಸಿಕ ಅಸ್ವಸ್ಥತೆ

ಜೆ) ಉದ್ಯೋಗದಾತ ಎಂದರೆ :

ಸರ್ಕಾರದ ಸಂಬಂದದಲ್ಲಿ, ಈ ಸಂಬಂದವಾಗಿ ಇಲಾಖೆಯ ಮುಖ್ಯಸ್ಥರಿಂದ ಅಧಿಸೂಚಿತವಾದ ಪ್ರಾಧಿಕಾರ ಅಥವಾ ಅಂತಹ ಪ್ರಾಧಿಕಾರ ಅಧಿಸೂಚಿತವಾಗಿಲ್ಲದಿರುವಲ್ಲಿ, ಇಲಾಖಾ ಮುಖ್ಯಸ್ಥರು; ಮತ್ತು

(2) ಒಂದು ಕಾರ್ಯ ಸಂಸ್ಥೆಯ ಸಂಬಂಧದಲ್ಲಿ, ಆ ಕಾರ್ಯ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,

(ಕೆ) "ಕಾರ್ಯ ಸಂಸ್ಥೆ" ಎಂದರೆ ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ, ಅಥವಾ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಕಂಪನಿಗಳ ವಿಧಿನಿಯಮ, 1995ರ 617ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ ಸರ್ಕಾರಿ ಕಂಪನಿ ಸ್ವಾಮ್ಯದಲ್ಲಿ ಅಥವಾ ನಿಯಂತ್ರಣದಲ್ಲಿ ಅಥವಾ ಅವುಗಳಿಂದ ಸಹಾಯಧನ ಪಡೆಯುತ್ತಿರುವ ನಿಗಮ ಮತ್ತು ಸರ್ಕಾರದ ಇಲಾಖೆಗಳೂ ಸೇರುತ್ತವೆ ;

(ಎಲ್) "ಶ್ರವಣದೋಷವುಳ್ಳವರು" ಎಂದರೆ ಪರಸ್ಪರ ಮಾತನಾಡುವಂಥ ಸಂದರ್ಭದಲ್ಲಿ ಶಬ್ದ ತರಂಗವನ್ನು ಸರಿಯಾಗಿರುವ ಕಿವಿ ಗ್ರಹಿಸುವಾಗ ಅರವತ್ತು ಡೆಸಿಬಲ್ ಅಥವಾ ಅದಕ್ಕೂ ಹೆಚ್ಚು ಸಾಮರ್ಥ್ಯವನ್ನು ಕಳೆದುಕೊಂಡಿರುವುದು;

(ಎಂ) "ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಸಂಸ್ಥೆ" ಎಂದರೆ ಅಂಗವಿಕಲ ವ್ಯಕ್ತಿಗಳನ್ನು ಸ್ವೀಕಾರಮಾಡಿಕೊಳ್ಳುವ, ಅವರನ್ನು ಸಂರಕ್ಷಣೆ ಮಾಡುವ, ಶಿಕ್ಷಣ ತರಬೇತಿ ನೀಡುವ, ಪುನರ್ ವ್ಯವಸ್ಥೆ ಕಲ್ಪಿಸುವ ಅಥವಾ ಯಾವುದೇ ಇತರ ಸೇವೆಗಾಗಿ ಇರುವಂಥ ಸಂಸ್ಥೆ.

(ಎನ್) "ಕುಷ್ಠರೋಗ ಗುಣವಾಗಿರುವ ವ್ಯಕ್ತಿ" ಎಂದರೆ ಕುಷ್ಠರೋಗವು ಗುಣವಾಗಿರುವ ಆದರೆ ಈ ಮುಂದಿನವುಗಳಿಂದ ತೊಂದರೆ ಪಡುತ್ತಿರುವ ವ್ಯಕ್ತಿ.

(1) ಕೈ ಅಥವಾ ಕಾಲುಗಳಲ್ಲಿ ಸಂವೇದನಾ ಶಕ್ತಿಯನ್ನು ಕಳೆದುಕೊಂಡಿರುವುದು ಮತ್ತು ಕಣ್ಣು ಅಥವಾ ಕಣ್ಣು ರೆಪ್ಪೆಗಳಲ್ಲಿ ಅರೆ ಪಾರ್ಶ್ವವಾಯು ಉಂಟಾಗಿರುವುದು ಆದರೆ ಕಣ್ಣಿನ ದೃಷ್ಟಿ ಗೋಚರ ವಿಕಾರ ಇಲ್ಲದಿರುವುದು.

(2) ಕಣ್ಣು ಸ್ಪಷ್ಟವಾಗಿ ಕಾಣಿಸದೆ ಮತ್ತು ಅರೆ ಪಾರ್ಶ್ವವಾಯು ಉಂಟಾಗಿರುವ ಆದರೆ ದೈನಂದಿನ ದುಡಿಮೆಯ ಚಟುವಟಿಕೆಗಳಲ್ಲಿ ನಿರತವಾಗಲು ಅವರಿಗೆ ಸಾಧ್ಯವಾಗುವಂತೆ ಅವರ ಕೈಕಾಲುಗಳಲ್ಲಿ ಸಾಕಷ್ಟು ಚಲನಶೀಲತೆ ಇರುವಂಥ ವ್ಯಕ್ತಿ.

(3) ವಿಪರೀತ ಅಂಗವಿಕಾರವಾಗಿರುವುದು ಹಾಗೂ ವಯಸ್ಸಾದಂತೆ ಯಾವುದೇ ಲಾಭದಾಯಕ ವೃತ್ತಿ ಕೈಗೊಳ್ಳಲು ಸಾಧ್ಯವಾಗದಿರುವುದು ಮತ್ತು ಕುಷ್ಠರೋಗ ಗುಣವಾಗಿರುವ ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(ಓ) "ಚಲನ ವಲನ ವಿಕಲತೆ" ಎಂದರೆ ಮೂಳೆಗಳು, ಕೀಲುಗಳು ಅಥವಾ ಮಾಂಸಖಂಡಗಳ ದೋಷದಿಂದಾಗಿ ಅವಯವಗಳ ಚಲನೆಗೆ ಸಾಕಷ್ಟು ತೊಂದರೆಯಾಗಿರುವುದು ಅಥವಾ ಯಾವುದೇ ರೀತಿಯ ಮೆದುಳಿನ ಪಾರ್ಶ್ವವಾಯುವಿಗೆ ಒಳಗಾಗಿರುವುದು.

(ಪಿ) "ವೈದ್ಯಕೀಯ ಪ್ರಾಧಿಕಾರ" ಎಂದರೆ ಸಮುಚಿತ ಸರ್ಕಾರದಿಂದ ಅಧಿಸೂಚನೆ ಮೂಲಕ ಈ ಅಧಿನಿಯಮದ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಿರುವ ಯಾವುದೇ ಆಸ್ಪತ್ರೆ ಅಥವಾ ಸಂಸ್ಥೆ.

(ಕ್ಯೂ) "ಮಾನಸಿಕ ಅಸ್ವಸ್ಥತೆ" ಎಂದರೆ ಮನೋವಿಕಲತೆಯನ್ನು ಹೊರತು ಪಡಿಸಿ ಯಾವುದೇ ಮಾನಸಿಕ ಅಸ್ವಸ್ಥತೆ

(ಆರ್) "ಬುದ್ಧಿ ಮಾಂದ್ಯತೆ" ಎಂದರೆ ಒಬ್ಬ ವ್ಯಕ್ತಿಯ ಮಾನಸಿಕ ಬೆಳವಣಿಗೆ ಕುಂಠಿತ ಅಥವಾ ಅಪೂರ್ಣವಾಗಿದ್ದರೆ ಅಂದರೆ

ಬುದ್ಧಿಶಕ್ತಿಯ ಮಟ್ಟ ಸಾಧಾರಣ ಮಟ್ಟಕ್ಕಿಂತಲೂ ಕಡಿಮೆ ಇರುವ ಸ್ಥಿತಿ

(ಎಸ್) "ಅಧಿಸೂಚನೆ" ಎಂದರೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ಅಧಿಸೂಚನೆ

(ಟಿ) "ಅಂಗವಿಕಲ ವ್ಯಕ್ತಿ" ಎಂದರೆ, ವೈದ್ಯಕೀಯ ಪ್ರಾಧಿಕಾರವು ಪ್ರಮಾಣೀಕರಿಸಿದ ರೀತಿಯಲ್ಲಿ ಯಾವುದೇ ಅಂಗವಿಕಲತೆಯು ಶೇಕಡ ೪೦ ಕ್ಕಿಂತ ಕಡಿಮೆ ಇರದಂತೆ ಅದರಿಂದ ಬಳಲುತ್ತಿರುವ ವ್ಯಕ್ತಿ.

(ಯು) "ಮಂದ ದೃಷ್ಟಿಯಿರುವಂಥ ವ್ಯಕ್ತಿ" ಎಂದರೆ ಚಿಕಿತ್ಸೆಯಾದ ಮೇಲೂ ಅಥವಾ ಉತ್ತಮ ವಿಧಾನದಿಂದ ಅಸಮಕೋನವನ್ನು ಸರಿಪಡಿಸಿಯಾದ ಮೇಲೂ ಆದರ ಒಂದು ಕೆಲಸವನ್ನು ಯೋಜಿಸುವುದಕ್ಕೆ ಅಥವಾ ಮಾಡುವುದಕ್ಕೆ ಕಣ್ಣಿನ ಶಕ್ತಿಯನ್ನು ಬಳಕೆ ಮಾಡುತ್ತಿರುವ ಅಥವಾ ಬಳಕೆ ಮಾಡುವುದಕ್ಕೆ ಸಾಮರ್ಥ್ಯ ಇದ್ದು ದುರ್ಬಲ ದೃಷ್ಟಿ ಸಾಮರ್ಥ್ಯ ಇರುವಂಥ ವ್ಯಕ್ತಿ.

(ವಿ) "ಗೊತ್ತುಪಡಿಸಿರುವ" ಎಂದರೆ ಈ ಅಧಿನಿಯಮದ ಮೇರೆ ರಚಿಸಲಾದ ನಿಯಮಗಳ ಮೂಲಕ ಗೊತ್ತುಪಡಿಸಿರುವುದು.

(ಡಬ್ಲ್ಯು) "ಪುನರ್ವಸತಿ" ಇದು ಅಂಗವಿಕಲ ವ್ಯಕ್ತಿಗಳು ಅವರ ದೈಹಿಕ, ಜ್ಞಾನವಾಹಕ, ಬುದ್ಧಿಗ್ರಾಹ್ಯ, ಸೈಕಿಯ್ಯಾಟ್ರಿಕ್ ಅಥವಾ ಸಾಮಾಜಿಕ ಕಾರ್ಯಮಟ್ಟಗಳನ್ನು ಕಾಪಾಡಿಕೊಳ್ಳಲು ಸಾಧ್ಯವಿರುವಂಥ ಉದ್ದೇಶದಿಂದ ಕೂಡಿರಬೇಕು.

(ಎಕ್ಸ್) "ವಿಶೇಷ ಉದ್ಯೋಗ ವಿನಿಮಯ ಕೇಂದ್ರ" ಎಂದರೆ ರಿಜಿಸ್ಟರ್‌ಗಳನ್ನು ಇಡುವುದರ ಮೂಲಕವೇ ಅಥವಾ ಇತರೆ ರೀತಿಯಲ್ಲಿ ಈ ಮುಂದಿನ ಮಾಹಿತಿಗಳನ್ನು ಸಂಗ್ರಹಿಸಲು ಮತ್ತು ಒದಗಿಸುವುದಕ್ಕಾಗಿ ಸರ್ಕಾರವು ಸ್ಥಾಪಿಸುವ ಮತ್ತು ನಿರ್ವಹಿಸುವ ಯಾವುದೇ ಕಚೇರಿ ಅಥವಾ ಸ್ಥಳ, ಅಂದರೆ

1) ಅಂಗವಿಕಲರಾಗಿರುವ ವ್ಯಕ್ತಿಗಳ ಪೈಕಿ ನೌಕರರನ್ನಾಗಿ ನೇಮಕ ಮಾಡಿಕೊಳ್ಳ ಬಯಸುವ ವ್ಯಕ್ತಿಗಳು

2) ನೌಕರಿಯನ್ನು ಬಯಸುವ ಅಂಗವಿಕಲ ವ್ಯಕ್ತಿಗಳು

3) ನೌಕರಿ ಬಯಸಿದ ಅಂಗವಿಕಲ ವ್ಯಕ್ತಿಗಳನ್ನು ನೇಮಕ ಮಾಡಬಹುದಾದ ಖಾಲಿ ಸ್ಥಾನಗಳು.

(ವೈ) "ರಾಜ್ಯ ಸಮನ್ವಯ ಸಮಿತಿ" ಎಂದರೆ 13ನೇ ಪ್ರಕರಣದ (1ನೇ) ಉಪ-ಪ್ರಕರಣದ ಮೇರೆಗೆ ರಚಿತವಾದ ರಾಜ್ಯ ಸಮನ್ವಯ ಸಮಿತಿ

(ಜಡ್) "ರಾಜ್ಯ ಕಾರ್ಯನಿರ್ವಾಹಕ ಸಮಿತಿ" ಎಂದರೆ 19ನೇ ಪ್ರಕರಣದ (1ನೇ) ಉಪ-ಪ್ರಕರಣದ ಮೇರೆಗೆ ರಚಿತವಾದ ರಾಜ್ಯ ಕಾರ್ಯನಿರ್ವಾಹಕ ಸಮಿತಿ.

## ಅಧ್ಯಾಯ – II
## ಕೇಂದ್ರ ಸಮನ್ವಯ ಸಮಿತಿ

**3. ಕೇಂದ್ರ ಸಮನ್ವಯ ಸಮಿತಿ**

1) ಕೇಂದ್ರ ಸರ್ಕಾರವು ಅಧಿಸೂಚನೆ ಮೂಲಕ ಈ ಅಧಿನಿಯಮದ ಮೇರೆಗೆ ಆ ಸಮಿತಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ವಹಿಸಲಾದ ಪ್ರಕಾರ್ಯಗಳನ್ನು ನಿರ್ವಹಿಸಲು ಕೇಂದ್ರ ಸಮನ್ವಯ ಸಮಿತಿ ಎಂದು ಕರೆಯುವ ಒಂದು ಮಂಡಲಿಯನ್ನು ರಚಿಸತಕ್ಕದ್ದು.

(2) ಕೇಂದ್ರ ಸಮನ್ವಯ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು.

(ಎ) ಕೇಂದ್ರ ಸರ್ಕಾರದ ಕಲ್ಯಾಣ ಇಲಾಖೆಯ ಸಚಿವರು ಪದನಿಮಿತ್ತ ಅಧ್ಯಕ್ಷರು.

(ಬಿ) ಕೇಂದ್ರ ಸರ್ಕಾರದ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು, ಪದನಿಮಿತ್ತ ಉಪಾಧ್ಯಕ್ಷರು

(ಸಿ) ಕಲ್ಯಾಣ, ಶಿಕ್ಷಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ವೆಚ್ಚ, ಸಿಬ್ಬಂದಿ, ತರಬೇತಿ ಮತ್ತು ಸಾರ್ವಜನಿಕ ಕುಂದುಕೊರತೆಗಳು, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಕೈಗಾರಿಕಾ ಅಭಿವೃದ್ಧಿ, ನಗರ ವ್ಯವಹಾರಗಳು ಮತ್ತು ಉದ್ಯೋಗ, ವಿಜ್ಞಾನ ಮತ್ತು ತಂತ್ರಜ್ಞಾನ, ಕಾನೂನು ವ್ಯವಹಾರಗಳು, ಸಾರ್ವಜನಿಕ ಉದ್ಯಮಗಳ ಇಲಾಖೆಗಳ – ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿಗಳು – ಪದನಿಮಿತ್ತ ಸದಸ್ಯರು.

(ಡಿ) ಮುಖ್ಯ ಕಮಿಷನರ್, ಪದನಿಮಿತ್ತ ಸದಸ್ಯರು.

(ಇ) ಅಧ್ಯಕ್ಷರು ರೈಲ್ವೆ ಮಂಡಲಿ, ಪದನಿಮಿತ್ತ ಸದಸ್ಯರು.

(ಎಫ್) ಕಾರ್ಮಿಕ, ಉದ್ಯೋಗ ಮತ್ತು ತರಬೇತಿ ಇಲಾಖೆಯ ಮಹಾನಿರ್ದೇಶಕರು, ಪದನಿಮಿತ್ತ ಸದಸ್ಯರು.

(ಜಿ) ನಿರ್ದೇಶಕರು, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು, ಪದನಿಮಿತ್ತ ಸದಸ್ಯರು.

(ಹೆಚ್) ಮೂರು ಜನ ಸಂಸತ್ ಸದಸ್ಯರು, ಅವರಲ್ಲಿ ಇಬ್ಬರು ಲೋಕಸಭೆಗೆ ಮತ್ತೊಬ್ಬರು ರಾಜ್ಯಸಭೆಗೆ ಆಯ್ಕೆಯಾದವರು ಸದಸ್ಯರು

(ಐ) ಅಂಗವಿಕಲರ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಪ್ರಾತಿನಿಧ್ಯವಿರಬೇಕೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವಂತಹ ನಾಮ ನಿರ್ದೇಶನ ಮಾಡಿದ ಮೂವರು ವ್ಯಕ್ತಿಗಳು

(ಜೆ) ಈ ಸಂಸ್ಥೆಗಳ ನಿರ್ದೇಶಕರುಗಳು

(1) ಅಂಧರಿಗಾಗಿ ರಾಷ್ಟ್ರೀಯ ಸಂಸ್ಥೆ, ಡೆಹರಾಡೂನ್,

(2) ಬುದ್ಧಿ ಮಾಂದ್ಯರಿಗಾಗಿ ರಾಷ್ಟ್ರೀಯ ಸಂಸ್ಥೆ, ಸಿಕಂದರಾಬಾದ್

(3) ದೈಹಿಕ ಅಂಗವಿಕಲರಿಗಾಗಿ ಸಂಸ್ಥೆ, ಕಲ್ಕತ್ತ

(4) ಶ್ರವಣ ದೋಷವುಳ್ಳವರಿಗಾಗಿ ಅಲಿವರ್‌ಜಂಗ್ ರಾಷ್ಟ್ರೀಯ ಸಂಸ್ಥೆ ಮುಂಬೈ, ಪದನಿಮಿತ್ತ ಸದಸ್ಯರು.

(ಕೆ) ಕೇಂದ್ರ ಸರ್ಕಾರವು ನಿರ್ದಿಷ್ಟ ಪಡಿಸಬಹುದಾದಂತ ರೀತಿಯಲ್ಲಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತಿನಿಧಿಸಲು ಸರದಿ ಮೂಲಕ ಕೇಂದ್ರ ಸರ್ಕಾರವು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುವ ನಾಲ್ಕು ಜನರು

ಆದರೆ, ರಾಜ್ಯ ಸರ್ಕಾರದ ಅಥವಾ, ಸಂದರ್ಭಾನುಸಾರವಾಗಿ, ಕೇಂದ್ರಾಡಳಿತ ಪ್ರದೇಶದ ಶಿಫಾರಸಿನ ಹೊರತು ಈ ಖಂಡದ ಮೇರೆಗೆ ಯಾವುದೇ ನೇಮಕಾತಿ ಮಾಡತಕ್ಕದ್ದಲ್ಲ.

(ಎಲ್) ಅಂಗವಿಕಲತೆಗಳಿಗೆ ಸಂಬಂಧಪಟ್ಟಂತೆ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆ ಅಥವಾ ಸಂಘ ಸಂಸ್ಥೆಗಳನ್ನು ಪ್ರತಿನಿಧಿಸುವುದಕ್ಕಾಗಿ ಕಾರ್ಯಸಾಧ್ಯವಾದಷ್ಟು ಮಟ್ಟಿಗೆ 5 ಜನ ಅಂಗವಿಕಲ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಕೇಂದ್ರ ಸರ್ಕಾರವು ನಾಮ ನಿರ್ದೇಶನ ಮಾಡಬೇಕು, ಅವರಲ್ಲಿ ಒಬ್ಬೊಬ್ಬರೂ ಒಂದೊಂದು ಅಂಗವಿಕಲ ವರ್ಗಕ್ಕೆ ಸೇರಿದವರಾಗಿರಬೇಕು.

ಆದರೆ, ಈ ಖಂಡದ ಮೇರೆಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡುವಾಗ, ಕೇಂದ್ರ ಸರ್ಕಾರವು ಕನಿಷ್ಠ ಪಕ್ಷ ಒಬ್ಬ ಮಹಿಳೆ ಮತ್ತು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿದ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು.

(ಎಂ) ಅಂಗವಿಕಲರ ಕಲ್ಯಾಣದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿರುವ ಭಾರತ ಸರ್ಕಾರದ ಕಲ್ಯಾಣ ಮಂತ್ರಾಲಯದ ಜಂಟಿ ಕಾರ್ಯದರ್ಶಿ, ಪದನಿಮಿತ್ತ ಸದಸ್ಯ ಕಾರ್ಯದರ್ಶಿ.

(3) ಕೇಂದ್ರ ಸಮನ್ವಯ ಸಮಿತಿಯ ಸದಸ್ಯ ಪದವನ್ನು, ಸಂಸತ್ತಿನ ಎರಡೂ ಸದನಗಳ ಪೈಕಿ ಒಂದರ ಸದಸ್ಯನಾಗಿ ಆಯ್ಕೆಯಾಗುವುದಕ್ಕಾಗಲಿ ಅಥವಾ ಸದಸ್ಯನಾಗಿರುವುದಕ್ಕಾಗಲಿ ಅಂಥ ಪದಧಾರಣ ಮಾಡಿದ ಕಾರಣದಿಂದ ಅವನನ್ನು ಅನರ್ಹಗೊಳಿಸತಕ್ಕದ್ದಲ್ಲ.

ಸದಸ್ಯರ ಪದಾವಧಿ :

(4) (1) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅನ್ಯಥಾ ಉಪಬಂಧಿಸಿರುವಂತೆ ಹೊರತು, 3ನೇ ಪ್ರಕರಣ (2)ನೇ ಉಪ-ಪ್ರಕರಣದ (ಬಿ) ಖಂಡ ಅಥವಾ (ಎಲ್) ಖಂಡದ ಮೇರೆಗೆ ಕೇಂದ್ರ ಸಮನ್ವಯ ಸಮಿತಿಗೆ ನಾಮ ನಿರ್ದೇಶನಗೊಂಡ ಸದಸ್ಯನು ಅವನ ನಾಮನಿರ್ದೇಶನ ದಿನಾಂಕದಿಂದ 2 ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

ಆದರೆ ಅಂಥ ಒಬ್ಬ ಸದಸ್ಯನು, ತನ್ನ ಪದ ಅವಧಿಯು ಮುಕ್ತಾಯವಾಗದಿದ್ದಾಗ್ಯೂ, ತನ್ನ ಉತ್ತರಾಧಿಕಾರಿಯು ಪದವನ್ನು ವಹಿಸಿಕೊಳ್ಳುವವರೆಗೆ ಪದಧಾರಣ ಮಾಡಿರುವುದು ಮುಂದುವರೆಯತಕ್ಕದ್ದು.

(2) ಒಬ್ಬ ಪದನಿಮಿತ್ತ ಸದಸ್ಯನ ಪದಾವಧಿಯು ಯಾವ ಪದವನ್ನು ಧಾರಣ ಮಾಡಿದ್ದ ಕಾರಣದಿಂದಾಗಿ ಅವನನ್ನು ನಾಮನಿರ್ದೇಶನ ಮಾಡಲಾಗಿತ್ತೋ ಆ ಪದವನ್ನು ಅವನು ಧಾರಣ ಮಾಡುವುದು ನಿಂತು ಹೋದ ಕೂಡಲೇ ಪದವಿ ಕೊನೆಗೊಳ್ಳತಕ್ಕದ್ದು.

(3) ಕೇಂದ್ರ ಸರ್ಕಾರವು, 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡ ಅಥವಾ (ಎಲ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡಯಾವನೇ ಸದಸ್ಯನನ್ನು ಪದದಿಂದ ತೆಗೆದುಹಾಕುವುದು ಸೂಕ್ತವೆಂದು ಯೋಚಿಸಿದರೆ ಅವನ ಪದಾವಧಿ ಮುಗಿಯುವುದಕ್ಕೆ ಮುಂಚೆ, ಅವನಿಗೆ ಅದರ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ನೀಡಿದ ನಂತರ ತೆಗೆದು ಹಾಕಬಹುದು.

(4) 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ ಅಥವಾ (ಎಲ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ಯಾವುದೇ ಕಾಲದಲ್ಲಿ ತಾನು ರುಜು ಮಾಡಿದ ಬರಹದ ಮೂಲಕ ಕೇಂದ್ರ ಸರ್ಕಾರಕ್ಕೆ ಸಂಬೋಧಿಸಿ ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು ಮತ್ತು ಸದರಿ ಸದಸ್ಯನ ಸ್ಥಾನವು ಆ ತರುವಾಯ ಖಾಲಿಯಾಗತಕ್ಕದ್ದು.

(5) ಕೇಂದ್ರ ಸಮನ್ವಯ ಸಮಿತಿಯಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನವನ್ನು ಹೊಸ ನಾಮ ನಿರ್ದೇಶನದ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡಲು ನಾಮನಿರ್ದೇಶಿತನಾದ ವ್ಯಕ್ತಿಯು, ಅವನನ್ನು ಯಾರ ಸ್ಥಾನದಲ್ಲಿ ನಾಮನಿರ್ದೇಶನ ಮಾಡಲಾಗಿದೆಯೋ ಆ ಸದಸ್ಯನ ಉಳಿದಿರುವ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು.

(6) 3ನೇ ಪ್ರಕರಣದ (2) ನೇ ಉಪ-ಪ್ರಕರಣದ (ಬಿ) ಖಂಡದ ಅಥವಾ (ಎಲ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ಪುನರ್ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು.



13

(7) 3ನೇ ಪ್ರಕರಣದ (2ನೇ) ಉಪ–ಪ್ರಕರಣದ (ಐ) ಖಂಡ ಅಥವಾ (ಎಲ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಭತ್ಯಗಳನ್ನು ಪಡೆಯತಕ್ಕದ್ದು.

5. ಅನರ್ಹತೆಗಳು : (1) (ಎ) ದಿವಾಳಿಯಾಗಿರುವ ಅಥವಾ ಯಾವುದೇ ಕಾಲದಲ್ಲಿ ದಿವಾಳಿಯೆಂದು ನ್ಯಾಯನಿರ್ಣೀತವಾದ ಅಥವಾ ಅವನ ಋಣಗಳ ಸಂದಾಯವನ್ನು ನಿಲಂಬನಗೊಳಿಸಿರುವ ಅಥವಾ ಅವನಿಗೆ ಸಾಲ ಕೊಟ್ಟವರೊಂದಿಗೆ ರಾಜಿ ಮಾಡಿಕೊಂಡಿರುವ ಅಥವಾ

(ಬಿ) ಅಸ್ವಸ್ಥಚಿತ್ತನಾಗಿರುವ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯವು ಘೋಷಿತನಾಗಿರುವ ಅಥವಾ

(ಸಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಪತನವನ್ನೊಳಗೊಂಡ ಒಂದು ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ ಅಥವಾ

(ಡಿ) ಯಾವುದೇ ಕಾಲದಲ್ಲಿ ಈ ಅಧಿನಿಯಮದ ಮೇರೆಗಿನ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ ಅಥವಾ

(ಇ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಕೇಂದ್ರ ಸಮನ್ವಯ ಸಮಿತಿಯಲ್ಲಿ ಅವನ ಮುಂದುವರಿಕೆಯು ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟು ಮಾಡುವ ಹಾಗೆ ಸದಸ್ಯನಾಗಿ ಅವನ ಪದವನ್ನು ದುರುಪಯೋಗ ಮಾಡಿಕೊಂಡಿರುವ – ಯಾವನೇ ವ್ಯಕ್ತಿಯು ಕೇಂದ್ರ ಸಮನ್ವಯ ಸಮಿತಿಯ ಸದಸ್ಯನಾಗಿರತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ಈ ಪ್ರಕರಣದ ಮೇರೆಗೆ, ಸದಸ್ಯನನ್ನು ತೆಗೆದುಹಾಕುವ ಯಾವುದೇ ಆದೇಶವನ್ನು, ಸಂಬಂಧಪಟ್ಟ ಸದಸ್ಯನಿಗೆ, ಅದರ ವಿರುದ್ಧ ಕಾರಣ ತೋರಿಸಲು ಯುಕ್ತ ಅವಕಾಶವನ್ನು ನೀಡದ ಹೊರತು, ಮಾಡತಕ್ಕದ್ದಲ್ಲ.

(3) 4ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಥವಾ (6)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ ಈ ಪ್ರಕರಣದ ಮೇರೆಗೆ ತೆಗೆದುಹಾಕಲಾಗಿರುವ ಸದಸ್ಯನು, ಸದಸ್ಯನಾಗಿ ಪುನರ್ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

(6) ಸದಸ್ಯರು ಸ್ಥಾನಗಳನ್ನು ಖಾಲಿ ಮಾಡುವುದು : ಕೇಂದ್ರ ಸಮನ್ವಯ ಸಮಿತಿಯ ಸದಸ್ಯನು 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗೊಳಗಾದರೆ ಅವನ ಸ್ಥಾನವು ಖಾಲಿಯಾಗತಕ್ಕದ್ದು.

(7) ಕೇಂದ್ರ ಸಮನ್ವಯ ಸಮಿತಿಯ ಸಭೆಗಳು : ಕೇಂದ್ರ ಸಮನ್ವಯ ಸಮಿತಿಯು ಪ್ರತಿ ಆರು ತಿಂಗಳಿಗೆ ಕನಿಷ್ಠ ಪಕ್ಷ ಒಂದು ಬಾರಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ವ್ಯವಹಾರಗಳನ್ನು ನಡೆಸುವ ಬಗ್ಗೆ ಕೇಂದ್ರ ಸರ್ಕಾರ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(8) ಕೇಂದ್ರ ಸಮನ್ವಯ ಸಮಿತಿಯ ಕಾರ್ಯಗಳು : (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕೇಂದ್ರ ಸಮನ್ವಯ ಸಮಿತಿಯು, ಅಂಗವಿಕಲರಿಗೆ ಸಂಬಂಧಿಸಿದ ವಿಷಯಗಳಲ್ಲಿ ರಾಷ್ಟ್ರೀಯ ಮಾರ್ಗದರ್ಶನ ಕೇಂದ್ರವಾಗಿ ಸೇವೆ ಸಲ್ಲಿಸತಕ್ಕದ್ದು ಮತ್ತು ಅಂಗವಿಕಲ ವ್ಯಕ್ತಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ದಿಸೆಯಲ್ಲಿ ವ್ಯಾಪಕ ವಿಕಾಸ ಕಾರ್ಯನೀತಿ ನಿರಂತರವಾಗಿ ಮುಂದುವರಿಯುವುದಕ್ಕೆ ಅವಕಾಶಗಳನ್ನು ಒದಗಿಸತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಕೇಂದ್ರ ಸಮನ್ವಯ ಸಮಿತಿಯು ಈ ಕೆಳಕಂಡ ಎಲ್ಲ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು ಅವುಗಳೆಂದರೆ

(ಎ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ವಿಷಯಗಳೊಂದಿಗೆ ವ್ಯವಹರಿಸುವಂಥ ಎಲ್ಲ ಸರ್ಕಾರಿ ಇಲಾಖೆಗಳ ಮತ್ತು ಇತರೆ ಸರ್ಕಾರಿ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಚಟುವಟಿಕೆಗಳನ್ನು ಪರಾಮರ್ಶಿಸುವುದು ಮತ್ತು ಸಮನ್ವಯಗೊಳಿಸುವುದು.

(ಬಿ) ಅಂಗವಿಕಲ ವ್ಯಕ್ತಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಒಂದು ರಾಷ್ಟ್ರೀಯ ಕಾರ್ಯನೀತಿಯನ್ನು ರೂಪಿಸುವುದು.

(ಸಿ) ಅಂಗವಿಕಲತೆಯ ಸಂಬಂಧದಲ್ಲಿ ಕಾರ್ಯನೀತಿಗಳು, ಕಾರ್ಯಕ್ರಮಗಳ ಶಾಸನ ರಚನೆ ಮತ್ತು ಯೋಜನೆಗಳನ್ನು ರೂಪಿಸುವುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು.

(ಡಿ) ರಾಷ್ಟ್ರೀಯ ಯೋಜನೆಗಳಲ್ಲಿ ಮತ್ತು ಅಂತರಾಷ್ಟ್ರೀಯ ಏಜೆನ್ಸಿಗಳು ರೂಪಿಸಿರುವ ಇತರ ಕಾರ್ಯಕ್ರಮಗಳಲ್ಲಿ ಮತ್ತು ಕಾರ್ಯನೀತಿಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಯೋಜನೆಗಳನ್ನು ಮತ್ತು ಪ್ರಾಜೆಕ್ಟ್‌ಗಳನ್ನು ಕಲ್ಪಿಸುವ ಉದ್ದೇಶದಿಂದ ಸಂಬಂಧಪಟ್ಟ ಪ್ರಾಧಿಕಾರಿಗಳೊಂದಿಗೆ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳೊಂದಿಗೆ ಅಂಗವಿಕಲ ವ್ಯಕ್ತಿಗಳ ಸಮಸ್ಯೆಗಳನ್ನು ಪರಿಹರಿಸಲು ಕ್ರಮತೆಗೆದುಕೊಳ್ಳುವುದು.

(ಇ) ಅಂಗವಿಕಲ ವ್ಯಕ್ತಿಗಳ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ದೇಣಿಗೆದಾರ ಏಜೆನ್ಸಿಗಳೊಂದಿಗೆ ಅವರು ನಿಧಿ ಒದಗಿಸುವ ನೀತಿಯ ಬಗ್ಗೆ ಸಮಾಲೋಚಿಸಿ ಪರಾಮರ್ಶಿಸುವುದು.

(ಎಫ್) ಸಾರ್ವಜನಿಕ ಸ್ಥಳಗಳಲ್ಲಿ, ಕೆಲಸಮಾಡುವ ಸ್ಥಳಗಳಲ್ಲಿ, ಜನೋಪಯೋಗಿ ಸ್ಥಳಗಳಲ್ಲಿ, ಶಾಲೆಗಳಲ್ಲಿ ಮತ್ತು ಇತರೆ ಸಂಸ್ಥೆಗಳಲ್ಲಿ ಅಡೆತಡೆಯಿಲ್ಲದ ತಡೆರಹಿತ ವಾತಾವರಣವನ್ನು ದೊರಕಿಸಿಕೊಡುವುದಕ್ಕೆ ಸೂಕ್ತವೆಂದು ಭಾವಿಸುವಂಥ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವುದು.

(ಜಿ) ಅಂಗವಿಕಲ ವ್ಯಕ್ತಿಗಳು ಸಮಾನತೆ ಮತ್ತು ಪೂರ್ಣ ಪಾಲ್ಗೊಳ್ಳುವಿಕೆಯನ್ನು ದೊರಕಿಸಿಕೊಡುವ ಸಂಬಂಧದಲ್ಲಿ ರೂಪಿಸಲಾದ ಕಾರ್ಯನೀತಿಗಳ ಮತ್ತು ಕಾರ್ಯಕ್ರಮಗಳ ಪರಿಣಾಮವನ್ನು ಪರಿಶೀಲಿಸುವುದು ಮತ್ತು ಮೌಲ್ಯ ಮಾಪನ ಮಾಡುವುದು.

(ಹೆಚ್) ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂತಹ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

**(9) ಕೇಂದ್ರ ಕಾರ್ಯ ನಿರ್ವಾಹಕ ಸಮಿತಿ :** (1) ಈ ಅಧಿನಿಯಮದ ಮೇರೆಗೆ ವಹಿಸಿಕೊಡುವ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಕೇಂದ್ರ ಕಾರ್ಯನಿರ್ವಾಹಕ ಮಿತಿ ಎಂದು ಕರೆಯುವ ಒಂದು ಸಮಿತಿಯನ್ನು ಕೇಂದ್ರ ಸರ್ಕಾರವು ರಚಿಸತಕ್ಕದ್ದು.

(2) ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು.

(ಎ) ಕಲ್ಯಾಣ ಮಂತ್ರಾಲಯದ ಭಾರತ ಸರ್ಕಾರದ ಕಾರ್ಯದರ್ಶಿ – ಪದನಿಮಿತ್ತ ಅಧ್ಯಕ್ಷರು.

(ಬಿ) ಮುಖ್ಯ ಆಯುಕ್ತರು, ಪದನಿಮಿತ್ತ – ಸದಸ್ಯರು.

(ಸಿ) ಆರೋಗ್ಯ ಸೇವೆಗಳ ಮಹಾನಿರ್ದೇಶಕರು – ಪದನಿಮಿತ್ತ ಸದಸ್ಯ

(ಡಿ) ಉದ್ಯೋಗ ಮತ್ತು ತರಬೇತಿ ಮಹಾನಿರ್ದೇಶಕರು, ಪದನಿಮಿತ್ತ ಸದಸ್ಯರು

(ಇ) ಗ್ರಾಮೀಣ ಅಭಿವೃದ್ಧಿ, ಶಿಕ್ಷಣ, ಕಲ್ಯಾಣ, ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆಗಳ ಮತ್ತು ವಿಶ್ರಾಂತಿ ವೇತನ ಮತ್ತು ನಗರ ವ್ಯವಹಾರಗಳ ಮತ್ತು ಉದ್ಯೋಗ, ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯಗಳನ್ನು ಅಥವಾ ಇಲಾಖೆಗಳನ್ನು ಪ್ರತಿನಿಧಿಸಲು ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಆರು ಜನರು – ಪದನಿಮಿತ್ತ ಸದಸ್ಯರು

(ಎಫ್) ಆರ್ಥಿಕ ಸಲಹೆಗಾರರು, ಕೇಂದ್ರ ಸರ್ಕಾರದ ಕಲ್ಯಾಣ ಮಂತ್ರಾಲಯ, ಪದನಿಮಿತ್ತ ಸದಸ್ಯರು

(ಜಿ) ಸಲಹೆಗಾರ (ಜಕಾತಿ) ರೈಲ್ವೆ ಮಂಡಲಿ, ಪದನಿಮಿತ್ತ ಸದಸ್ಯರು

(ಹೆಚ್) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತಿನಿಧಿಸುವುದಕ್ಕಾಗಿ, ಸರದಿ – ಮೂಲಕ, ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ ನಾಲ್ಕು ಸದಸ್ಯರು.

(ಐ) ಕೇಂದ್ರ ಸರ್ಕಾರವು ನಾಮನಿರ್ದೇಶಿಸಲು ಸೂಕ್ತವೆಂದು ಭಾವಿಸಬಹುದಾದಂತೆ ಅಂಗವಿಕಲರ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದಕ್ಕಾಗಿ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ ಒಬ್ಬ ವ್ಯಕ್ತಿ, ಸದಸ್ಯರು.

(ಜೆ) ಅಂಗವಿಕಲರಿಗೆ ಸಂಬಂಧಿಸಿರುವಂಥ ಸರ್ಕಾರೇತರ ಸಂಸ್ಥೆಗಳನ್ನು ಅಥವಾ ಸಂಘ ಸಂಸ್ಥೆಗಳನ್ನು ಪ್ರತಿನಿಧಿಸಲು ಅಂಗವಿಕಲತೆಯ ಪ್ರತಿಯೊಂದು ವರ್ಗದಿಂದ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವಂಥ ಸಾಧ್ಯವಿರುವಷ್ಟು ಮಟ್ಟಿಗೆ, ಅಂಗವಿಕಲರಾಗಿರುವ ಐದು ಜನ – ಸದಸ್ಯರು.

ಆದರೆ, ಈ ಖಂಡದ ಮೇರೆಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡುವಾಗ, ಕೇಂದ್ರ ಸರ್ಕಾರವು ಕೊನೆಪಕ್ಷ ಒಬ್ಬ ಮಹಿಳೆಯನ್ನು ಮತ್ತು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು.

(ಕೆ) ಅಂಗವಿಕಲರ ಕಲ್ಯಾಣಕ್ಕೆ ಸಂಬಂಧಿಸಿದ ವ್ಯವಹಾರ ನೋಡಿಕೊಳ್ಳುವ ಕಲ್ಯಾಣ ಸಚಿವಾಲಯದಲ್ಲಿನ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ, ಪದನಿಮಿತ್ತ ಸದಸ್ಯ – ಕಾರ್ಯದರ್ಶಿ

(3) (2)ನೇ ಉಪ–ಪ್ರಕರಣ (ಐ) ಖಂಡ ಮತ್ತು (ಜೆ) ಖಂಡದ ಮೇರೆಗೆ ನಾಮನಿರ್ದೇಶಿತರಾದ ಸದಸ್ಯರು ಕೇಂದ್ರ ಸರ್ಕಾರವು, ಗೊತ್ತುಪಡಿಸುವ ಭತ್ಯೆಗಳನ್ನು ಪಡೆಯತಕ್ಕದ್ದು.

(4) (2)ನೇ ಉಪ–ಪ್ರಕರಣದ (ಐ) ಖಂಡ ಅಥವಾ (ಜೆ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ಕೇಂದ್ರ ಸರ್ಕಾರವನ್ನು ಸಂಬೋಧಿಸಿ ಲಿಖಿತದಲ್ಲಿ ತನ್ನ ರುಜುವಿನೊಂದಿಗೆ ಬರೆದುಕೊಳ್ಳುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಈ ತರುವಾಯ ಸದರಿ ಸದಸ್ಯನ ಸ್ಥಾನವು ಖಾಲಿಯಾಗತಕ್ಕದ್ದು.

**(೧೦) ಕೇಂದ್ರ ಕಾರ್ಯ ನಿರ್ವಾಹಕ ಸಮಿತಿಯ ಕಾರ್ಯಗಳು :** (1) ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು ಕೇಂದ್ರ ಸಮನ್ವಯ ಸಮಿತಿಯ ಕಾರ್ಯನಿರ್ವಹಾಕ ಮಂಡಲಿಯಾಗಿರತಕ್ಕದ್ದು ಮತ್ತು ಕೇಂದ್ರ ಸಮನ್ವಯ ಸಮಿತಿಯ ನಿರ್ಣಯಗಳನ್ನು ಜಾರಿಗೊಳಿಸುವ ಜವಾಬ್ದಾರಿ ಹೊಂದಿರತಕ್ಕದ್ದು.

(2) ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು (1)ನೇ ಉಪ–ಪ್ರಕರಣದ ಉಪಬಂಧಗಳಿಗೆ ಬಾಧಕವಾಗದ ರೀತಿಯಲ್ಲಿ ಕೇಂದ್ರ ಸಮನ್ವಯ ಸಮಿತಿಯು ತನಗೆ ವಹಿಸಿಕೊಡಬಹುದಾದಂಥ ಇತರೆ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

**(11) ಕೇಂದ್ರ ಕಾರ್ಯ ನಿರ್ವಾಹಕ ಸಮಿತಿಯ ಸಭೆಗಳು :** ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು ಮತ್ತು ಕೇಂದ್ರ ಸರ್ಕಾರವು ನಿಯಮಿಸಬಹುದಾದಂತೆ ಅದರ ಸಭೆಗಳಲ್ಲಿ ನಡೆದಂಥ ವ್ಯವಹಾರಗಳನ್ನು ನಿರ್ವಹಿಸುವ ಸಂಬಂಧದಲ್ಲಿ ಪ್ರಕ್ರಿಯೆಯ ನಿಯಮಗಳನ್ನು ಪರಿಶೀಲಿಸತಕ್ಕದ್ದು.

(೧೨) ನಿರ್ದಿಷ್ಟ ಉದ್ದೇಶಕ್ಕಾಗಿ ಕೇಂದ್ರ ಕಾರ್ಯನಿರ್ವಾಹಕ ಸಮಿತಿಯೊಂದಿಗೆ ತಾತ್ಕಾಲಿಕವಾಗಿ ಜನರ ಸಹ ಸದಸ್ಯತ್ವ : (೧) ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು, ಕೇಂದ್ರ ಸರ್ಕಾರವು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಈ ಅಧಿನಿಯಮದ ಮೇರೆಗೆ ತನ್ನ ಯಾವುದೇ ಕಾರ್ಯಗಳನ್ನು ನಿರ್ವಹಿಸುವಲ್ಲಿ ಯಾವನೇ ವ್ಯಕ್ತಿಯ ಸಹಾಯ ಅಥವಾ ಸಲಹೆ ಪಡೆಯಲು ಇಚ್ಛಿಸಿದರೆ ಅಂಥ ವ್ಯಕ್ತಿಯನ್ನು ಸಹ ಸದಸ್ಯನೆಂಬುದಾಗ ಸೇರಿಸಿಕೊಳ್ಳಬಹುದು.

(2) ಯಾವುದೇ ಉದ್ದೇಶಕ್ಕಾಗಿ (1) ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಕಾರ್ಯನಿರ್ವಾಹಕ ಸಮಿತಿಯೊಂದಿಗೆ ಸಹ ಸದಸ್ಯನಾದ ವ್ಯಕ್ತಿಗೆ, ಆ ಉದ್ದೇಶಕ್ಕೆ ಸಂಬಂಧಿಸಿದ ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಸಭೆಯ ಚರ್ಚೆಗಳಲ್ಲಿ ಭಾಗವಹಿಸುವ ಹಕ್ಕು ಇರತಕ್ಕದ್ದು, ಆದರೆ ಸದರಿ ಸಮಿತಿಯ ಸಭೆಯಲ್ಲಿ ಮತ ಚಲಾಯಿಸುವ ಹಕ್ಕು ಇರುವುದಿಲ್ಲ ಮತ್ತು ಇತರ ಯಾವುದೇ ಉದ್ದೇಶಕ್ಕಾಗಿ ಸಮಿತಿಯ ಸದಸ್ಯನಾಗಿ ಇರತಕ್ಕದ್ದಲ್ಲ.

(3) ಯಾವುದೇ ಉದ್ದೇಶಕ್ಕಾಗಿ (1)ನೇ ಉಪ-ಪ್ರಕರಣದ ಮೇರೆಗೆ ಸದರಿ ಸಮಿತಿಗೆ ಸಹ ಸದಸ್ಯನಾದ ವ್ಯಕ್ತಿಗೆ ಕೇಂದ್ರ ಸರ್ಕಾರವು ನಿಗಧಿಪಡಿಸಬಹುದಾದಂತೆ ಸದರಿ ಸಮಿತಿಯ ಸಭೆಗಳಿಗೆ ಹಾಜರಾಗಿದ್ದಕ್ಕಾಗಿ ಮತ್ತು ಅದರ ಯಾವುದೇ ಇತರ ಕೆಲಸದಲ್ಲಿ ಭಾಗವಹಿಸಿದ್ದಕ್ಕಾಗಿ ಫೀಜು ಮತ್ತು ಭತ್ಯಗಳನ್ನು ಸಂದಾಯ ಮಾಡತಕ್ಕದ್ದು.

## ಅಧ್ಯಾಯ – III

## ರಾಜ್ಯ ಸಮನ್ವಯ ಸಮಿತಿ

**(13)** ರಾಜ್ಯ ಸಮನ್ವಯ ಸಮಿತಿ : (1) ಪ್ರತಿಯೊಂದು ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ, ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ತನಗೆ ವಹಿಸಿಕೊಟ್ಟ ಪ್ರಕಾರ್ಯವನ್ನು ನಿರ್ವಹಿಸಲು ರಾಜ್ಯ ಸಮನ್ವಯ ಸಮಿತಿ ಎಂದು ಕರೆಯುವ ಒಂದು ಮಂಡಲಿಯನ್ನು ರಚಿಸತಕ್ಕದ್ದು.

(2) ರಾಜ್ಯ ಸಮನ್ವಯ ಸಮಿತಿಯಲ್ಲಿ ಕೆಳಕಂಡವರು ಇರತಕ್ಕದ್ದು.

(ಎ) ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಚಿವರು, ಪದನಿಮಿತ್ತ ಅಧ್ಯಕ್ಷರು

(ಬಿ) ಸಮಾಜ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು, ಯಾರಾದರೂ ಇದ್ದರೆ, ಪದನಿಮಿತ್ತ ಉಪಾಧ್ಯಕ್ಷರು

(ಸಿ) ಕಲ್ಯಾಣ, ಶಿಕ್ಷಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ವೆಚ್ಚ, ಸಿಬ್ಬಂದಿ ತರಬೇತಿ ಮತ್ತು ಸಾರ್ವಜನಿಕ ಕುಂದುಕೊರತೆ, ಆರೋಗ್ಯ, ಗ್ರಾಮೀಣ ಅಭಿವೃದ್ಧಿ, ಕೈಗಾರಿಕಾ ಅಭಿವೃದ್ಧಿ, ನಗರ ವ್ಯವಹಾರ ಮತ್ತು ಉದ್ಯೋಗ, ವಿಜ್ಞಾನ ಮತ್ತು ತಂತ್ರಜ್ಞಾನ ಸಾರ್ವಜನಿಕ ಉದ್ದಿಮೆ, ಯಾವುದೇ ಹೆಸರಿನಿಂದ ಕರೆದಿರಲಿ, ಈ ಇಲಾಖೆಗಳ ರಾಜ್ಯ ಸರ್ಕಾರದ ಕಾರ್ಯದರ್ಶಿಗಳು, ಪದನಿಮಿತ್ತ ಸದಸ್ಯರು.

(ಡಿ) ರಾಜ್ಯ ಸರ್ಕಾರವು ಅವಶ್ಯವೆಂದು ಭಾವಿಸುವಂತಹ ಯಾವುದೇ ಇತರ ಇಲಾಖೆಯ ಕಾರ್ಯದರ್ಶಿ, ಪದನಿಮಿತ್ತ ಸದಸ್ಯರು.

(ಇ) ಸಾರ್ವಜನಿಕ ಉದ್ದಿಮೆಗಳ (ಯಾವುದೇ ಹೆಸರಿನಿಂದ ಕರೆದಿರಲಿ) ಅಧ್ಯಕ್ಷರು, ಪದನಿಮಿತ್ತ ಸದಸ್ಯರು

(ಎಫ್) ಅಂಗವಿಕಲರಿಗೆ ಸಂಬಂಧಿಸಿರುವಂಥ ಸರ್ಕಾರೇತರ ಸಂಸ್ಥೆಗಳನ್ನು ಅಥವಾ ಸಂಘ ಸಂಸ್ಥೆಗಳನ್ನು ಪ್ರತಿನಿಧಿಸಲು ಅಂಗವಿಕಲತೆಯ ಪ್ರತಿಯೊಂದು ವರ್ಗದಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡುವಂಥ, ಸಾಧ್ಯವಿರುವಷ್ಟು ಮಟ್ಟಿಗೆ ಅಂಗವಿಕಲರಾಗಿರುವ ಐದು ಜನ, ಸದಸ್ಯರು.

ಆದರೆ, ಈ ಖಂಡದ ಮೇರೆಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡುವಾಗ, ರಾಜ್ಯ ಸರ್ಕಾರವು ಕೊನೆ ಪಕ್ಷ ಒಬ್ಬ ಮಹಿಳೆಯನ್ನು ಮತ್ತು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು.

(ಜಿ) ರಾಜ್ಯ ವಿಧಾನಮಂಡಲದಿಂದ ಮೂವರು ಸದಸ್ಯರು, ಅವರಲ್ಲಿ ವಿಧಾನಸಭೆಗೆ ಆಯ್ಕೆಯಾದ ಇಬ್ಬರು ಮತ್ತು ವಿಧಾನ ಪರಿಷತ್ ಇದ್ದಲ್ಲಿ ಅದರಿಂದ ಯಾರೇ ಒಬ್ಬರು

(ಹೆಚ್) ರಾಜ್ಯ ಸರ್ಕಾರವು ಹಾಗೆ ಪ್ರತಿನಿಧಿಸಬೇಕೆಂದು ಅಭಿಪ್ರಾಯಪಟ್ಟಲ್ಲಿ ಕೃಷಿ, ಕೈಗಾರಿಕೆ ಅಥವಾ ವ್ಯಾಪಾರ ಅಥವಾ ಇತರೆ ಯಾವುದೇ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದಕ್ಕಾಗಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡುವ ಮೂವರು ವ್ಯಕ್ತಿಗಳು, ಪದ ನಿಮಿತ್ತ ಸದಸ್ಯರು.

(ಐ) ಆಯುಕ್ತರು, ಪದನಿಮಿತ್ತ ಸದಸ್ಯರು,

(ಜೆ) ಅಂಗವಿಕಲರ ಕಲ್ಯಾಣ ಕಾರ್ಯವನ್ನು ನೋಡಿಕೊಳ್ಳುವ ರಾಜ್ಯ ಸರ್ಕಾರದ ಕಾರ್ಯದರ್ಶಿ; ಪದನಿಮಿತ್ತ ಸದಸ್ಯ ಕಾರ್ಯದರ್ಶಿ.

(3) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಕೇಂದ್ರಾಡಳಿತ ಪ್ರದೇಶಕ್ಕೆ ಯಾವುದೇ ರಾಜ್ಯ ಸಮನ್ವಯ ಸಮಿತಿಯನ್ನು ರಚಿಸತಕ್ಕದ್ದಲ್ಲ ಮತ್ತು ಕೇಂದ್ರಾಡಳಿತ ಪ್ರದೇಶದ ಸಂಬಂಧದಲ್ಲಿ ಕೇಂದ್ರ ಸಮನ್ವಯ ಸಮಿತಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಕೇಂದ್ರಾಡಳಿತ ಪ್ರದೇಶಕ್ಕಾಗಿ ಒಂದು ರಾಜ್ಯ ಸಮನ್ವಯ ಸಮಿತಿಯು ನಿರ್ವಹಿಸುವಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

ಆದರೆ, ಒಂದು ಕೇಂದ್ರಾಡಳಿತ ಪ್ರದೇಶದ ಸಂಬಂಧದಲ್ಲಿ, ಕೇಂದ್ರ ಸಮನ್ವಯ ಸಮಿತಿಯು ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳ ಮಂಡಲಿಗೆ ಈ ಉಪ-ಪ್ರಕರಣದ ಮೇರೆಗೆ ತನ್ನ ಎಲ್ಲ ಅಥವಾ ಯಾವುದೇ ಅಧಿಕಾರ ಮತ್ತು ಪ್ರಕಾರ್ಯಗಳನ್ನು ವಹಿಸಿಕೊಡಬಹುದು.

(14) ಸದಸ್ಯರ ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು : (1) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ಉಪಬಂಧಿಸಿದುದನ್ನುಳಿದು, 13ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎಫ್) ಖಂಡ ಅಥವಾ (ಹೆಚ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ರಾಜ್ಯ ಸಮನ್ವಯ ಸಮಿತಿಯ ಒಬ್ಬ ಸದಸ್ಯರು 2 ವರ್ಷಗಳ ಅವಧಿಯವರೆಗೆ ತನ್ನ ಪದವನ್ನು ಹೊಂದಿರತಕ್ಕದ್ದು.

ಆದರೆ, ಅಂಥ ಸದಸ್ಯನ ಪದಾವಧಿ ಮುಕ್ತಾಯಗೊಂಡಿದ್ದರೂ ಸಹ, ಅವನ ಸ್ಥಾನಕ್ಕೆ ಅವನ ಉತ್ತರಾಧಿಕಾರಿ ಬರುವವರೆಗೂ ಪದದಲ್ಲಿ ಮುಂದುವರೆಯತಕ್ಕದ್ದು.

(2) ಒಬ್ಬ ಪದನಿಮಿತ್ತ ಸದಸ್ಯನ ಪದಾವಧಿಯು, ಅವನು ಯಾವ ಪದದಲ್ಲಿರುವುದರಿಂದ ಹಾಗೆ ನಾಮನಿರ್ದೇಶನಗೊಂಡಿದ್ದನೋ ಅಂಥ ಪದದಲ್ಲಿರುವುದು ನಿಂತು ಹೋದ ಕೂಡಲೆ ಅವನ ನಾಮನಿರ್ದೇಶನವು ಸಹ ಆ ಕೂಡಲೇ ನಿಂತು ಹೋಗತಕ್ಕದ್ದು.

(3) ರಾಜ್ಯ ಸರ್ಕಾರವು, ವಿಹಿತವೆಂದು ಭಾವಿಸಿದರೆ, 13ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎಫ್) ಖಂಡ ಅಥವಾ (ಹೆಚ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಯಾವನೇ ಸದಸ್ಯನನ್ನು ಅವನ ಪದಾವಧಿಯು ಮುಕ್ತಾಯವಾಗುವ ಮುಂಚೆಯೆ ಅವನನ್ನು ತೆಗೆದು ಹಾಕುವುದಕ್ಕೆ ಸಂಬಂಧಪಟ್ಟಂತೆ ಕಾರಣ ತೋರಿಸಲು ಆ ಸದಸ್ಯನಿಗೆ ಸೂಕ್ತ ಅವಕಾಶವನ್ನು ಕೊಟ್ಟ ನಂತರ ಅವನನ್ನು ತೆಗೆದುಹಾಕಬಹುದು.

(4) 13ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎಫ್) ಖಂಡದ ಅಥವಾ (ಹೆಚ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು, ಯಾವುದೇ ಕಾಲದಲ್ಲಿ, ರಾಜ್ಯ ಸರ್ಕಾರಕ್ಕೆ ಸಂಬೋಧಿಸಿ ತನ್ನ ರುಜುವಿನೊಂದಿಗೆ ಲಿಖಿತದಲ್ಲಿ ತಿಳಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಸದರಿ ಸದಸ್ಯನ ಸ್ಥಾನವು ಆನಂತರ ಖಾಲಿಯಾಗತಕ್ಕದ್ದು.

(5) ರಾಜ್ಯ ಸಮನ್ವಯ ಸಮಿತಿಯಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನವನ್ನು ಹೊಸ ನಾಮನಿರ್ದೇಶನ ಮಾಡುವ ಮೂಲಕವೇ ತುಂಬ ತಕ್ಕದ್ದು ಮತ್ತು ಅಂಥ ಖಾಲಿ ಸ್ಥಾನವನ್ನು ತುಂಬುವುದಕ್ಕೆ ನಾಮ ನಿರ್ದೇಶನಗೊಂಡ ವ್ಯಕ್ತಿಯು ಯಾವ ಸದಸ್ಯನ ಖಾಲಿ ಸ್ಥಾನದಲ್ಲಿ ನಾಮನಿರ್ದೇಶಿತನಾಗಿದ್ದಾನೊ ಅವನ ಪದಾವಧಿಯ ಉಳಿದ ಅವಧಿಯವರೆಗೆ ಮುಂದುವರಿಯತಕ್ಕದ್ದು.

(6) 13ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎಫ್) ಖಂಡದ ಮತ್ತು (ಹೆಚ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ಪುನರ್ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು.

(7) 13ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎಫ್) ಖಂಡದ ಮತ್ತು (ಹೆಚ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯರು ರಾಜ್ಯ ಸರ್ಕಾರವು, ಗೊತ್ತು ಪಡಿಸಬಹುದಾದಂಥ ಭತ್ಯಗಳನ್ನು ಪಡೆಯತಕ್ಕದ್ದು.

(15) ಅನರ್ಹತೆಗಳು : (1) ಯಾರು ರಾಜ್ಯ ಸಮನ್ವಯ ಸಮಿತಿಯ ಸದಸ್ಯರಾಗಿರುತ್ತಾರೋ ಅವರು

(1) (ಎ) ದಿವಾಳಿಯಾಗಿರುವ ಅಥವಾ ಯಾವುದೇ ಕಾಲದಲ್ಲಿ ದಿವಾಳಿಯೆಂದು ನ್ಯಾಯ ನಿರ್ಣೀತನಾದ ಅಥವಾ ಅವನ ಋಣಗಳ ಸಂದಾಯವನ್ನು ನಿಲಂಬನಗೊಳಿಸಿರುವ ಅಥವಾ ಅವನಿಗೆ ಸಾಲ ಕೊಟ್ಟವರೊಂದಿಗೆ ರಾಜಿ ಮಾಡಿಕೊಂಡಿರುವ ಅಥವಾ

(ಬಿ) ಅಸ್ವಸ್ಥಚಿತ್ತನಾಗಿರುವ ಮತ್ತು ಹಾಗೆಂದು ಘೋಷಿತನಾಗಿರುವವ ಅಥವಾ

(ಸಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃ ಪತನವನ್ನೊಳಗೊಂಡ ಒಂದು ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ ಅಥವಾ

(ಡಿ) ಯಾವುದೇ ಕಾಲದಲ್ಲಿ ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿರುವ ಅಥವಾ

(ಇ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ರಾಜ್ಯ ಸಮನ್ವಯ ಸಮಿತಿಯಲ್ಲಿ ಅವನ ಮುಂದುವರಿಕೆಯು ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟು ಮಾಡುವ ಹಾಗೆ ಸದಸ್ಯನಾಗಿ ತನ್ನ ಪದವನ್ನು ದುರುಪಯೋಗ ಮಾಡಿಕೊಂಡಿರುವ

– ಯಾವನೇ ವ್ಯಕ್ತಿಯು ರಾಜ್ಯ ಸಮನ್ವಯ ಸಮಿತಿಯ ಸದಸ್ಯನಾಗಿರತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಈ ಪ್ರಕರಣದ ಮೇರೆಗೆ ಸದಸ್ಯನನ್ನು ತೆಗೆದು ಹಾಕುವ ಯಾವುದೇ ಆದೇಶವನ್ನು ಸಂಬಂಧಪಟ್ಟ ಸದಸ್ಯನಿಗೆ ಅದರ ವಿರುದ್ಧ ಕಾರಣ ತೋರಿಸಲು ಯುಕ್ತ ಅವಕಾಶ ಕೊಡದ ಹೊರತು ಮಾಡತಕ್ಕದ್ದಲ್ಲ.

(3) 14ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಥವಾ (6)ನೇ ಉಪ–ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ತೆಗೆದುಹಾಕಲಾಗಿರುವ ಸದಸ್ಯನು, ಸದಸ್ಯನಾಗಿ ಪುನರ್ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

**16. ಸದಸ್ಯರು ಸ್ಥಾನಗಳನ್ನು ತೆರವು ಮಾಡುವುದು :** ರಾಜ್ಯ ಸಮನ್ವಯ ಸಮಿತಿಯ ಸದಸ್ಯನು 15ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅನರ್ಹತೆಗೊಳಗಾಗಿದ್ದರೆ ಅವನ ಸ್ಥಾನವು ತೆರವು ಆಗತಕ್ಕದ್ದು.

**17. ರಾಜ್ಯ ಸಮನ್ವಯ ಸಮಿತಿಯ ಸಭೆಗಳ :** ರಾಜ್ಯ ಸಮನ್ವಯ ಸಮಿತಿಯು ಪ್ರತಿ ಆರು ತಿಂಗಳಿಗೆ ಕನಿಷ್ಠ ಪಕ್ಷ ಒಂದು ಸಲ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ವ್ಯವಹಾರಗಳನ್ನು ನಡೆಸುವ ಬಗ್ಗೆ ನಿಯಮಿಸಬಹುದಾದಂತೆ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**18. ರಾಜ್ಯ ಸಮನ್ವಯ ಸಮಿತಿಯ ಕಾರ್ಯಗಳು :** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ರಾಜ್ಯ ಸಮನ್ವಯ ಸಮಿತಿಯು ಅಂಗವಿಕಲರಿಗೆ ಸಂಬಂಧಿಸಿದ ವಿಷಯಗಳಲ್ಲಿ ರಾಜ್ಯಮಟ್ಟದಲ್ಲಿ ಮಾರ್ಗದರ್ಶನ ಕೇಂದ್ರವಾಗಿ ಸೇವೆ ಸಲ್ಲಿಸತಕ್ಕದ್ದು ಮತ್ತು ಅಂಗವಿಕಲ ವ್ಯಕ್ತಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ದಿಸೆಯಲ್ಲಿ ಸಮಗ್ರ ವಿಕಾಸ ಕಾರ್ಯನೀತಿ ನಿರಂತರ ವಿಕಾಸಕ್ಕೆ ಅವಕಾಶಗಳನ್ನು ಒದಗಿಸತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಸಮಾನ್ಯಾ ಅನ್ವಯಕ್ಕೆ ಬಾಧಕವಾಗದಂತೆ ರಾಜ್ಯ ಸಮನ್ವಯ ಸಮಿತಿಯು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು, ಅವುಗಳೆಂದರೆ

(ಎ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ಕಾರ್ಯವಿಷಯಗಳೊಂದಿಗೆ ವ್ಯವಹರಿಸುವಂಥ ಎಲ್ಲ ಸರ್ಕಾರಿ ಇಲಾಖೆಗಳ ಮತ್ತು ಇತರೆ ಸರ್ಕಾರಿ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಚಟುವಟಿಕೆಗಳನ್ನು ಪರಾಮರ್ಶಿಸುವುದು ಮತ್ತು ಸಮನ್ವಯಗೊಳಿಸುವುದು,

(ಬಿ) ಅಂಗವಿಕಲ ವ್ಯಕ್ತಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಒಂದು ರಾಜ್ಯ ಕಾರ್ಯನೀತಿಯನ್ನು ರೂಪಿಸುವುದು.

(ಸಿ) ಅಂಗವಿಕಲತೆಯ ಸಂಬಂಧದಲ್ಲಿ ಕಾರ್ಯನೀತಿಗಳ, ಕಾರ್ಯಕ್ರಮಗಳು, ಶಾಸನರಚನೆ ಮತ್ತು ಯೋಜನೆಗಳನ್ನು ರೂಪಿಸುವುದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.

(ಡಿ) ಅಂಗವಿಕಲ ವ್ಯಕ್ತಿಗಳ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ದೇಣಿಗೆದಾರ ಏಜೆನ್ಸಿಗಳೊಂದಿಗೆ ಅವರು ನಿಧಿ ಒದಗಿಸುವ ನೀತಿಗಳ ಬಗ್ಗೆ ಸಮಾಲೋಚಿಸಿ ಪರಾಮರ್ಶಿಸುವುದು.

(ಇ) ಸಾರ್ವಜನಿಕ ಸ್ಥಳಗಳಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ, ಜನೋಪಯೋಗಿ ಸ್ಥಳಗಳಲ್ಲಿ, ಶಾಲೆಗಳಲ್ಲಿ ಮತ್ತು ಇತರೆ ಸಂಸ್ಥೆಗಳಲ್ಲಿ ಅಡೆತಡೆಯಿಲ್ಲ ಮುಕ್ತ ವಾತಾವರಣ ಕಲ್ಪಿಸುವುದು ಸೂಕ್ತವೆಂದು ಭಾವಿಸುವಂಥ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವುದು.

(ಎಫ್) ಅಂಗವಿಕಲ ವ್ಯಕ್ತಿಗಳು ಸಮಾನತೆ ಮತ್ತು ಪೂರ್ಣ ಪಾಲ್ಗೊಳ್ಳುವಿಕೆಯನ್ನು ಸಾಧಿಸುವ ಸಂಬಂಧದಲ್ಲಿ ರೂಪಿಸಲಾದ ಕಾರ್ಯನೀತಿಗಳ ಮತ್ತು ಕಾರ್ಯಕ್ರಮಗಳ ಪರಿಣಾಮವನ್ನು ಪರಿಶೀಲಿಸುವುದು ಮತ್ತು ಮೌಲ್ಯಮಾಪನ ಮಾಡುವುದು.

(ಜಿ) ರಾಜ್ಯ ಸರ್ಕಾರವು ಗೊತ್ತು ಪಡಿಸಬಹುದಾದಂತಹ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

**ರಾಜ್ಯ ಕಾರ್ಯನಿರ್ವಾಹಕ ಸಮಿತಿ : 19)** (1) ಈ ಅಧಿನಿಯಮದ ಮೇರೆಗೆ ಗೊತ್ತುಪಡಿಸಿದ ಕಾರ್ಯಗಳನ್ನು ನೆರವೇರಿಸುವುದಕ್ಕೆ ರಾಜ್ಯ ಕಾರ್ಯನಿರ್ವಾಹಕ ಸಮಿತಿ ಎಂದು ಕರೆಯುವ ಒಂದು ಸಮಿತಿಯನ್ನು ರಾಜ್ಯ ಸರ್ಕಾರವು ರಚಿಸತಕ್ಕದ್ದು.

(2) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು.

(ಎ) ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ, ಪದನಿಮಿತ್ತ ಅಧ್ಯಕ್ಷರು

(ಬಿ) ಆಯುಕ್ತರು, ಪದನಿಮಿತ್ತ ಸದಸ್ಯರು

(ಸಿ) ಆರೋಗ್ಯ, ಹಣಕಾಸು, ಗ್ರಾಮೀಣ ಅಭಿವೃದ್ಧಿ, ಶಿಕ್ಷಣ, ಕಲ್ಯಾಣ, ಸಾರ್ವಜನಿಕ ಸಿಬ್ಬಂದಿ ತರಬೇತಿ, ಸಾರ್ವಜನಿಕ ಕುಂದುಕೊರತೆಗಳು, ನಗರಾಭಿವೃದ್ಧಿ ವ್ಯವಹಾರಗಳು, ಕಾರ್ಮಿಕ ಮತ್ತು ಉದ್ಯೋಗ, ವಿಜ್ಞಾನ ಮತ್ತು ತಂತ್ರಜ್ಞಾನ ಈ ಇಲಾಖೆಗಳನ್ನು ಪ್ರತಿನಿಧಿಸುವುದಕ್ಕಾಗಿ ರಾಜ್ಯ ಸರ್ಕಾರದ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇಲ್ಲದಂಥ 9 ವ್ಯಕ್ತಿಗಳು, ಪದನಿಮಿತ್ತ ಸದಸ್ಯರು.

(ಡಿ) ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸುವಂತೆ ಅಂಗವಿಕಲರ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದಕ್ಕಾಗಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡುವ ಒಬ್ಬ ವ್ಯಕ್ತಿ, ಸದಸ್ಯರು

(ಇ) ಅಂಗವಿಕಲರಿಗೆ ಸಂಬಂಧಿಸಿರುವಂತಹ ಸರ್ಕಾರೇತರ ಸಂಸ್ಥೆಗಳನ್ನು ಅಥವಾ ಸಂಘ ಸಂಸ್ಥೆಗಳನ್ನು ಪ್ರತಿನಿಧಿಸಲು ಅಂಗವಿಕಲತೆಯ ಪ್ರತಿಯೊಂದು ವರ್ಗದಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡುವಂಥ, ಸಾಧ್ಯವಿರುವಷ್ಟು ಮಟ್ಟಿಗೆ ಅಂಗವಿಕಲರಾಗಿರುವಂತ ಐದು ಜನರು, ಸದಸ್ಯರು.

ಆದರೆ ಈ ಖಂಡದ ಮೇರೆಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡುವಾಗ, ರಾಜ್ಯ ಸರ್ಕಾರವು ಕೊನೆಪಕ್ಷ ಒಬ್ಬ ಮಹಿಳೆ ಮತ್ತು ಪರಿಶಿಷ್ಟ ಜಾತಿಗೆ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು.

(ಎಫ್) ಅಂಗವಿಕಲರ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ವ್ಯವಹಾರ ನೋಡಿಕೊಳ್ಳುವ ಕಲ್ಯಾಣ ಇಲಾಖೆಯ ಜಂಟಿ ಕಾರ್ಯದರ್ಶಿ, ಪದನಿಮಿತ್ತ ಸದಸ್ಯ ಕಾರ್ಯದರ್ಶಿ

(3)(2)ನೇ ಉಪ-ಪ್ರಕರಣದ (ಡಿ) ಖಂಡ ಮತ್ತು (ಇ) ಖಂಡದ ಮೇರೆಗೆ ನಾಮ ನಿರ್ದೇಶನಗೊಂಡ ಸದಸ್ಯರು ರಾಜ್ಯ ಸರ್ಕಾರವು ನಿರ್ಧಾರ ಪಡಿಸುವಂಥ ಭತ್ಯೆಗಳನ್ನು ಪಡೆಯತಕ್ಕದ್ದು.

(4)(ಡಿ) ಖಂಡ ಅಥವಾ (ಇ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ರಾಜ್ಯ ಸರ್ಕಾರವನ್ನು ಸಂಬೋಧಿಸಿ ಲಿಖಿತದಲ್ಲಿ ತನ್ನ ರುಜುವಿನೊಂದಿಗೆ ಬರೆದುಕೊಳ್ಳುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಆ ತರುವಾಯ ಸದರಿ ಸದಸ್ಯನ ಸ್ಥಾನವು ತೆರವು ಆಗತಕ್ಕದ್ದು.

**ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಕಾರ್ಯಗಳು : 20)** (1) ರಾಜ್ಯ ಕಾರ್ಯ ನಿರ್ವಾಹಕ ಸಮಿತಿಯು ರಾಜ್ಯ ಸಮನ್ವಯ ಸಮಿತಿಯ ಕಾರ್ಯನಿರ್ವಾಹಕ ಮಂಡಲಿಯಾಗಿರತಕ್ಕದ್ದು ಮತ್ತು ರಾಜ್ಯ ಸಮನ್ವಯ ಸಮಿತಿಯ ನಿರ್ಣಯಗಳನ್ನು ಜಾರಿಗೊಳಿಸುವ ಜವಾಬ್ದಾರಿ ಹೊಂದಿರತಕ್ಕದ್ದು.

(2) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು (1)ನೇ ಉಪ-ಪ್ರಕರಣದ ಉಪಬಂಧಗಳಿಗೆ ಬಾಧಕವಾಗದ ರೀತಿಯಲ್ಲಿ ರಾಜ್ಯ ಸಮನ್ವಯ ಸಮಿತಿಯು ತನಗೆ ವಹಿಸಿಕೊಡಬಹುದಾದಂಥ ತನ್ನ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

**ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಸಭೆಗಳು : 21)** ರಾಜ್ಯ ಕಾರ್ಯನಿರ್ವಾಹಕ ಸಮಿತಿ ಸಭೆಯು ಕನಿಷ್ಠ ಪಕ್ಷ 3 ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು ಮತ್ತು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಅದರ ಸಭೆಗಳಲ್ಲಿ ಅಂಗವಿಕಲರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಪ್ರಕ್ರಿಯಾ ನಿಯಮಗಳನ್ನು ಪರಿಶೀಲಿಸತಕ್ಕದ್ದು.

**ನಿರ್ದಿಷ್ಟ ಉದ್ದೇಶಕ್ಕಾಗಿ ರಾಜ್ಯ ಕಾರ್ಯ ನಿರ್ವಾಹಕ ಸಮಿತಿಗೆ ಜನರ ತಾತ್ಕಾಲಿಕ ಸದಸ್ಯತ್ವ**

22) (1) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಕ್ಕಾಗಿ ಈ ಅಧಿನಿಯಮದ ಮೇರೆಗೆ ತನ್ನ ಯಾವುದೇ ಕಾರ್ಯಗಳನ್ನು ನಿರ್ವಹಿಸುವಲ್ಲಿ ಯಾರೇ ವ್ಯಕ್ತಿಯ ನೆರವು ಅಥವಾ ಸಲಹೆಯನ್ನು ಪಡೆಯಬೇಕೆಂದು ಇಚ್ಛಿಸಿದಲ್ಲಿ, ಆ ವ್ಯಕ್ತಿಯನ್ನು ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದು.

(2) ಯಾವುದೇ ಉದ್ದೇಶಕ್ಕಾಗಿ (1)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ಸಹ ಸದಸ್ಯನಾದ ವ್ಯಕ್ತಿಗೆ, ಆ ಉದ್ದೇಶಕ್ಕೆ ಸಂಬಂಧಿಸಿದ ರಾಜ್ಯ ಕಾರ್ಯ ನಿರ್ವಾಹಕ ಸಮಿತಿಯ ಚರ್ಚೆಗಳಲ್ಲಿ ಭಾಗವಹಿಸುವ ಹಕ್ಕು ಇರತಕ್ಕದ್ದು, ಆದರೆ, ಸಮಿತಿಯ ಸಭೆಯಲ್ಲಿ ಮತ ಚಲಾಯಿಸುವ ಹಕ್ಕು ಇರುವುದಿಲ್ಲ ಮತ್ತು ಅವನು ಇತರ ಯಾವುದೇ ಉದ್ದೇಶಕ್ಕಾಗಿ ಸಮಿತಿಯ ಸದಸ್ಯನಾಗಿರತಕ್ಕದ್ದಲ್ಲ.

(3) ಯಾವುದೇ ಉದ್ದೇಶಕ್ಕಾಗಿ (1)ನೇ ಉಪ-ಪ್ರಕರಣದ ಮೇರೆಗೆ ಸದರಿ ಸಮಿತಿಗೆ ಸಹ ಸದಸ್ಯನಾದ ವ್ಯಕ್ತಿಗೆ ಸದರಿ ಸಮಿತಿಯ ಯಾವುದೇ ಸಭೆಗಳಲ್ಲಿ ಮತ್ತು ಇತರೆ ಕೆಲಸಗಳಲ್ಲಿ ಭಾಗವಹಿಸದ್ದಕ್ಕಾಗಿ ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ಶುಲ್ಕ ಮತ್ತು ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು.

**ನಿರ್ದೇಶನಗಳನ್ನು ನೀಡುವ ಅಧಿಕಾರ :** (23) ಈ ಅಧಿನಿಯಮದ ಮೇರೆಗೆ ತನ್ನ ಕಾರ್ಯಗಳನ್ನು ಪಾಲಿಸುವಲ್ಲಿ

(ಎ) ಕೇಂದ್ರ ಸರ್ಕಾರವು ಲಿಖಿತ ರೂಪದಲ್ಲಿ ನೀಡುವಂಥ ನಿರ್ದೇಶನಗಳನ್ನು ಕೇಂದ್ರ ಸಮನ್ವಯ ಸಮಿತಿಯು ಪಾಲಿಸಲು ಬದ್ಧವಾಗಿರತಕ್ಕದ್ದು ಮತ್ತು

(ಬಿ) ಕೇಂದ್ರ ಸಮನ್ವಯ ಸಮಿತಿ ಅಥವಾ ರಾಜ್ಯ ಸರ್ಕಾರವು ಲಿಖಿತ ರೂಪದಲ್ಲಿ ನೀಡುವಂಥ ನಿರ್ದೇಶನಗಳನ್ನು ರಾಜ್ಯ ಸಮನ್ವಯ ಸಮಿತಿಯು ಪಾಲಿಸಲು ಬದ್ಧವಾಗಿರತಕ್ಕದ್ದು.

ಆದರೆ, ರಾಜ್ಯ ಸರ್ಕಾರವು ನೀಡಿರುವ ನಿರ್ದೇಶನವು ಕೇಂದ್ರ ಸಮನ್ವಯ ಸಮಿತಿಯು ನೀಡಿದ ಯಾವುದೇ ನಿರ್ದೇಶನಕ್ಕೆ ಅಸಂಗತವಾಗಿದ್ದ ಪಕ್ಷದಲ್ಲಿ ಅಂಥ ವಿಷಯಗಳನ್ನು ತೀರ್ಮಾನಕ್ಕಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**ವ್ಯವಹರಣೆಗಳನ್ನು ನಡೆಸಲು ಖಾಲಿಸ್ಥಾನಗಳು ಅಮಾನ್ಯಗೊಳಿಸದಿರುವುದು :** (24) ಕೇಂದ್ರ ಸಮನ್ವಯ ಸಮಿತಿ, ಕೇಂದ್ರ ಕಾರ್ಯನಿರ್ವಾಹಕ ಸಮಿತಿ, ರಾಜ್ಯ ಸಮನ್ವಯ ಸಮಿತಿ ಅಥವಾ ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ಮಾಡಿದ ಕಾರ್ಯ ಅಥವಾ ವ್ಯವಹರಣೆಗಳನ್ನು ಕೇವಲ ಈಗಿರುವ ಯಾವುದೇ ಖಾಲಿಸ್ಥಾನದ ಆಧಾರದ ಮೇಲೆ ಅಥವಾ ಅಂಥ ಸಮಿತಿಯ ರಚನೆಯಲ್ಲಿನ ಯಾವುದೇ ದೋಷದ ಆಧಾರದ ಮೇಲೆ ಪ್ರಶ್ನಿಸತಕ್ಕದ್ದಲ್ಲ.



16

## ಅಧ್ಯಾಯ – IV

## ಅಂಗವಿಕಲತೆ ತಡೆಗಟ್ಟುವುದು ಮತ್ತು ಪ್ರಾರಂಭದಲ್ಲೇ ಪತ್ತೆ ಹಚ್ಚುವುದು

ಅಂಗವಿಕಲತೆ ಉಂಟಾಗುವುದನ್ನು ತಡೆಗಟ್ಟುವುದಕ್ಕಾಗಿ ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಕೈಗೊಳ್ಳತಕ್ಕ ಕೆಲವು ಕ್ರಮಗಳು : (25) ಅಂಗವಿಕಲತೆ ಉಂಟಾಗುವುದನ್ನು ತಡೆಗಟ್ಟುವ ಉದ್ದೇಶದಿಂದ ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಹಣಕಾಸಿನ ಸಾಮರ್ಥ್ಯದ ಮತ್ತು ಅಭಿವೃದ್ಧಿಯ ಮಿತಿಗಳೊಳಗೆ

(ಎ) ಅಂಗವಿಕಲತೆ ಉಂಟಾಗುವ ಕಾರಣಗಳ ಸಂಬಂಧವಾಗಿ ಸಮೀಕ್ಷೆ, ಅನ್ವೇಷಣೆ ಮತ್ತು ಸಂಶೋಧನೆಗಳನ್ನು ಕೈಗೊಳ್ಳಬೇಕು ಅಥವಾ ಕೈಗೊಳ್ಳುವಂತೆ ಮಾಡಬೇಕು.

(ಬಿ) ಅಂಗವಿಕಲತೆ ತಡೆಯುವಂಥ ವಿವಿಧ ವಿಧಾನಗಳಿಗೆ ಉತ್ತೇಜನ ನೀಡುವಿಕೆ

(ಸಿ) "ಅಂಗವಿಕಲತೆ ಅಪಾಯ ಸಂಭವ"ದ ಪ್ರಕರಣಗಳನ್ನು ಗುರ್ತಿಸುವ ಸಲುವಾಗಿ ವರ್ಷದಲ್ಲಿ ಕನಿಷ್ಠ ಒಂದು ಬಾರಿಯಾದರೂ ಎಲ್ಲ ಮಕ್ಕಳನ್ನು ಪರೀಕ್ಷೆಗೆ ಒಳಪಡಿಸಬೇಕು.

(ಡಿ) ಪ್ರಾಥಮಿಕ ಆರೋಗ್ಯ ಕೇಂದ್ರದ ಅನ್ವಯ ಸಿಬ್ಬಂದಿಗೆ ತರಬೇತಿಗಾಗಿ ಸೌಲಭ್ಯಗಳನ್ನು ಕಲ್ಪಿಸಬೇಕು.

(ಇ) ಸಾಮಾನ್ಯ ಆರೋಗ್ಯ ತತ್ವ ಮತ್ತು ನೈರ್ಮಲ್ಯ ವ್ಯವಸ್ಥೆ ಬಗ್ಗೆ ಅರಿವು ಮೂಡಿಸುವ ಆಂದೋಲನವನ್ನು ಪ್ರಾಯೋಜಿಸಬೇಕು ಅಥವಾ ಪ್ರಾಯೋಜಿಸುವಂತೆ ಮಾಡಬೇಕು ಮತ್ತು ಅವಶ್ಯವಿರುವ ಮಾಹಿತಿಯನ್ನು ಪ್ರಸಾರ ಮಾಡಬೇಕು ಅಥವಾ ಪ್ರಸಾರವಾಗುವಂತೆ ಮಾಡಬೇಕು.

(ಎಫ್) ಪ್ರಸವ ಪೂರ್ವ, ಪ್ರಸವ ಸಮಯ ಮತ್ತು ಪ್ರಸವದ ನಂತರ ಮಕ್ಕಳ ಮತ್ತು ತಾಯಿಯ ಆರೋಗ್ಯದ ಬಗ್ಗೆ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

(ಜಿ) ಶಾಲಾ ಪೂರ್ವ, ಶಾಲೆಗಳ, ಪ್ರಾಥಮಿಕ ಆರೋಗ್ಯ ಕೇಂದ್ರಗಳ, ಗ್ರಾಮ ಸೇವಕರ ಮತ್ತು ಅಂಗನವಾಡಿ ಕಾರ್ಯಕರ್ತರ ಮೂಲಕ ಸಾರ್ವಜನಿಕರಿಗೆ ತಿಳಿವಳಿಕೆ ನೀಡಬೇಕು.

(ಹೆಚ್) ಅಂಗವಿಕಲತೆ ಉಂಟಾಗುವ ಕಾರಣಗಳ ಬಗ್ಗೆ ಮತ್ತು ಅದು ಬರದಂತೆ ಅನುಸರಿಸಬೇಕಾದ ನಿವಾರಕ ಕ್ರಮಗಳ ಬಗ್ಗೆ ದೂರದರ್ಶನ, ರೇಡಿಯೋ ಮತ್ತು ಇತರೆ ಸಮೂಹ ಮಾಧ್ಯಮಗಳ ಮೂಲಕ ಸಹ ಅರಿವು ಮೂಡಿಸಬೇಕು.

## ಅಧ್ಯಾಯ – V

## ಶಿಕ್ಷಣ

ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ಮಕ್ಕಳಿಗೆ ಉಚಿತ ಶಿಕ್ಷಣ ಇತ್ಯಾದಿಗಳನ್ನು ಒದಗಿಸುವುದು :

(26) ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು

(ಎ) ಪ್ರತಿಯೊಂದು ಅಂಗವಿಕಲ ಮಗು, ಅದು 18 ವರ್ಷ ವಯಸ್ಸನ್ನು ಹೊಂದುವವರೆಗೆ, ಅತ್ಯಂತ ಸೂಕ್ತ ಪರಿಸರದಲ್ಲಿ ಉಚಿತ ಶಿಕ್ಷಣ ಪಡೆಯುವ ಅವಕಾಶ ಹೊಂದಿರುವುದನ್ನು ಖಚಿತಪಡಿಸಿಕೊಳ್ಳಬೇಕು.

(ಬಿ) ಸಾಮಾನ್ಯ ಶಾಲೆಗಳಲ್ಲಿ ಅಂಗವಿಕಲ ವಿದ್ಯಾರ್ಥಿಗಳಿಗೆ ಸಮಾನ ಅವಕಾಶವನ್ನೊದಗಿಸುವುದಕ್ಕೆ ಪ್ರಯತ್ನಿಸಬೇಕು.

(ಸಿ) ವಿಶೇಷ ಶಿಕ್ಷಣದ ಅವಶ್ಯಕತೆ ಇರುವ ಅಂಗವಿಕಲ ಮಕ್ಕಳಿಗಾಗಿ ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ವಿಶೇಷ ಶಾಲೆಗಳನ್ನು ಸ್ಥಾಪಿಸಲು ಉತ್ತೇಜನ ನೀಡಬೇಕಾಗಿದ್ದು ದೇಶದ ಯಾವುದೇ ಭಾಗದಲ್ಲಿ ವಾಸಿಸುವ ಅಂಗವಿಕಲ ಮಕ್ಕಳಿಗೆ ಅಂಥ ಶಾಲೆಗಳಿಗೆ ಪ್ರವೇಶಾವಕಾಶ ದೊರೆಯುವಂತಿರಬೇಕು.

(ಡಿ) ವೃತ್ತಿ ತರಬೇತಿ ಸೌಲಭ್ಯಗಳೊಂದಿಗೆ ಅಂಗವಿಕಲ ಮಕ್ಕಳಿಗಾಗಿ ವಿಶೇಷ ಶಾಲೆಗಳನ್ನು ಒದಗಿಸಲು ಪ್ರಯತ್ನಿಸಬೇಕು.

ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಔಪಚಾರಿಕವಲ್ಲದ ಶಿಕ್ಷಣ, ಇತ್ಯಾದಿಗಳಿಗಾಗಿ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು : (27) ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಿಗಳು ಅಧಿಸೂಚನೆ ಮೂಲಕ ಈ ಮುಂದಿನ ಯೋಜನೆಗಳನ್ನು ರೂಪಿಸತಕ್ಕದ್ದು.

(ಎ) ಐದನೆಯ ತರಗತಿಯವರೆಗೆ ಶಿಕ್ಷಣವನ್ನು ಪೂರ್ಣಗೊಳಿಸಿ ಮತ್ತು ಪೂರ್ಣಕಾಲಿಕವಾಗಿ ತಮ್ಮ ಓದನ್ನು ಮುಂದುವರಿಸಲು ಸಾಧ್ಯವಿಲ್ಲದಂಥ ಅಂಗವಿಕಲ ಮಕ್ಕಳಿಗಾಗಿ ಅಂಶಕಾಲಿಕ ಶಿಕ್ಷಣ ತರಗತಿಗಳನ್ನು ನಡೆಸುವುದು.

(ಬಿ) ಹದಿನಾರು ಮತ್ತು ಅದಕ್ಕೂ ಮೇಲ್ಪಟ್ಟ ವಯಸ್ಸಿನ ಮಕ್ಕಳಿಗಾಗಿ ಔಪಚಾರಿಕ ಅಕ್ಷರ ಜ್ಞಾನ ಕಲಿಸಲು ವಿಶೇಷ ಅಂಶಕಾಲಿಕ ಶಿಕ್ಷಣ ತರಗತಿಗಳನ್ನು ನಡೆಸುವುದು.

(ಸಿ) ಸೂಕ್ತ ತರಬೇತಿ ನಂತರ ಗ್ರಾಮೀಣ ಪ್ರದೇಶಗಳಲ್ಲಿ ದೊರೆಯುವ ಮಾನವ ಶಕ್ತಿಯನ್ನು ಬಳಸಿಕೊಂಡು ಅವರಿಗೆ ಔಪಚಾರಿಕವಲ್ಲದ ಶಿಕ್ಷಣ ನೀಡುವುದು.

(ಡಿ) ಮುಕ್ತ ಶಾಲೆಗಳ ಅಥವಾ ಮುಕ್ತ ವಿಶ್ವವಿದ್ಯಾನಿಲಯಗಳ ಮೂಲಕ ಶಿಕ್ಷಣ ನೀಡುವುದು.

(ಇ) ತರಗತಿಗಳನ್ನು ನಡೆಸುವುದು ಮತ್ತು ಪರಸ್ಪರ ಎಲೆಕ್ಟ್ರಾನಿಕ್ ಅಥವಾ ಇತರೆ ಮಾಧ್ಯಮದ ಮೂಲಕ ಶಿಕ್ಷಣ ನೀಡುವುದು ಮತ್ತು ಚರ್ಚಿಸುವುದು.

(ಎಫ್) ಪ್ರತಿಯೊಂದು ಅಂಗವಿಕಲ ಮಗುವಿಗೂ, ಅವನ ಶಿಕ್ಷಣಕ್ಕೆ ಅವಶ್ಯವಿರುವ ವಿಶೇಷ ಪುಸ್ತಕ ಮತ್ತು ಸಲಕರಣೆಗಳನ್ನು ಉಚಿತವಾಗಿ ಒದಗಿಸುವುದು.

**ಅಂಗವಿಕಲ ಮಕ್ಕಳಿಗೆ ನೆರವಾಗುವ ಹೊಸ ಸಾಧನ ಸಲಕರಣೆಗಳನ್ನು, ಬೋಧನಾ ಸಾಮಗ್ರಿ ಇತ್ಯಾದಿಗಳನ್ನು ವಿನ್ಯಾಸಗೊಳಿಸುವ ಮತ್ತು ಅಭಿವೃದ್ಧಿಗೊಳಿಸುವ ಕುರಿತು ಸಂಶೋಧನೆ :** (28) ಸಮುಚಿತ ಸರ್ಕಾರವು ಶಿಕ್ಷಣದಲ್ಲಿ ಅಂಗವಿಕಲ ಮಕ್ಕಳಿಗೆ ಸಮಾನ ಅವಕಾಶಗಳನ್ನು ಒದಗಿಸಲು ಅವಶ್ಯವಿರುವಂಥ ಹೊಸ ಹೊಸ ಸಾಧನ, ಬೋಧನ ಸಲಕರಣೆ, ವಿಶೇಷ ಬೋಧನಾ ಸಾಮಗ್ರಿಗಳು ಅಥವಾ ಇತರೆ ಸಲಕರಣೆಗಳನ್ನು ವಿನ್ಯಾಸಗೊಳಿಸುವ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಅಧಿಕೃತ ಮತ್ತು ಸರ್ಕಾರೇತರ ಏಜೆನ್ಸಿಗಳ ಮುಖಾಂತರ ಸೂಕ್ತ ಸಂಶೋಧನೆ ಪ್ರಾರಂಭಿಸತಕ್ಕದ್ದು ಅಥವಾ ಪ್ರಾರಂಭಿಸುವಂತೆ ತಕ್ಕ ಏರ್ಪಾಟುಗಳನ್ನು ಮಾಡತಕ್ಕದ್ದು.

**ಅಂಗವಿಕಲ ಮಕ್ಕಳಿಗಾಗಿ ಶಾಲೆಗಳಲ್ಲಿ, ತರಬೇತಿ ಪಡೆದ ಮಾನವ ಶಕ್ತಿಯನ್ನು ವೃದ್ಧಿಗೊಳಿಸಲು ಸಮುಚಿತ ಸರ್ಕಾರಗಳು ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವುದು :** (29) ಸಮುಚಿತ ಸರ್ಕಾರಗಳು ವಿಶೇಷವಾಗಿ ಅಂಗವಿಕಲತೆಯಲ್ಲಿ ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ವೃದ್ಧಿಪಡಿಸುವುದಕ್ಕಾಗಿ ಸಾಕಷ್ಟು ಸಂಖ್ಯೆಯಲ್ಲಿ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸತಕ್ಕದ್ದು ಮತ್ತು ರಾಷ್ಟ್ರೀಯ ಸಂಸ್ಥೆ ಮತ್ತು ಇತರ ಸ್ವಯಂ ಸೇವಾ ಸಂಸ್ಥೆಗಳಿಗೆ ನೆರವು ನೀಡತಕ್ಕದ್ದು. ಇದರಿಂದಾಗಿ ಅಂಗವಿಕಲ ಮಕ್ಕಳ ವಿಶೇಷ ಶಾಲೆ ಮತ್ತು ಸಂಯೋಜಿತ ಶಾಲೆಗಳಿಗೆ ತರಬೇತಿ ಪಡೆದ ಅವಶ್ಯವಿರುವ ಮಾನವಶಕ್ತಿ ದೊರೆತಂತಾಗುತ್ತದೆ.

**ಸಮುಚಿತ ಸರ್ಕಾರಗಳು ಸಾರಿಗೆ ಸೌಲಭ್ಯ, ಪುಸ್ತಕ ಇತ್ಯಾದಿಗಳನ್ನು ಒದಗಿಸುವುದಕ್ಕಾಗಿ ವ್ಯಾಪಕ ಶಿಕ್ಷಣ ಯೋಜನೆಯನ್ನು ಸಿದ್ಧಪಡಿಸುವುದು :** (30) ಈ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ ಸಮುಚಿತ ಸರ್ಕಾರಗಳು ಅಧಿಸೂಚನೆ ಮೂಲಕ ವ್ಯಾಪಕ ಶಿಕ್ಷಣ ನೀತಿಯನ್ನು ಸಿದ್ಧಪಡಿಸತಕ್ಕದ್ದು, ಅದರಲ್ಲೂ ಈ ಕೆಳಕಂಡವುಗಳ ಬಗ್ಗೆ ಉಪಬಂಧ ಕಲ್ಪಿಸಿರಬೇಕು.

(ಎ) ಅಂಗವಿಕಲ ಮಕ್ಕಳಿಗೆ ಸಾರಿಗೆ ಸೌಲಭ್ಯ ಅಥವಾ ಅವರ ತಂದೆ ತಾಯಿ ಅಥವಾ ಪೋಷಕರಿಗೆ ಅವರ ಮಕ್ಕಳನ್ನು ಶಾಲೆಗೆ ಕರೆತರಲು ಸಾಧ್ಯವಾಗುವಂತೆ ಬದಲಿ ಹಣಕಾಸಿನ ಪ್ರೋತ್ಸಾಹಗಳನ್ನೊದಗಿಸುವುದು.

(ಬಿ) ವೃತ್ತಿಪರ ಮತ್ತು ವೃತ್ತಿಕಾರ್ಯದಲ್ಲಿ ತರಬೇತಿ ನೀಡುವ ಸಲುವಾಗಿ ಶಾಲೆ, ಕಾಲೇಜು ಅಥವಾ ಇತರೆ ಶಿಕ್ಷಣ ಸಂಸ್ಥೆಗಳಲ್ಲಿ ಅಂಗವಿಕಲರ ಚಲನೆಗೆ ಅಡ್ಡಿ ಉಂಟಾಗುವಂತಹ ಅಡೆತಡೆಗಳನ್ನು ತೆಗೆಯುವುದು.

(ಸಿ) ಶಾಲೆಗೆ ಹಾಜರಾಗುವ ಅಂಗವಿಕಲ ಮಕ್ಕಳಿಗೆ ಪುಸ್ತಕ, ಸಮವಸ್ತ್ರ ಮತ್ತು ಇತರೆ ಸಾಮಗ್ರಿಗಳನ್ನು ಒದಗಿಸುವುದು.

(ಡಿ) ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡುವುದು.

(ಇ) ಅಂಗವಿಕಲ ಮಕ್ಕಳನ್ನು ನಿಯುಕ್ತಿ ಮಾಡುವ ಸಂಬಂಧದಲ್ಲಿ ತಂದೆ ತಾಯಿಯರ ಕುಂದುಕೊರತೆಗಳನ್ನು ಸರಿಪಡಿಸುವ ಸಲುವಾಗಿ ಒಂದು ವಿಭಾಗವನ್ನು ಸ್ಥಾಪಿಸುವುದು.

(ಎಫ್) ಅಂಧ ಮಕ್ಕಳ ಮತ್ತು ಕಡಿಮೆ ದೃಷ್ಟಿ ಇರುವ ಮಕ್ಕಳ ಪ್ರಯೋಜನಕ್ಕಾಗಿ ಶುದ್ಧ ಗಣಿತಾಂಕ ಪ್ರಶ್ನೆಗಳನ್ನು ತೊಡೆದುಹಾಕಲು ಪರೀಕ್ಷಾ ಪದ್ಧತಿಯಲ್ಲಿ ಸೂಕ್ತ ಬದಲಾವಣೆ ತರುವುದು.

(ಜಿ) ಅಂಗವಿಕಲ ಮಕ್ಕಳ ಸೌಕರ್ಯಕ್ಕಾಗಿ ಪಠ್ಯ ವಿಷಯಗಳನ್ನು ಪುನರ್ ರಚಿಸುವುದು.

(ಹೆಚ್) ಶ್ರವಣ ತೊಂದರೆಯಿರುವ ಮಕ್ಕಳು ಪಠ್ಯ ವಿಷಯದ ಭಾಗವಾಗಿ ಒಂದೇ ಒಂದು ಭಾಷೆಯನ್ನು ಕಲಿಯುವಂತೆ ಪಠ್ಯ ವಿಷಯಗಳನ್ನು ಪುನರ್ ರಚಿಸುವುದು.

**ಶೈಕ್ಷಣಿಕ ಸಂಸ್ಥೆಗಳು ದೃಷ್ಟಿ ದೋಷವಿರುವ ವಿದ್ಯಾರ್ಥಿಗಳಿಗೆ ಅನುಲೇಖಕರನ್ನು ಒದಗಿಸುವುದು. :** (31) ಎಲ್ಲ ಶೈಕ್ಷಣಿಕ ಸಂಸ್ಥೆಗಳು ದೃಷ್ಟಿದೋಷವಿರುವ ವಿದ್ಯಾರ್ಥಿಗಳಿಗೆ ಮತ್ತು ಕಡಿಮೆ ದೃಷ್ಟಿ ಇರುವ ವಿದ್ಯಾರ್ಥಿಗಳಿಗೆ ಅನುಲೇಖಕರನ್ನು ಒದಗಿಸತಕ್ಕದ್ದು ಅಥವಾ ಒದಗಿಸಲು ಏರ್ಪಾಡು ಮಾಡತಕ್ಕದ್ದು.

# ಅಧ್ಯಾಯ – VI

## ಉದ್ಯೋಗ

**ಅಂಗವಿಕಲ ವ್ಯಕ್ತಿಗಳಿಗಾಗಿ ಮೀಸಲಿಡ ಬಹುದಾದ ಹುದ್ದೆಗಳನ್ನು ಗುರ್ತಿಸುವುದು :** (32) ಸಮುಚಿತ ಸರ್ಕಾರವು

(ಎ) ಕಾರ್ಯ ಸಂಸ್ಥೆಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗಾಗಿ ಮೀಸಲಿಡಬಹುದಾದ ಹುದ್ದೆಗಳನ್ನು ಗುರ್ತಿಸಬೇಕು.

(ಬಿ) ಮೂರು ವರ್ಷಗಳಿಗೆ ಮೀರದಂತೆ ನಿಯತಕಾಲಿಕ ಅಂತರಗಳಲ್ಲಿ ಗುರ್ತಿಸಲಾದ ಹುದ್ದೆಗಳ ಪಟ್ಟಿಯನ್ನು ಅವಲೋಕಿಸಬೇಕು ಮತ್ತು ತಂತ್ರಜ್ಞಾನದಲ್ಲಿನ ಬೆಳವಣಿಗೆಗಳನ್ನು ಗಣನೆಗೆ ತೆಗೆದುಕೊಂಡು ಆ ದಿನಾಂಕದವರೆಗಿನ ಪಟ್ಟಿಯನ್ನು ಸಿದ್ಧಪಡಿಸಬೇಕು.

**ಹುದ್ದೆಗಳ ಮೀಸಲಾತಿ :** (33) ಪ್ರತಿಯೊಂದು ಸಮುಚಿತ ಸರ್ಕಾರವು ಪ್ರತಿಯೊಂದು ಕಾರ್ಯಸಂಸ್ಥೆಯಲ್ಲೂ ಈ ಮುಂದಿನ ವ್ಯಕ್ತಿಗಳಿಗಾಗಿ ಪ್ರತಿಯೊಂದು ಅಂಗವಿಕಲತೆಗಾಗಿ ಶೇಕಡ 1ರಷ್ಟು ಅಂಗವಿಕಲತೆ ಇರುವ ವ್ಯಕ್ತಿಗಳನ್ನು ಗುರ್ತಿಸಿ ಹಾಗೆ ಗುರ್ತಿಸಲಾದ ಹುದ್ದೆಗಳ ಪ್ರತಿಯೊಂದು ವರ್ಗದ ವ್ಯಕ್ತಿಗಳಿಗೆ ಅಥವಾ ವರ್ಗಗಳಿಗೆ ಶೇಕಡ ಮೂರಕ್ಕಿಂತ ಕಡಿಮೆ ಇಲ್ಲದಂತೆ ನಿಗದಿಪಡಿಸತಕ್ಕದ್ದು.

(1) ದೃಷ್ಟಿಹೀನತೆ ಅಥವಾ ಕಡಿಮೆ ದೃಷ್ಟಿ ಇರುವಿಕೆ

(2) ಶ್ರವಣ ದೋಷವುಳ್ಳವರು

(3) ಲೋಕೊಮೋಟರ್ ವಿಕಲತೆ ಅಥವಾ ಸೆರಬ್ರಲ್ ಪಾಲ್ಸಿ

ಆದರೆ, ಸಮುಚಿತ ಸರ್ಕಾರವು, ಯಾವುದೇ ಇಲಾಖೆ ಅಥವಾ ಕಾರ್ಯ ಸಂಸ್ಥೆಯಲ್ಲಿ ಯಾವ ರೀತಿಯ ಕೆಲಸವನ್ನು ನಿರ್ವಹಿಸಲಾಗುತ್ತಿದೆ ಎಂಬುದನ್ನು ಮನಗಂಡು ಅಧಿಸೂಚನೆ ಮೂಲಕ ಮತ್ತು ಅಂಥ ಅಧಿಸೂಚನೆಯಲ್ಲಿ ಷರತ್ತುಗಳನ್ನೇನಾದರೂ ನಿರ್ದಿಷ್ಟಪಡಿಸಿದ್ದರೆ ಅವುಗಳಿಗೆ ಒಳಪಟ್ಟು ಈ ಪ್ರಕರಣದ ಉಪಬಂಧಗಳಿಂದ ಯಾವುದೇ ಕಾರ್ಯ ಸಂಸ್ಥೆಗೆ ವಿನಾಯಿತಿ ಕೊಡಬಹುದು.

**ವಿಶೇಷ ಉದ್ಯೋಗ ವಿನಿಮಯ ಕೇಂದ್ರ :** (34) (1) ಸಮುಚಿತ ಸರ್ಕಾರವು ಅಧಿಸೂಚನೆ ಹೊರಡಿಸಿ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ, ಪ್ರತಿಯೊಂದು ಕಾರ್ಯಸಂಸ್ಥೆಯ ನಿಯೋಜಕನನ್ನು ಅಂಥ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಆ ಕಾರ್ಯಸಂಸ್ಥೆಯಲ್ಲಿ ಇರುವ ಅಥವಾ ಇರಬಹುದಾದ ಖಾಲಿ ಹುದ್ದೆಗಳಲ್ಲಿ ಅಂಗವಿಕಲ ವ್ಯಕ್ತಿಗಳನ್ನು ನಿಯೋಜಿಸಿರುವ ಹುದ್ದೆಗಳ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಾಹಿತಿ ಅಥವಾ ವಿವರಪಟ್ಟಿಗಳನ್ನು ಒದಗಿಸಲು ಅಗತ್ಯಪಡಿಸತಕ್ಕದ್ದು ಮತ್ತು ಕಾರ್ಯಸಂಸ್ಥೆಯು ಆನಂತರ ಅಂಥ ಕೋರಿಕೆಯನ್ನು ಪಾಲಿಸತಕ್ಕದ್ದು.

(2) ಮಾಹಿತಿ ಅಥವಾ ವಿವರಗಳನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಅಂತರಾವಧಿಯಲ್ಲಿ ಆ ನಮೂನೆಯಲ್ಲಿ ಒದಗಿಸತಕ್ಕದ್ದು ಮತ್ತು ಅವುಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ಇರತಕ್ಕದ್ದು.

**ಯಾವುದೇ ಕಾರ್ಯಸಂಸ್ಥೆಯ ವಶದಲ್ಲಿರುವ ದಾಖಲೆ ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕೆ ಅಧಿಕಾರ :**

(35) ವಿಶೇಷ ಉದ್ಯೋಗ ವಿನಿಮಯ ಕೇಂದ್ರದಿಂದ ಲಿಖಿತದಲ್ಲಿ ಪ್ರಾಧಿಕಾರ ಪಡೆದ ಯಾವನೇ ವ್ಯಕ್ತಿಯು, ಯಾವುದೇ ಕಾರ್ಯಸಂಸ್ಥೆಯ ವಶದಲ್ಲಿರುವ ಯಾವುದೇ ಸಂಬಂಧಪಟ್ಟ ದಾಖಲೆಗಳನ್ನು ನೋಡುವ ಅವಕಾಶ ಹೊಂದಿರತಕ್ಕದ್ದು ಮತ್ತು ಅಂಥ ದಾಖಲೆ ಅಥವಾ ದಸ್ತಾವೇಜುಗಳನ್ನು ಇಟ್ಟಿರಬಹುದೆಂದು ಅವನು ಭಾವಿಸುವಂಥ ಸ್ಥಳಗಳಿಗೆ ಯಾವುದೇ ಯುಕ್ತ ಕಾಲದಲ್ಲಿ ಪ್ರವೇಶಿಸಬಹುದು ಮತ್ತು ಪರೀಕ್ಷಿಸಬಹುದು ಅಥವಾ ಸಂಬಂಧಪಟ್ಟ ದಾಖಲೆ ಅಥವಾ ದಸ್ತಾವೇಜುಗಳ ನಕಲುಗಳನ್ನು ತೆಗೆದುಕೊಳ್ಳಬಹುದು ಅಥವಾ ಯಾವುದೇ ಮಾಹಿತಿ ಪಡೆಯುವುದಕ್ಕಾಗಿ ಅವಶ್ಯವಿರುವ ಯಾವುದೇ ಪ್ರಶ್ನೆಯನ್ನು ಕೇಳಬಹುದು.

**ಭರ್ತಿಮಾಡದೇ ಇರುವ ಖಾಲಿ ಹುದ್ದೆಗಳನ್ನು ಮುಂದುವರಿಸಿಕೊಂಡು ಬರುವುದು :** (36) ಯಾವುದೇ ನೇಮಕಾತಿ ವರ್ಷದಲ್ಲಿ 33ನೇ ಪ್ರಕರಣದ ಮೇರೆಗೆ ಇರುವ ಯಾವುದೇ ಖಾಲಿ ಹುದ್ದೆಯನ್ನು ಸೂಕ್ತ ಅಂಗವಿಕಲ ವ್ಯಕ್ತಿಗಳು ದೊರೆಯದೆ ಇದ್ದ ಅಥವಾ ಯಾವುದೇ ಇತರ ಸಾಕಷ್ಟು ಕಾರಣಕ್ಕಾಗಿ ಭರ್ತಿ ಮಾಡಲು ಸಾಧ್ಯವಾಗದೇ ಇದ್ದಾಗ, ಅಂಥ ಖಾಲಿ ಹುದ್ದೆಯನ್ನು ಮುಂದಿನ ನೇಮಕಾತಿ ವರ್ಷಕ್ಕೆ ಮುಂದುವರಿಸಿಕೊಂಡು ಬರತಕ್ಕದ್ದು ಮತ್ತು ಮುಂದಿನ ನೇಮಕಾತಿ ವರ್ಷದಲ್ಲೂ ಸೂಕ್ತ ಅಂಗವಿಕಲ ವ್ಯಕ್ತಿ ದೊರೆಯದಿದ್ದಲ್ಲಿ, ಮೂರು ಪ್ರವರ್ಗದ ಪೈಕಿ ಅಂತರಿಕ ಬದಲಾವಣೆ ಮೂಲಕ ಹುದ್ದೆಯನ್ನು ತುಂಬಬಹುದು ಮತ್ತು ಆ ವರ್ಷದಲ್ಲಿ ಅಂಗವಿಕಲ ವ್ಯಕ್ತಿಗಳು ದೊರೆಯದಿದ್ದಲ್ಲಿ ನಿಯೋಜಕರು ಅಂಗವಿಕಲ ವ್ಯಕ್ತಿಯನ್ನು ಹೊರತು ಪಡಿಸಿ ಇತರೆ ವ್ಯಕ್ತಿಯನ್ನು ನೇಮಕಾತಿ ಮಾಡಿಕೊಳ್ಳಬಹುದು.

ಆದರೆ, ಒಂದು ಕಾರ್ಯಸಂಸ್ಥೆಯಲ್ಲಿ ಖಾಲಿ ಹುದ್ದೆಯ ಸ್ವರೂಪದ ಕಾರಣ ಸಂಬಂಧಪಟ್ಟ ಆ ಪ್ರವರ್ಗದ ವ್ಯಕ್ತಿಯನ್ನು ನಿಯೋಜಿಸಿಕೊಳ್ಳಲಾಗದಿದ್ದ ಸಂದರ್ಭದಲ್ಲಿ ಅಂಥ ಖಾಲಿ ಹುದ್ದೆಯನ್ನು ಸಮುಚಿತ ಸರ್ಕಾರದ ಪೂರ್ವ ಅನುಮೋದನೆ ಪಡೆದು ಮೂರು ಪ್ರವರ್ಗಗಳ ಪೈಕಿ ಅಂತರಿಕ ಬದಲಾವಣೆ ಮಾಡಿಕೊಳ್ಳಬಹುದು.

**ನಿಯೋಜಕರು ದಾಖಲೆಗಳನ್ನು ನಿರ್ವಹಿಸುವುದು :** (37) (1) ಪ್ರತಿಯೊಬ್ಬ ನಿಯೋಜಕರು, ತನ್ನ ಕಾರ್ಯಸಂಸ್ಥೆಯಲ್ಲಿ ನಿಯೋಜಿತರಾದ ಅಂಗವಿಕಲ ವ್ಯಕ್ತಿಯ ಸಂಬಂಧದಲ್ಲಿ ಸಮುಚಿತ ಸರ್ಕಾರವು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ದಾಖಲೆಗಳನ್ನು ಇಡತಕ್ಕದ್ದು.

(2) (1) ನೇ ಉಪ-ಪ್ರಕರಣದ ಮೇರೆಗೆ ನಿರ್ವಹಿಸಿಕೊಂಡು ಬಂದ ದಾಖಲೆಗಳನ್ನು ಸಮುಚಿತ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಸಂಬಂಧವಾಗಿ ಅಧಿಕಾರ ಹೊಂದಿರಬಹುದಾದಂಥ ವ್ಯಕ್ತಿಗಳಿಗೆ ಎಲ್ಲ ಸೂಕ್ತ ಸಮಯದಲ್ಲಿ ಪರಿಶೀಲಿಸಲೂ ಅವಕಾಶವಿರತಕ್ಕದ್ದು.

**ಅಂಗವಿಕಲ ವ್ಯಕ್ತಿಗಳಿಗೆ ಉದ್ಯೋಗ ದೊರಕಿಸಿಕೊಡಲು ಯೋಜನೆಗಳು :** (38) (1) ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳಿಗೆ ಉದ್ಯೋಗ ದೊರಕುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅಧಿಸೂಚನೆ ಮೂಲಕ ಯೋಜನೆಗಳನ್ನು ರೂಪಿಸತಕ್ಕದ್ದು ಮತ್ತು ಅಂಥ ಯೋಜನೆಯಲ್ಲಿ ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸತಕ್ಕದ್ದು.

(ಎ) ಅಂಗವಿಕಲ ವ್ಯಕ್ತಿಗಳ ತರಬೇತಿ ಮತ್ತು ಕ್ಷೇಮಾಭಿವೃದ್ಧಿ

(ಬಿ) ಗರಿಷ್ಠ ವಯೋಮಿತಿಯನ್ನು ಸಡಿಲಗೊಳಿಸುವುದು

(ಸಿ) ಉದ್ಯೋಗವನ್ನು ನಿಯಂತ್ರಿಸುವುದು

(ಡಿ) ಅಂಗವಿಕಲ ವ್ಯಕ್ತಿಗಳು ನಿಯೋಜಿತರಾದ ಸ್ಥಳಗಳಲ್ಲಿ ಆರೋಗ್ಯ ಮತ್ತು ಸುರಕ್ಷತೆಯ ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ಅಂಥ ಸ್ಥಳಗಳಲ್ಲಿ ಅವರು ಸುಲಭವಾಗಿ ಓಡಾಡಲು ಅಡೆತಡೆಗಳು ಇಲ್ಲದ ವಾತಾವರಣ ಕಲ್ಪಿಸುವುದು.

(ಇ) ಈ ಯೋಜನೆಯ ಕಾರ್ಯಾಚರಣೆಯ ವೆಚ್ಚವನ್ನು ಯಾವ ರೀತಿಯಲ್ಲಿ ಮತ್ತು ಯಾವ ವ್ಯಕ್ತಿಗಳು ಇವುಗಳನ್ನು ವಹಿಸಿಕೊಳ್ಳಬೇಕೆಂಬುದು ಮತ್ತು

(ಎಫ್) ಯೋಜನೆಯ ನಿರ್ವಹಣೆಗೆ ಜವಾಬ್ದಾರಿಯಾಗಿರುವ ಪ್ರಾಧಿಕಾರದ ರಚನೆ

**ಎಲ್ಲ ಶೈಕ್ಷಣಿಕ ಸಂಸ್ಥೆಗಳು ಅಂಗವಿಕಲ ವ್ಯಕ್ತಿಗಳಿಗೆ ಸ್ಥಾನಗಳನ್ನು ಮೀಸಲಿಡುವುದು :** (39) ಎಲ್ಲ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು ಮತ್ತು ಸರ್ಕಾರದಿಂದ ಸಹಾಯಧನ ಪಡೆಯುತ್ತಿರುವ ಇತರೆ ಶೈಕ್ಷಣಿಕ ಸಂಸ್ಥೆಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಶೇಕಡ ಮೂರರಷ್ಟಕ್ಕಿಂತ ಕಡಿಮೆ ಇಲ್ಲದಂತೆ ಸ್ಥಾನಗಳನ್ನು ಮೀಸಲಿಡತಕ್ಕದ್ದು.

**ಬಡತನ ನಿವಾರಣಾ ಯೋಜನೆಗಳಲ್ಲಿ ಮೀಸಲಾತಿ :** (40) ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳ ಪ್ರಯೋಜನಕ್ಕಾಗಿ ಬಡತನ ನಿವಾರಣೆ ಯೋಜನೆಗಳಲ್ಲಿ ಶೇಕಡಾ ಮೂರರಷ್ಟಕ್ಕಿಂತ ಕಡಿಮೆ ಇಲ್ಲದಂತೆ ಸ್ಥಾನಗಳನ್ನು ಮೀಸಲಿರಿಸತಕ್ಕದ್ದು.

**ನಿಯೋಜಕರು ತಮ್ಮಲ್ಲಿರುವ ಕೆಲಸಗಾರರ ಸಂಖ್ಯೆಯಲ್ಲಿ ಶೇಕಡ ಐದರಷ್ಟು ಅಂಗವಿಕಲ ನೌಕರರು ಒಳಗೊಂಡಿರುವಂತೆ ಖಚಿತಪಡಿಸಿದ ನಿಯೋಜಕರಿಗೆ ಪ್ರೋತ್ಸಾಹಕಗಳು :** (41) ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಹಣಕಾಸಿನ ಮತ್ತು ಅಭಿವೃದ್ಧಿಯ ಮಿತಿಗಳ ಒಳಗೆ ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿನ ನಿಯೋಜಕರು ತಮ್ಮಲ್ಲಿರುವ ಕೆಲಸಗಾರರ ಪೈಕಿ ಕನಿಷ್ಠ ಶೇಕಡಾ ಐದರಷ್ಟು ಅಂಗವಿಕಲ ನೌಕರರು ಒಳಗೊಂಡಿರುವಂತೆ ಖಚಿತಪಡಿಸಲು ಅಂಥ ನಿಯೋಜಕರಿಗೆ ಪ್ರೋತ್ಸಾಹಕಗಳನ್ನು ನೀಡತಕ್ಕದ್ದು.

## ಅಧ್ಯಾಯ - VII

## ಸಕಾರಾತ್ಮಕ ಕ್ರಿಯೆ

**ಅಂಗವಿಕಲ ವ್ಯಕ್ತಿಗಳಿಗೆ ಸಾಧನಗಳು ಮತ್ತು ಉಪಕರಣಗಳು :** (42) ಸಮುಚಿತ ಸರ್ಕಾರಗಳು ಅಧಿಸೂಚನೆ ಹೊರಡಿಸುವ ಮೂಲಕ ಅಂಗವಿಕಲ ವ್ಯಕ್ತಿಗಳಿಗೆ ಸಾಧನಗಳು ಮತ್ತು ಉಪಕರಣಗಳನ್ನು ಒದಗಿಸುವುದಕ್ಕೆ ಯೋಜನೆಗಳನ್ನು ರೂಪಿಸತಕ್ಕದ್ದು.

**ಕೆಲವು ಉದ್ದೇಶಗಳಿಗಾಗಿ ಭೂಮಿಯನ್ನು ಆದ್ಯತೆಯ ಮೇಲೆ ಹಂಚಿಕೆ ಮಾಡುವಂತಹ ಯೋಜನೆಗಳು :** (43) ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಅಧಿಸೂಚನೆ ಹೊರಡಿಸುವ ಮೂಲಕ ಅಂಗವಿಕಲ ವ್ಯಕ್ತಿಗಳಿಗೆ ರಿಯಾಯಿತಿ ದರಗಳಲ್ಲಿ ಭೂಮಿಯನ್ನು ಆದ್ಯತೆ ಮೇಲೆ ಹಂಚಿಕೆ ಮಾಡುವಂತಹ ಯೋಜನೆಗಳನ್ನು ರಚಿಸತಕ್ಕದ್ದು ಅವುಗಳೆಂದರೆ

(ಎ) ಮನೆ

(ಬಿ) ವ್ಯಾಪಾರದ ವ್ಯವಸ್ಥೆ

(ಸಿ) ವಿಶೇಷ ಮನೋರಂಜನೆ ಕೇಂದ್ರಗಳ ಸ್ಥಾಪನೆ

(ಡಿ) ವಿಶೇಷ ಶಾಲೆಗಳ ಸ್ಥಾಪನೆ

(ಇ) ಸಂಶೋಧನಾ ಕೇಂದ್ರಗಳ ಸ್ಥಾಪನೆ

(ಎಫ್) ಅಂಗವಿಕಲ ಉದ್ಯಮಿಗಳಿಗೆ ಕಾರ್ಖಾನೆಗಳ ಸ್ಥಾಪನೆ.

# ಅಧ್ಯಾಯ – VIII

## ಸಮದೃಷ್ಟಿ

**ಸಾರಿಗೆಯಲ್ಲಿ ಸಮದೃಷ್ಟಿ :** (44) ಸಾರಿಗೆ ವಲಯದ ಕಾರ್ಯ ಸಂಸ್ಥೆಗಳು ತಮ್ಮ ಹಣಕಾಸಿನ ಮತ್ತು ಅಭಿವೃದ್ಧಿ ಸಾಮರ್ಥ್ಯದ ಮಿತಿಗಳೊಳಗೆ ಅಂಗವಿಕಲ ವ್ಯಕ್ತಿಗಳ ಪ್ರಯೋಜನಕ್ಕಾಗಿ ವಿಶೇಷ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(ಎ) ರೈಲು ಬೋಗಿಗಳಲ್ಲಿ, ಬಸ್ಸುಗಳಲ್ಲಿ, ಹಡಗುಗಳಲ್ಲಿ ಮತ್ತು ವಿಮಾನಗಳಲ್ಲಿ ಅಂಗವಿಕಲ ವ್ಯಕ್ತಿಗಳು ಸುಲಭವಾಗಿ ಒಳಬರಲು ಅನುಕೂಲವಾಗುವಂತಹ ವಿಧಾನಗಳನ್ನು ಅಳವಡಿಸುವುದು.

(ಬಿ) ರೈಲುಬೋಗಿ, ಹಡಗುಗಳಲ್ಲಿ ಮತ್ತು ವಿಮಾನಗಳಲ್ಲಿ ಮತ್ತು ನಿರೀಕ್ಷಣಾ ಕೊಠಡಿಗಳಲ್ಲಿ ಗಾಲಿ ಕುರ್ಚಿ ಬಳಸುವಂತಹವರು ಸುಲಭವಾಗಿ ಒಳಹೋಗಿ ಬರುವಂತಹ ಶೌಚಾಲಯಗಳನ್ನು ಅಳವಡಿಸುವುದು.

**ರಸ್ತೆ ಬಳಕೆ ವಿಷಯದಲ್ಲಿ ಸಮಾನ ಅವಕಾಶ :** (45) ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಹಣಕಾಸಿನ ಮತ್ತು ಅಭಿವೃದ್ಧಿಯ ಮಿತಿಗಳೊಳಗೆ, ಈ ಮುಂದಿನವುಗಳಿಗೆ ಅವಕಾಶ ಕಲ್ಪಿಸತಕ್ಕದ್ದು.

(ಎ) ದೃಷ್ಟಿದೋಷವುಳ್ಳ ಜನರಿಗಾಗಿ ಸಾರ್ವಜನಿಕ ರಸ್ತೆಗಳಲ್ಲಿ ಕೆಂಪು ದೀಪಗಳಿರುವೆಡೆಗಳಲ್ಲಿ ಶಬ್ದ ಸಂಕೇತ ಸಾಧನಗಳನ್ನು ಸ್ಥಾಪಿಸುವುದು.

(ಬಿ) ಗಾಲಿ ಕುರ್ಚಿ ಬಳಕೆದಾರರು ಸಲೀಸಾಗಿ ಹೋಗಿ ಬರುವಂತಾಗಲು ಪಾದಚಾರಿ ದಾರಿಗಳಲ್ಲಿ ಇಳಿಜಾರುಗಳನ್ನು ಹಾಕುವುದು ಮತ್ತು ಕಾಲುದಾರಿಗಳನ್ನು ಮಾಡುವುದು.

(ಸಿ) ಅಂಧರಿಗೆ ಹಾಗೂ ಮಂದ ದೃಷ್ಟಿ ಇರುವವರಿಗಾಗಿ ಜಿಬ್ರಾ ಕ್ರಾಸಿಂಗ್‌ನ ಮೇಲ್ಮೈ ಮೇಲೆ ಕೊರೆದಿರತಕ್ಕದ್ದು.

(ಡಿ) ಅಂಧರಿಗೆ ಹಾಗೂ ಮಂದ ದೃಷ್ಟಿ ಇರುವವರಿಗಾಗಿ ರೈಲ್ವೆ ಪ್ಲಾಟ್ ಫಾರಂನ ಕೊನೆಗಳಲ್ಲಿ ಕೊರೆದಿರತಕ್ಕದ್ದು.

(ಇ) ಅಂಗವಿಕಲತೆಯ ಸೂಕ್ತ ಸಂಕೇತಗಳನ್ನು ರೂಪಿಸುವುದು

(ಎಫ್) ಸೂಕ್ತ ಸ್ಥಳಗಳಲ್ಲಿ ಎಚ್ಚರಿಕೆ ಸಂಕೇತಗಳನ್ನು ಸ್ಥಾಪಿಸುವುದು

**ಕಟ್ಟಡ ಪ್ರವೇಶದಲ್ಲಿ ಸಮಾನ ಅವಕಾಶ ಮಾಡಿಕೊಡುವುದು :** (46) ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಹಣಕಾಸಿನ ಮತ್ತು ಅಭಿವೃದ್ಧಿ ಮಿತಿಗಳೊಳಗೆ ಈ ಮುಂದಿನವುಗಳಿಗೆ ಅವಕಾಶ ಕಲ್ಪಿಸತಕ್ಕದ್ದು.

(ಎ) ಸಾರ್ವಜನಿಕ ಕಟ್ಟಡಗಳಲ್ಲಿ ಇಳಿಜಾರು ಕಲ್ಪಿಸುವುದು

(ಬಿ) ಗಾಲಿಕುರ್ಚಿ ಬಳಕೆದಾರರಿಗೆ ಶೌಚಾಲಯಗಳ ಅಳವಡಿಕೆ

(ಸಿ) ಎಲಿವೇಟರುಗಳಲ್ಲಿ ಅಥವಾ ಲಿಫ್ಟ್‌ಗಳಲ್ಲಿ ಬ್ರೈಲ್ ಸಂಕೇತಗಳನ್ನು ಮತ್ತು ಶಬ್ದ ಸಂಕೇತಗಳನ್ನು ಕಲ್ಪಿಸುವುದು

(ಡಿ) ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಇತರೆ ವೈದ್ಯಕೀಯ ಚಿಕಿತ್ಸಾ ಸಂಸ್ಥೆ ಮತ್ತು ಪುನರ್ವಸತಿ ಸಂಸ್ಥೆಗಳಲ್ಲಿ ಇಳಿಜಾರು ಮಾರ್ಗ ಕಲ್ಪಿಸುವುದು.

**ಸರ್ಕಾರಿ ಉದ್ಯೋಗದಲ್ಲಿ ಪಕ್ಷಪಾತ ಮಾಡಕೂಡದು :** (47) (1) ಯಾವುದೇ ಸಂಸ್ಥೆಯ ಸೇವೆಯಲ್ಲಿರುವಾಗ ಅಂಗವಿಕಲತೆ ಹೊಂದುವ ವ್ಯಕ್ತಿಯನ್ನು ಕೆಲಸದಿಂದ ತೆಗೆದುಹಾಕತಕ್ಕದ್ದಲ್ಲ ಅಥವಾ ದರ್ಜೆಯನ್ನು ಇಳಿಸತಕ್ಕದ್ದಲ್ಲ.

ಆದರೆ, ಒಬ್ಬ ನೌಕರನು ಅಂಗವಿಕಲತೆ ಹೊಂದಿದ ನಂತರ ಅವನು ಹೊಂದಿರುವ ಹುದ್ದೆಯು ಅವನಿಗೆ ಸೂಕ್ತವೆನಿಸದಿದ್ದ ಪಕ್ಷದಲ್ಲಿ, ಅದೇ ವೇತನ ಶ್ರೇಣಿ ಮತ್ತು ಸೇವಾ ಸೌಕರ್ಯಗಳೊಂದಿಗೆ ಇತರೆ ಹುದ್ದೆಗೆ ಅವನನ್ನು ಸ್ಥಳಾಂತರಿಸಬಹುದು.

ಆದರೆ, ಅಂಥ ನೌಕರನನ್ನು ಯಾವುದೇ ಇತರ ಹುದ್ದೆಗೆ ಹೊಂದಿಸುವುದು ಸಾಧ್ಯವಾಗದಿದ್ದರೆ, ಅವನನ್ನು ಸೂಕ್ತ ಹುದ್ದೆ ದೊರೆಯುವವರೆಗೆ ಸಂಖ್ಯಾತಿರಿಕ್ತ (ಸೂಪರ್‌ನ್ಯೂಮರರಿ) ಹುದ್ದೆಯಲ್ಲಿ ಅಥವಾ ಸೇವಾ ನಿವೃತ್ತಿ ವಯಸ್ಸನ್ನು ಹೊಂದುವವರೆಗೆ ಇದರಲ್ಲಿ ಯಾವುದು ಮೊದಲಾಗುವುದೋ ಅಲ್ಲಿಯವರೆಗೆ ಹಾಗೆಯೇ ಇರಿಸಿಕೊಳ್ಳತಕ್ಕದ್ದು.

(2) ಅಂಗವಿಕಲನೆಂಬ ಕಾರಣಕ್ಕಾಗಿ ಆ ವ್ಯಕ್ತಿಗೆ ಯಾವುದೇ ಬಡ್ತಿಯನ್ನು ನಿರಾಕರಿಸತಕ್ಕದ್ದಲ್ಲ

ಆದರೆ, ಸಮುಚಿತ ಸರ್ಕಾರ, ಯಾವುದೇ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು, ಅಧಿಸೂಚನೆ ಮೂಲಕ ಮತ್ತು ಅಂಥ ಷರತ್ತುಗಳೇನಾದರೂ ಇದ್ದರೆ ಅವುಗಳನ್ನು ಈ ಅಧಿಸೂಚನೆಯಲ್ಲಿ ನಮೂದಿಸುವುದಕ್ಕೆ ಒಳಪಟ್ಟು, ಈ ಪ್ರಕರಣದ ಉಪಬಂಧಗಳಿಂದ ಯಾವುದೇ ಕಾರ್ಯಸಂಸ್ಥೆಗೆ ವಿನಾಯತಿ ನೀಡಬಹುದು.

## ಅಧ್ಯಾಯ – IX

## ಸಂಶೋಧನೆ ಮತ್ತು ಮಾನವಶಕ್ತಿ ಅಭಿವೃದ್ಧಿ

ಸಂಶೋಧನೆ : (48) ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಎಲ್ಲ ಇತರ ವಿಷಯಗಳ ಜೊತೆಗೆ ಈ ಮುಂದಿನ ಕ್ಷೇತ್ರಗಳಲ್ಲಿ ಸುಧಾರಣೆ ಮತ್ತು ಪ್ರಾಯೋಗಿಕ ಸಂಶೋಧನೆ ಮಾಡತಕ್ಕದ್ದು.

(ಎ) ಅಂಗವಿಕಲತೆಯನ್ನು ನಿವಾರಿಸುವುದು

(ಬಿ) ಪುನರ್‌ವಸತಿ – ಸಮುದಾಯ ಆಧಾರಿತ ಪುನರ್ವಸತಿಯೂ ಸೇರಿ

(ಸಿ) ಅವರ ಮಾನಸಿಕ–ಸಾಮಾಜಿಕ ವಿಷಯಗಳೂ ಸೇರಿದಂತೆ ಸಹಾಯಕಾರಿ ಸಾಧನೆಗಳನ್ನು ಅಭಿವೃದ್ಧಿಪಡಿಸುವುದು.

(ಡಿ) ಉದ್ಯೋಗ ಗುರುತಿಸುವಿಕೆ

(ಇ) ಕಛೇರಿ ಮತ್ತು ಕಾರ್ಖಾನೆಗಳಲ್ಲಿ ಆಂತರಿಕ ಮಾರ್ಪಾಡುಗಳನ್ನು ಮಾಡುವುದು.

ವಿಶ್ವ ವಿದ್ಯಾಲಯಗಳು ಸಂಶೋಧನೆ ಕೈಗೊಳ್ಳಲು ಸಾಧ್ಯವಾಗುವಂತೆ ಅವುಗಳಿಗೆ ಹಣಕಾಸು ಪ್ರೋತ್ಸಾಹ ಒದಗಿಸುವುದು :

(49) ವಿಶ್ವವಿದ್ಯಾಲಯ, ಉನ್ನತ ಶಿಕ್ಷಣ ಕಲ್ಪಿಸುವ ಇತರೆ ಸಂಸ್ಥೆಗಳು, ವೃತ್ತಿಪರ ಮಂಡಲಿ ಮತ್ತು ಸರ್ಕಾರೇತರ ಸಂಶೋಧನಾ ಘಟಕಗಳು ಅಥವಾ ಸಂಸ್ಥೆಗಳು ವಿಶೇಷ ಶಿಕ್ಷಣ, ಪುನರ್ವಸತಿ ಮತ್ತು ಮಾನ ಶಕ್ತಿ ಅಭಿವೃದ್ಧಿಯ ಬಗ್ಗೆ ಸಂಶೋಧನೆ ಕೈಗೊಳ್ಳಲು ಅವುಗಳಿಗೆ ಹಣಕಾಸು ನೆರವನ್ನು ಸಮುಚಿತ ಸರ್ಕಾರಗಳು ಒದಗಿಸತಕ್ಕದ್ದು.

## ಅಧ್ಯಾಯ – X

## ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು

ಸಕ್ಷಮ ಪ್ರಾಧಿಕಾರ : (50) ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ಸೂಕ್ತವೆಂದು ತಾನು ಭಾವಿಸಬಹುದಾದಂತೆ ಯಾವುದೇ ಪ್ರಾಧಿಕಾರವನ್ನು ಸಕ್ಷಮ ಪ್ರಾಧಿಕಾರ ಎಂದು ನೇಮಕ ಮಾಡಬಹುದು.

ನೋಂದಣಿ ಪ್ರಮಾಣ ಪತ್ರದ ಅನುಸಾರವಾಗಿ ಹೊರತು ಯಾವನೇ ವ್ಯಕ್ತಿಯು ಅಂಗವಿಕಲ ವ್ಯಕ್ತಿಗಳಿಗಾಗಿ ಯಾವುದೇ ಸಂಸ್ಥೆಯನ್ನು ಸ್ಥಾಪಿಸಬಾರದು ಅಥವಾ ನಿರ್ವಹಿಸಬಾರದು : (51) ಈ ಅಧಿನಿಯಮದ ಮೇರೆಗೆ ಅನ್ಯಥಾ ಉಪಬಂಧಿಸಿದುದನ್ನುಳಿದು, ಸಕ್ಷಮ ಪ್ರಾಧಿಕಾರದಿಂದ ಈ ಸಂಬಂಧವಾಗಿ ನೀಡಿದ ನೋಂದಣಿ ಪ್ರಮಾಣಪತ್ರದ ಮೇರೆಗೆ ಮತ್ತು ಅದರ ಅನುಸಾರವಾಗಿ ಹೊರತು ಅಂಗವಿಕಲ ವ್ಯಕ್ತಿಗಳಿಗಾಗಿ ಯಾವುದೇ ಸಂಸ್ಥೆಯನ್ನು ಸ್ಥಾಪಿಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ.

ಪರಂತು, ಒಬ್ಬ ವ್ಯಕ್ತಿಯು ಈ ಅಧಿನಿಯಮ ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ ಅಂಗವಿಕಲ ವ್ಯಕ್ತಿಗಳಿಗಾಗಿ ಸಂಸ್ಥೆಯೊಂದನ್ನು ನಿರ್ವಹಿಸುತ್ತಿದ್ದಲ್ಲಿ ಅಂಥ ಪ್ರಾರಂಭದಲ್ಲಿ 6 ತಿಂಗಳ ಅವಧಿಯವರೆಗೆ ಅಂಥ ಸಂಸ್ಥೆಯ ನಿರ್ವಹಣೆಯನ್ನು ಮುಂದುವರಿಸಬಹುದು ಮತ್ತು ಸದರಿ ೬ ತಿಂಗಳ ಅವಧಿಯೊಳಗಾಗಿ ಈ ಪ್ರಕರಣದ ಮೇರೆಗೆ ಅಂಥ ಪ್ರಮಾಣ ಪತ್ರವನ್ನು ಅರ್ಜಿಯನ್ನು ಸಲ್ಲಿಸಿದ್ದರೆ, ಅಂಥ ಅರ್ಜಿ ವಿಲೆ ಆಗುವವರೆಗೆ ಮುಂದುವರೆಸಿಕೊಂಡು ಬರತಕ್ಕದ್ದು.

**ನೋಂದಣಿ ಪ್ರಮಾಣಪತ್ರ** : (52) (1) ನೋಂದಣಿ ಪ್ರಮಾಣಪತ್ರಕ್ಕಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(2) (1)ನೇ ಉಪ–ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸಕ್ಷಮ ಪ್ರಾಧಿಕಾರಿಯು ತಾನು ವಿಹಿತವೆಂದು ಭಾವಿಸಬಹುದಾದಂಥ ವಿಚಾರಣೆಗಳನ್ನು ನಡೆಸತಕ್ಕದ್ದು ಮತ್ತು ಅಂಥ ಅರ್ಜಿದಾರನು ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಅಗತ್ಯತೆಗಳನ್ನು ಪಾಲಿಸಿದ್ದಾನೆಂದು ಸಮಾಧಾನ ಹೊಂದಿದರೆ ಅರ್ಜಿದಾರನಿಗೆ ಅಂಥ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರಿಗೆ ಹಾಗೆ ಸಮಾಧಾನವಾಗದಿದ್ದರೆ ಆದೇಶದ ಮೂಲಕ, ಪ್ರಮಾಣಪತ್ರಕ್ಕಾಗಿ ಸಲ್ಲಿಸಿದ್ದ ಅಂಥ ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

ಆದರೆ, ಪ್ರಮಾಣಪತ್ರ ನೀಡಲು ನಿರಾಕರಿಸುವ ಆದೇಶ ಹೊರಡಿಸುವುದಕ್ಕೆ ಮುಂಚೆ ಸಕ್ಷಮ ಪ್ರಾಧಿಕಾರವು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡತಕ್ಕದ್ದು ಮತ್ತು ಪ್ರಮಾಣಪತ್ರ ನೀಡಲು ನಿರಾಕರಿಸುವ ಪ್ರತಿಯೊಂದು ಆದೇಶವನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಅರ್ಜಿದಾರನಿಗೆ ತಿಳಿಸತಕ್ಕದ್ದು.

(3) ಯಾವ ಸಂಸ್ಥೆಯು ನೋಂದಣಿಗಾಗಿ ಅರ್ಜಿ ಸಲ್ಲಿಸಿದೆಯೋ ಅದು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಸೌಲಭ್ಯಗಳು ಮತ್ತು ಗುಣಮಟ್ಟಗಳನ್ನು ಒದಗಿಸುವ ಸ್ಥಿತಿಯಲ್ಲಿಲ್ಲದ ಹೊರತು (2)ನೇ ಉಪ–ಪ್ರಕರಣದ ಮೇರೆಗೆ ಯಾವುದೇ ನೋಂದಣಿ ಪ್ರಮಾಣಪತ್ರವನ್ನು ಅಂಥ ಸಂಸ್ಥೆಗೆ ನೀಡತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ ಮಂಜೂರು ಮಾಡಿದ ಒಂದು ನೋಂದಣಿ ಪ್ರಮಾಣಪತ್ರವು

(ಎ) 53ನೇ ಪ್ರಕರಣದ ಮೇರೆಗೆ ಅದನ್ನು ರದ್ದುಪಡಿಸಿರುವ ಹೊರತು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು.

(ಬಿ) ಅಂಥಹುದೇ ಅವಧಿ ಕಾಲಕಾಲಕ್ಕೆ ನವೀಕರಿಸಬಹುದು ಮತ್ತು

(ಸಿ) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟಿರತಕ್ಕದ್ದು.

(5) ನೋಂದಣಿ ಪ್ರಮಾಣಪತ್ರದ ನವೀಕರಣೆಗಾಗಿನ ಅರ್ಜಿಯನ್ನು ಆದರೆ ಮಾನ್ಯತೆಯ ಅವಧಿಗೆ ಮುಂಚೆ 60 ದಿನಗಳಿಗಿಂತ ಕಡಿಮೆ ಇಲ್ಲದಂತೆ ಸಲ್ಲಿಸತಕ್ಕದ್ದು.

(6) ಸಂಸ್ಥೆಯು ನೋಂದಣಿ ಪ್ರಮಾಣಪತ್ರವನ್ನು ಎದ್ದು ಕಾಣುವ ಸ್ಥಳದಲ್ಲಿ ಪ್ರದರ್ಶಿಸಿರತಕ್ಕದ್ದು.

ಪ್ರಮಾಣಪತ್ರದ ರದ್ದಿಯಾತಿ : (53) (1) (52) ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಮಂಜೂರು ಮಾಡಿದ ಪ್ರಮಾಣಪತ್ರವನ್ನು ಹೊಂದಿರುವ ವ್ಯಕ್ತಿಯು

(ಎ) ಪ್ರಮಾಣಪತ್ರದ ನೀಡಿಕೆ ಅಥವಾ ನವೀಕರಣೆಗಾಗಿ ಸಲ್ಲಿಸಿದ ಯಾವುದೇ ಅರ್ಜಿಯ ಸಂಬಂಧದಲ್ಲಿ ನೀಡಿದ ಹೇಳಿಕೆಯು ಸರಿಯಾಗಿಲ್ಲವೆಂದು ಅಥವಾ ಮುಖ್ಯ ವಿವರಗಳು ತಪ್ಪಾಗಿವೆಯೆಂದು ಅಥವಾ

(ಬಿ) ಪ್ರಮಾಣಪತ್ರವನ್ನು ಯಾವ ನಿಯಮಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ನೀಡಲಾಗಿತ್ತೋ ಅಂಥ ಯಾವುದೇ ನಿಯಮ ಅಥವಾ ಷರತ್ತುಗಳನ್ನು ಉಲ್ಲಂಘಿಸಿರುವನೆಂದು ಅಥವಾ ಉಲ್ಲಂಘಿಸಲು ಕಾರಣನಾಗಿದ್ದಾನೆಂದು

ಸಕ್ಷಮ ಪ್ರಾಧಿಕಾರವು ನಂಬಲು ಕಾರಣವಿರುವಲ್ಲಿ ತಾನು ಭಾವಿಸುವಂಥ ರೀತಿಯಲ್ಲಿ ವಿಚಾರಣೆ ಮಾಡಿದ ನಂತರ ಆದೇಶ ಹೊರಡಿಸುವ ಮೂಲಕ ಪ್ರಮಾಣ ಪತ್ರವನ್ನು ರದ್ದುಪಡಿಸಬಹುದು.

ಆದರೆ, ಅರ್ಜಿದಾರನಿಗೆ ಪ್ರಮಾಣಪತ್ರವನ್ನು ಏಕೆ ರದ್ದುಗೊಳಿಸಬಾರದೆಂಬುದಕ್ಕೆ ಕಾರಣಗಳನ್ನು ತೋರಿಸುವಂತೆ ಅವಕಾಶವನ್ನು ನೀಡಿದ ಹೊರತು ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಒಂದು ಸಂಸ್ಥೆಗೆ ಸಂಬಂಧಿಸಿದ ಪ್ರಮಾಣಪತ್ರವನ್ನು (1)ನೇ ಉಪ-ಪ್ರಕರಣದ ಮೇರೆಗೆ ರದ್ದುಪಡಿಸಿರುವಲ್ಲಿ ಅಂಥ ರದ್ದಿಯಾತಿಯ ದಿವಸದಿಂದ ಅಂಥ ಸಂಸ್ಥೆಯು ಕಾರ್ಯನಿರ್ವಹಿಸುವುದನ್ನು ನಿಲ್ಲಿಸತಕ್ಕದ್ದು.

ಆದರೆ, ರದ್ದಿಯಾತಿಯ ಆದೇಶದ ವಿರುದ್ಧ ೫೪ನೇ ಪ್ರಕರಣದ ಮೇರೆಗೆ ಅಪೀಲನ್ನು ಹೊರಡಿಸುವಾಗ

(ಎ) ಅಂಥ ಅಪೀಲು ಸಲ್ಲಿಸುವಿಕೆಗಾಗಿ ಗೊತ್ತುಪಡಿಸಿದ ಅವಧಿಯು ಮುಕ್ತಾಯವಾದ ಕೂಡಲೆ ಯಾವುದೇ ಅಪೀಲನ್ನು ಸಲ್ಲಿಸದೆ ಇರುವಾಗ, ಅಥವಾ

(ಬಿ) ಅಂಥ ಅಪೀಲನ್ನು ಸಲ್ಲಿಸಲಾಗಿದ್ದು, ಆದರೆ ರದ್ದಿಯಾತಿಯ ಆದೇಶವನ್ನು ಅಪೀಲು ಆದೇಶದ ದಿವಸದಿಂದ ಸಮರ್ಥಿಸಿರುವಾಗ ಅಂಥ ಸಂಸ್ಥೆ ಕಾರ್ಯನಿರ್ವಹಿಸುವುದು ನಿಂತುಹೋಗತಕ್ಕದ್ದು.

(3) ಒಂದು ಸಂಸ್ಥೆಗೆ ಸಂಬಂಧಿಸಿದಂತೆ ಪ್ರಮಾಣಪತ್ರವನ್ನು ರದ್ದುಗೊಳಿಸಿದ ಮೇಲೆ, ಸಕ್ಷಮ ಪ್ರಾಧಿಕಾರಿಯು ಅಂಥ ಸಂಸ್ಥೆಯ ನಿವಾಸಿಯಾಗಿರುವ ಯಾವನೇ ಅಂಗವಿಕಲ ವ್ಯಕ್ತಿಯನ್ನು ಅಂಥ ರದ್ದಿಯಾತಿಯ ದಿನಾಂಕದಿಂದ

(ಎ) ಆಕೆಯ ಅಥವಾ ಆತನ ತಂದೆತಾಯಿಯ ಅಥವಾ ಗಂಡನ ಅಥವಾ ಹೆಂಡತಿಯ ಅಥವಾ ಸಂದರ್ಭಾನುಸಾರ ಕಾನೂನು ಸಮ್ಮತ ಪೋಷಕರ ವಶಕ್ಕೆ ಅವರನ್ನು ಒಪ್ಪಿಸತಕ್ಕದ್ದೆಂದು ಅಥವಾ

(ಬಿ) ಸಕ್ಷಮ ಪ್ರಾಧಿಕಾರಿಯು ನಿರ್ದಿಷ್ಟಪಡಿಸಿದ ಯಾವುದೇ ಇತರ ಸಂಸ್ಥೆಗೆ ವರ್ಗಾಯಿಸುವುದು

(೪) ನೋಂದಣಿ ಪ್ರಮಾಣಪತ್ರವನ್ನು ಪಡೆದಿದ್ದಂತಹ ಪ್ರತಿಯೊಂದು ಸಂಸ್ಥೆಯು ಈ ಪ್ರಕರಣದ ಮೇರೆಗೆ ಅದನ್ನು ರದ್ದುಪಡಿಸಿದಾಗ, ಅಂಥ ರದ್ದಿಯಾತಿಯಾದ ನಂತರ ಕೂಡಲೇ ಸಕ್ಷಮ ಪ್ರಾಧಿಕಾರಕ್ಕೆ ಅಂಥ ಪ್ರಮಾಣಪತ್ರವನ್ನು ಹಿಂದಿರುಗಿಸತಕ್ಕದ್ದು.

ಅಪೀಲು : (54) (1) ಪ್ರಮಾಣಪತ್ರದ ನೀಡಿಕೆಯನ್ನು ನಿರಾಕರಿಸುವ ಅಥವಾ ಪ್ರಮಾಣಪತ್ರವನ್ನು ರದ್ದುಗೊಳಿಸಿರುವ ಸಕ್ಷಮ ಪ್ರಾಧಿಕಾರದ ಆದೇಶದಿಂದಾಗಿ ಬಾಧಿತನಾದ ಯಾವನೇ ವ್ಯಕ್ತಿಯು, ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ಅವಧಿಯೊಳಗಾಗಿ ಅಂಥ ನಿರಾಕರಣ ಅಥವಾ ರದ್ದಿಯಾತಿಯ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

(2) ಅಂಥ ಅಪೀಲಿನ ಮೇಲೆ ರಾಜ್ಯ ಸರ್ಕಾರ ನೀಡುವ ಆದೇಶವು ಅಂತಿಮವಾದುದಾಗಿರತಕ್ಕದ್ದು.

ಕೇಂದ್ರ ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿರುವ ಅಥವಾ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಈ ಅಧಿನಿಯಮಗಳನ್ನು ಅನ್ವಯಿಸದಿರುವುದು:

(55) ಈ ಅಧ್ಯಾಯದಲ್ಲಿರುವುದು ಯಾವುದೂ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿರುವ ಅಥವಾ ನಿರ್ವಹಿಸುತ್ತಿರುವ ಅಂಗವಿಕಲ ವ್ಯಕ್ತಿಗಳ ಸಂಸ್ಥೆಗೆ ಅನ್ವಯಿಸತಕ್ಕದ್ದಲ್ಲ.

## ಅಧ್ಯಾಯ – XI

## ತೀವ್ರವಾಗಿ ಅಂಗವಿಕಲ ಹೊಂದಿದ ವ್ಯಕ್ತಿಗಳಿಗಾಗಿ ಸಂಸ್ಥೆ

ತೀವ್ರವಾಗಿ ಅಂಗವಿಕಲ ಹೊಂದಿದ ವ್ಯಕ್ತಿಗಳಿಗಾಗಿ ಸಂಸ್ಥೆಗಳು : (56) ಸಮುಚಿತ ಸರ್ಕಾರವು ತೀವ್ರವಾಗಿ ಅಂಗವಿಕಲ ಹೊಂದಿದ ವ್ಯಕ್ತಿಗಳಿಗಾಗಿ ತಾನು ಸೂಕ್ತವೆಂದು ಭಾವಿಸುವಂಥ ಸ್ಥಳಗಳಲ್ಲಿ ಸಂಸ್ಥೆಗಳಲ್ಲಿ ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು.

(2) ಸಮುಚಿತ ಸರ್ಕಾರವು, (1)ನೇ ಉಪ–ಪ್ರಕರಣದ ಮೇರೆಗೆ ಸ್ಥಾಪಿಸಲಾದ ಒಂದು ಸಂಸ್ಥೆಯನ್ನು ಹೊರತುಪಡಿಸಿದ ಯಾವುದೇ ಸಂಸ್ಥೆಯು ತೀವ್ರವಾಗಿ ಅಂಗವಿಕಲ ಹೊಂದಿದ ವ್ಯಕ್ತಿಗಳ ಪುನರ್ ವ್ಯವಸ್ಥೆಗಾಗಿ ಅರ್ಹವಿರುವುದೆಂದು ಅಭಿಪ್ರಾಯಪಟ್ಟಲ್ಲಿ, ಸರ್ಕಾರವು ಅಂಥ ಸಮಸ್ಥೆಯನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ತೀವ್ರವಾಗಿ ಅಂಗವಿಕಲ ಹೊಂದಿದ ವ್ಯಕ್ತಿಗಳ ಸಂಸ್ಥೆ ಎಂಬುದಾಗಿ ಮಾನ್ಯತೆ ನೀಡಬಹುದು.

ಆದರೆ, ಯಾವುದೇ ಸಂಸ್ಥೆಯು ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಅಗತ್ಯತೆಗಳನ್ನು ಪಾಲಿಸಿದ ಹೊರತು ಅದನ್ನು ಈ ಪ್ರಕರಣದ ಮೇರೆಗೆ ಮಾನ್ಯತೆ ನೀಡತಕ್ಕದ್ದಲ್ಲ.

(3) (1)ನೇ ಉಪ–ಪ್ರಕರಣದ ಮೇರೆಗೆ ಸ್ಥಾಪಿತವಾದ ಪ್ರತಿಯೊಂದು ಸಂಸ್ಥೆಯು, ಸಮುಚಿತ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಕಾರ್ಯ ನಿರ್ವಹಿಸತಕ್ಕದ್ದು ಮತ್ತು ಅಂಥ ಷರತ್ತುಗಳನ್ನು ಪಾಲಿಸತಕ್ಕದ್ದು.

(4) ಈ ಪ್ರಕರಣದ ಉದ್ದೇಶಗಳಿಗಾಗಿ "ತೀವ್ರವಾಗಿ ಅಂಗವಿಕಲ ಹೊಂದಿದ ವ್ಯಕ್ತಿ" ಎಂದರೆ ಒಂದು ಅಥವಾ ಹೆಚ್ಚು ಅಂಗವಿಕಲತೆಗಳಲ್ಲಿ ಶೇಕಡ 80 ಅಥವಾ ಅದಕ್ಕೂ ಹೆಚ್ಚಾಗಿ ಅಂಗವಿಕಲತೆ ಹೊಂದಿರುವ ವ್ಯಕ್ತಿ.

## ಅಧ್ಯಾಯ – XII

## ಅಂಗವಿಕಲ ವ್ಯಕ್ತಿಗಳಿಗಾಗಿ ಮುಖ್ಯ ಆಯುಕ್ತರು ಮತ್ತು ಆಯುಕ್ತರುಗಳು

ಅಂಗವಿಕಲ ವ್ಯಕ್ತಿಗಳಿಗಾಗಿ ಮುಖ್ಯ ಆಯುಕ್ತರ ನೇಮಕ : (57) (1) ಕೇಂದ್ರ ಸರ್ಕಾರವು, ಅಧಿಸೂಚನೆ ಮೂಲಕ ಈ ಅಧಿನಿಯಮದ ಉದ್ದೇಶಕ್ಕಾಗಿ ಅಂಗವಿಕಲ ವ್ಯಕ್ತಿಗಳಿಗಾಗಿ ಮುಖ್ಯ ಆಯುಕ್ತರನ್ನು ನೇಮಕ ಮಾಡಬಹುದು.

(2) ಒಬ್ಬ ವ್ಯಕ್ತಿಯು ಅಂಗವಿಕಲ ವ್ಯಕ್ತಿಗಳ ಪುನರ್ ವಸತಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ವಿಶೇಷ ತಿಳುವಳಿಕೆ ಅಥವಾ ಪ್ರಾಯೋಗಿಕ ಅನುಭವ ಹೊಂದಿದರದ ಹೊರತು ಅವರು ಮುಖ್ಯ ಆಯುಕ್ತರಾಗಿ ನೇಮಕಗೊಳ್ಳಲು ಅನರ್ಹನಾಗತಕ್ಕದ್ದಲ್ಲ.

(3) ಮುಖ್ಯ ಆಯುಕ್ತರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಇತರೆ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿ ವೇತನ, ಗ್ರ್ಯಾಚ್ಯುಟಿ ಮತ್ತು ಇತರೆ ನಿವೃತ್ತಿ ಪ್ರಯೋಜನಗಳು ಸೇರಿದಂತೆ) ಕೇಂದ್ರ ಸರ್ಕಾರ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿರತಕ್ಕದ್ದು

(4) ಕೇಂದ್ರ ಸರ್ಕಾರವು, ಮುಖ್ಯ ಆಯುಕ್ತರು ತಮ್ಮ ಕಾರ್ಯಗಳನ್ನು ನಿರ್ವಹಿಸುವಲ್ಲಿ ಅವರಿಗೆ ನೆರವಾಗಲು ಅಗತ್ಯವಿರುವ ಅಧಿಕಾರಿಗಳು ಮತ್ತು ಇತರೆ ನೌಕರರ ಸ್ವರೂಪ ಮತ್ತು ಪ್ರವರ್ಗಗಳನ್ನು ನಿರ್ಧರಿಸತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಅಂಥ ಅಧಿಕಾರಿ ಮತ್ತು ಇತರೆ ನೌಕರರನ್ನು ಮುಖ್ಯ ಆಯುಕ್ತರಿಗೆ ಒದಗಿಸತಕ್ಕದ್ದು.

(5) ಮುಖ್ಯ ಆಯುಕ್ತರಿಗೆ ಒದಗಿಸಿದ ಅಧಿಕಾರಿಗಳ ಮತ್ತು ನೌಕರರ ಸಂಬಳ ಮತ್ತು ಭತ್ಯೆಗಳು ಮತ್ತು ಇತರೆ ಸೇವಾ ಷರತ್ತುಗಳು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

ಮುಖ್ಯ ಆಯುಕ್ತರ ಕಾರ್ಯಗಳು : (58) ಮುಖ್ಯ ಆಯುಕ್ತರು

(ಎ) ಆಯುಕ್ತರ ಕೆಲಸವನ್ನು ಸಮನ್ವಯಗೊಳಿಸುವುದು

(ಬಿ) ಕೇಂದ್ರ ಸರ್ಕಾರವು ಹಂಚುವ ನಿಧಿಗಳ ಬಳಕೆಯ ಮೇಲ್ವಿಚಾರಣೆ ನಡೆಸುವುದು

(ಸಿ) ಅಂಗವಿಕಲ ವ್ಯಕ್ತಿಗಳಿಗೆ ಒದಗಿಸಿರುವ ಹಕ್ಕುಗಳನ್ನು ಮತ್ತು ಪ್ರಯೋಜನಗಳನ್ನು ಸಂರಕ್ಷಿಸುವುದಕ್ಕೆ ಕ್ರಮ ಕೈಗೊಳ್ಳುವುದು.



90

(ಡಿ) ಸರ್ಕಾರವು ಗೊತ್ತುಪಡಿಸಬಹುದಾದಂಥ ಅಂತರಗಳಲ್ಲಿ ಅಧಿನಿಯಮದ ಕಾರ್ಯನಿರ್ವಹಣೆಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸುವುದು.

**ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ಕಸಿದುಕೊಳ್ಳುವ ಸಂಬಂಧದಲ್ಲಿನ ದೂರುಗಳನ್ನು ಮುಖ್ಯ ಆಯುಕ್ತರು ಗಮನಿಸುವುದು :**

(59) 58ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ ಮುಖ್ಯ ಆಯುಕ್ತರು ತಾನಾಗಿಯೇ ಅಥವಾ ಯಾವನೇ ಬಾಧಕ ಹೊಂದಿದ ವ್ಯಕ್ತಿಯು ನೀಡುವ ಅರ್ಜಿಯ ಮೇಲೆ ಅಥವಾ ಇತರೆ ರೀತಿಯಲ್ಲಿ ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಸಲ್ಲಿಸಿದ ದೂರುಗಳ ಬಗ್ಗೆ ಅಂದರೆ

(ಎ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ಕಸಿದುಕೊಳ್ಳುವ

(ಬಿ) ಅಂಗವಿಕಲ ವ್ಯಕ್ತಿಗಳ ಕ್ಷೇಮಾಭಿವೃದ್ಧಿ ಮತ್ತು ಹಕ್ಕುಗಳ ಸಂರಕ್ಷಣೆಗಾಗಿ ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ರಚಿಸುವ ಅಥವಾ ಹೊರಡಿಸುವ ಕಾನೂನು, ನಿಯಮ, ಉಪ–ನಿಯಮ, ವಿನಿಮಯ, ಕಾರ್ಯಕಾರಿ ಆದೇಶಗಳನ್ನು ಮಾರ್ಗದರ್ಶನ ಅಥವಾ ಸೂಚನೆಗಳನ್ನು ಜಾರಿಗೆ ತರದಿರುವ ಬಗ್ಗೆ ಗಮನಿಸತಕ್ಕದ್ದು ಮತ್ತು ಸಮುಚಿತ ಪ್ರಾಧಿಕಾರದೊಂದಿಗೆ ಅಂಥ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳತಕ್ಕದ್ದು.

**ಅಂಗವಿಕಲ ವ್ಯಕ್ತಿಗಳಿಗಾಗಿ ಆಯುಕ್ತರ ನೇಮಕ :** (60) (1) ಪ್ರತಿಯೊಂದು ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಗವಿಕಲ ವ್ಯಕ್ತಿಗಳಿಗಾಗಿ ಒಬ್ಬ ಆಯುಕ್ತರನ್ನು ನೇಮಕ ಮಾಡತಕ್ಕದ್ದು.

(2) ಒಬ್ಬ ವ್ಯಕ್ತಿಯು ಅಂಗವಿಕಲ ವ್ಯಕ್ತಿಗಳ ಪುನರ್ ವ್ಯವಸ್ಥೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ವಿಶೇಷ ತಿಳಿವಳಿಕೆ ಅಥವಾ ಪ್ರಾಯೋಗಿಕ ಅನುಭವ ಹೊಂದಿರದ ಹೊರತು ಅವರು ಆಯುಕ್ತರಾಗಿ ನೇಮಕಗೊಳ್ಳಲು ಅರ್ಹರಾಗತಕ್ಕದ್ದಲ್ಲ.

(3) ಆಯುಕ್ತರಿಗೆ ಸಂದಾಯ ಮಾಡಬಹುದಾದ ಸಂಬಳ ಮತ್ತು ಭತ್ಯೆಗಳು ಮತ್ತು ಇತರೆ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿ ವೇತನ, ಗ್ರಾಚ್ಯುಟಿ ಮತ್ತು ಇತರೆ ನಿವೃತ್ತಿ ಪ್ರಯೋಜನಗಳೂ ಸೇರಿದಂತೆ) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(4) ರಾಜ್ಯ ಸರ್ಕಾರವು, ಆಯುಕ್ತರು ತನ್ನ ಕಾರ್ಯಗಳನ್ನು ನಿರ್ವಹಿಸಲು ಅವರಿಗೆ ನೆರವಾಗುವುದಕ್ಕೆ ಅಗತ್ಯವಿರುವ ಅಧಿಕಾರಿಗಳ ಮತ್ತು ಇತರೆ ನೌಕರರ ಸ್ವರೂಪ ಮತ್ತು ಪ್ರವರ್ಗಗಳನ್ನು ನಿರ್ಧರಿಸತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಅಂಥ ಅಧಿಕಾರಿಗಳು ಮತ್ತು ಇತರೆ ನೌಕರರನ್ನು ಆಯುಕ್ತರಿಗೆ ಒದಗಿಸತಕ್ಕದ್ದು.

(5) ಆಯುಕ್ತರಿಗೆ ಒದಗಿಸಲಾದ ಅಧಿಕಾರಿಗಳು ಮತ್ತು ನೌಕರರು ಆಯುಕ್ತರ ಸಾಮಾನ್ಯ ಮೇಲ್ವಿಚಾರಣೆಯ ಮೇರೆಗೆ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(6) ಆಯುಕ್ತರಿಗೆ ಒದಗಿಸಲಾದ ಅಧಿಕಾರಿಗಳ ಮತ್ತು ನೌಕರರ ಸಂಬಳ ಮತ್ತು ಭತ್ಯೆಗಳು ಮತ್ತು ಇತರೆ ಸೇವಾ ಷರತ್ತುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

**ಆಯುಕ್ತರ ಅಧಿಕಾರಗಳು :** (61) ರಾಜ್ಯದ ಆಯುಕ್ತರು

(ಎ) ಅಂಗವಿಕಲ ವ್ಯಕ್ತಿಗಳ ಪ್ರಯೋಜನಕ್ಕಾಗಿ ಕಾರ್ಯಕ್ರಮ ಮತ್ತು ಯೋಜನೆಗಳಿಗಾಗಿ ರಾಜ್ಯ ಸರ್ಕಾರದ ಇಲಾಖೆಗಳೊಂದಿಗೆ ಸಮಾಲೋಚಿಸಿ ಸಮನ್ವಯಗೊಳಿಸುವುದು.

(ಬಿ) ರಾಜ್ಯ ಸರ್ಕಾರವು ಹಂಚುವ ನಿಧಿಗಳ ಬಳಕೆಯ ಮೇಲ್ವಿಚಾರಣೆ ನಡೆಸುವುದು

(ಸಿ) ಅಂಗವಿಕಲ ವ್ಯಕ್ತಿಗಳಿಗೆ ಒದಗಿಸಿರುವ ಹಕ್ಕುಗಳನ್ನು ಮತ್ತು ಪ್ರಯೋಜನಗಳನ್ನು ಸಂರಕ್ಷಿಸುವುದಕ್ಕೆ ಕ್ರಮ ಕೈಗೊಳ್ಳುವುದು.

(ಡಿ) ಸರ್ಕಾರವು ಗೊತ್ತುಪಡಿಸಬಹುದಾದಂಥ ಅಂತರಗಳಲ್ಲಿ ಅಧಿನಿಯಮದ ಕಾರ್ಯನಿರ್ವಹಣೆಯ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಮುಖ್ಯ ಆಯುಕ್ತರಿಗೆ ಕಳುಹಿಸಿಕೊಡತಕ್ಕದ್ದು.

**ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ಕಸಿದುಕೊಳ್ಳುವ ಸಂಬಂಧದಲ್ಲಿನ ದೂರುಗಳನ್ನು ಆಯುಕ್ತರು ಗಮನಿಸುವುದು :**

(62) 61ನೇ ಪ್ರಕರಣ ಉಪಬಂಧಗಳಿಗೆ ಬಾಧಕವಾಗದಂತೆ, ಆಯುಕ್ತರು ತಾವಾಗಿಯೇ ಅಥವಾ ಯಾವನೇ ಬಾಧಕ ಹೊಂದಿದ ವ್ಯಕ್ತಿಯು ನೀಡುವ ಅರ್ಜಿಯ ಮೇಲೆ ಅಥವಾ ಇತರೆ ರೀತಿಯಲ್ಲಿ ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಸಲ್ಲಿಸಿದ ದೂರುಗಳು ಬಗ್ಗೆ ಅಂದರೆ

(ಎ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ಕಸಿದುಕೊಳ್ಳುವ

(ಬಿ) ಅಂಗವಿಕಲ ವ್ಯಕ್ತಿಗಳ ಕ್ಷೇಮಾಭಿವೃದ್ಧಿ ಮತ್ತು ಹಕ್ಕುಗಳ ಸಂರಕ್ಷಣೆಗಾಗಿ ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ರಚಿಸುವ ಕಾನೂನು, ನಿಯಮ, ಉಪವಿಧಿ, ವಿನಿಮಯ, ಕಾರ್ಯನಿರ್ವಾಹಕ ಆದೇಶಗಳನ್ನು ಅಥವಾ ಹೊರಡಿಸುವ ಮಾರ್ಗದರ್ಶನ ಅಥವಾ ಸೂಚನೆಗಳನ್ನು ಜಾರಿಗೆ ತರದಿರುವ ಬಗ್ಗೆ ಗಮನಿಸತಕ್ಕದ್ದು ಮತ್ತು ಸಮುಚಿತ ಪ್ರಾಧಿಕಾರಗಳೊಂದಿಗೆ ಅಂಥ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳತಕ್ಕದ್ದು.

**ಪ್ರಾಧಿಕಾರಗಳು ಮತ್ತು ಅಧಿಕಾರಿಗಳು ಕೆಲವು ಅಧಿಕಾರಗಳ ವಿಷಯದಲ್ಲಿ ಸಿವಿಲ್ ನ್ಯಾಯಾಲಯದ ಅಧಿಕಾರ ಹೊಂದಿರುವುದು :**

(63) ಮುಖ್ಯ ಆಯುಕ್ತರು ಮತ್ತು ಆಯುಕ್ತರು ಈ ಅಧಿನಿಯಮದ ಮೇರೆಗೆ ತಮ್ಮ ಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಈ

ಮುಂದಿನ ವಿಷಯಗಳ ಸಂಬಂಧದಲ್ಲಿ ಒಂದು ದಾವೆಯನ್ನು ವಿಚಾರಣೆ ಮಾಡುವಾಗ ಸಿವಿಲ್ ದಂಡ ಪ್ರಕ್ರಿಯಾ ಸಂಹಿತೆ, 1980ರ ಮೇರೆಗೆ ನ್ಯಾಯಾಲಯದಲ್ಲಿ ನಿಹಿತಗೊಳಿಸಲಾದಂತಹ ಅಧಿಕಾರಗಳನ್ನೇ ಹೊಂದಿರತಕ್ಕದ್ದು, ಅವುಗಳೆಂದರೆ

(ಎ) ಸಾಕ್ಷಿಗಳನ್ನು ಕರೆಸುವುದು ಮತ್ತು ಹಾಜರಿಯನ್ನು ಒತ್ತಾಯಿಸುವುದು

(ಬಿ) ಯಾವುದೇ ದಸ್ತಾವೇಜುಗಳನ್ನು ಶೋಧಿಸಲು ಮತ್ತು ಹಾಜರುಪಡಿಸಲು ಅಗತ್ಯಪಡಿಸುವುದು

(ಸಿ) ರಿಯಾವುದೇ ನ್ಯಾಯಾಲಯವು ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ನಕಲನ್ನು ಕೋರುವುದು

(ಡಿ) ಶಪಥ ಪತ್ರಗಳ ಮೇಲೆ ಸಾಕ್ಷಿಗಳನ್ನು ಪಡೆಯುವುದು ಮತ್ತು

(ಇ) ಸಾಕ್ಷಿಗಳನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಆಯೋಗಗಳನ್ನು ಹೊರಡಿಸುವುದು

(2) ಮುಖ್ಯ ಆಯುಕ್ತರ ಮತ್ತು ಆಯುಕ್ತರುಗಳ ಮುಂದೆ ಇರುವ ಪ್ರತಿಯೊಂದು ವ್ಯವಹರಣೆಯು ಭಾರತೀಯ ದಂಡ ಸಂಹಿತೆಯ 193 ಮತ್ತು 228ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಯಾಗಿರತಕ್ಕದ್ದು ಮತ್ತು ಮುಖ್ಯ ಆಯುಕ್ತರು, ಆಯುಕ್ತರುಗಳು ಸಕ್ಷಮ ಪ್ರಾಧಿಕಾರ ಇವರುಗಳನ್ನು 195ನೇ ಪ್ರಕರಣದ ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1972ರ 26 ಅಧ್ಯಾಯದ ಉದ್ದೇಶಕ್ಕಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

ಮುಖ್ಯ ಆಯುಕ್ತರು ವಾರ್ಷಿಕ ವರದಿಯನ್ನು ತಯಾರಿಸುವುದು : (64) (1) ಮುಖ್ಯ ಆಯುಕ್ತರು ಹಿಂದಿನ ಹಣಕಾಸು ವರ್ಷದಲ್ಲಿ ತಮ್ಮ ಕಾರ್ಯ ಚಟುವಟಿಕೆಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನೊಳಗೊಂಡ ವಾರ್ಷಿಕ ವರದಿಯನ್ನು ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ ಅಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ತಯಾರಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(2) ಕೇಂದ್ರ ಸರ್ಕಾರವು, ಅಂಥ ವರದಿಯಲ್ಲಿ ತನಗೆ ಸಂಬಂಧಿಸಿರುವಷ್ಟರಮಟ್ಟಿಗೆ ಮಾಡಿದ ಶಿಫಾರಸಿನ ಮೇಲೆ ಕೈಕೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಅಥವಾ ಅಂಥ ಶಿಫಾರಸ್ಸನ್ನು ಅಥವಾ ಅದರ ಭಾಗವನ್ನು ಒಪ್ಪದಿರುವ ಯಾವುದೇ ಕಾರಣಗಳನ್ನು ವಿವರಿಸಿದ್ದ ಶಿಫಾರಸಿನೊಂದಿಗೆ ವಾರ್ಷಿಕ ವರದಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

ಆಯುಕ್ತರ ವಾರ್ಷಿಕ ವರದಿಯನ್ನು ತಯಾರಿಸುವುದು : (65) (1) ಆಯುಕ್ತರು ಹಿಂದಿನ ಹಣಕಾಸು ವರ್ಷದಲ್ಲಿ ತಮ್ಮ ಕಾರ್ಯಚಟುವಟಿಕೆಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ಒಳಗೊಂಡ ವಾರ್ಷಿಕ ವರದಿಯನ್ನು ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ಪ್ರತಿ ಹಣಕಾಸು ವರ್ಷಕ್ಕಾಗಿ ಅಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ತಯಾರಿಸತಕ್ಕದ್ದು ಮತ್ತು ಒಂದು ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(2) ರಾಜ್ಯ ಸರ್ಕಾರವು ಅಂಥ ವರದಿಯಲ್ಲಿ ತನಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಮಾಡಿದ ಶಿಫಾರಸಿನ ಮೇಲೆ ಕೈಗೊಂಡ ಅಥವಾ ಕೈಕೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಅಥವಾ ಅಂಥ ಶಿಫಾರಸ್ಸನ್ನು ಅಥವಾ ಅದರ ಭಾಗವನ್ನು ಒಪ್ಪಿರುವ ಯಾವುದೇ ಕಾರಣಗಳನ್ನು ವಿವರಿಸಿರುವ ಶಿಫಾರಸ್ಸಿನೊಂದಿಗೆ ವಾರ್ಷಿಕ ವರದಿಯನ್ನು ಪ್ರತಿಯೊಂದು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

## ಅಧ್ಯಾಯ – XIII

## ಸಾಮಾಜಿಕ ಭದ್ರತೆ

ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಪುನರ್‌ವ್ಯವಸ್ಥೆಯನ್ನು ಕೈಗೊಳ್ಳುವುದು : (66) (1) ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅವುಗಳ ಹಣಕಾಸು ಮತ್ತು ಅಭಿವೃದ್ಧಿ ಮಿತಿಗಳೊಳಗೆ ಎಲ್ಲಾ ಅಂಗವಿಕಲ ವ್ಯಕ್ತಿಗಳ ಪುನರ್ ವಸತಿಕಾರ್ಯವನ್ನು ಕೈಗೊಳ್ಳತಕ್ಕದ್ದು ಅಥವಾ ಕೈಗೊಳ್ಳುವಂತೆ ಮಾಡತಕ್ಕದ್ದು.

(2) (1) ನೇ ಉಪ–ಪ್ರಕರಣದ ಉದ್ದೇಶಕ್ಕಾಗಿ, ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಸರ್ಕಾರೇತರ ಸಂಸ್ಥೆಗಳಿಗೆ ಹಣಕಾಸು ನೆರವು ನೀಡತಕ್ಕದ್ದು.

(3) ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಪುನರ್ ವಸತಿಯ ಎಲ್ಲಾ ಕಾರ್ಯನೀತಿಗಳನ್ನು ರೂಪಿಸುವಾಗ ಅಂಗವಿಕಲ ವ್ಯಕ್ತಿಗಳಿಗಾಗಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳೊಂದಿಗೆ ಸಮಾಲೋಚಿಸತಕ್ಕದ್ದು.

ಅಂಗವಿಕಲ ನೌಕರರ ವಿಮಾ ಯೋಜನೆ : (67) (1) ಸಮುಚಿತ ಸರ್ಕಾರ ಅಧಿಸೂಚನೆ ಮೂಲಕ ತನ್ನ ಅಂಗವಿಕಲ ನೌಕರರ ಪ್ರಯೋಜನಕ್ಕಾಗಿ ವಿಮಾ ಯೋಜನೆಯೊಂದನ್ನು ರೂಪಿಸತಕ್ಕದ್ದು.

(2) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸಮುಚಿತ ಸರ್ಕಾರವು ವಿಮಾ ಯೋಜನೆಯನ್ನು ರೂಪಿಸುವುದರ ಬದಲು ತನ್ನ

ಅಂಗವಿಕಲ ನೌಕರರಿಗಾಗಿ ಒಂದು ಬದಲಿ ಭದ್ರತಾ ಯೋಜನೆಯನ್ನು ರೂಪಿಸತಕ್ಕದ್ದು.

ನಿರುದ್ಯೋಗ ಭತ್ಯೆ : (68) ಸಮುಚಿತ ಸರ್ಕಾರಗಳು ತಮ್ಮ ಹಣಕಾಸು ಸಾಮರ್ಥ್ಯ ಮತ್ತು ಅಭಿವೃದ್ಧಿ ಮಿತಿಗಳೊಳಗೆ ಅಧಿಸೂಚನೆ ಮೂಲಕ ಯಾರು ಎರಡು ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ವಿಶೇಷ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿರುವರೋ ಮತ್ತು ಯಾರು ಯಾವುದೇ ಲಾಭದಾಯಕ ಉದ್ಯೋಗದಲ್ಲಿರದ ಅಂಗವಿಕಲ ವ್ಯಕ್ತಿಗಳಿಗೆ ನಿರುದ್ಯೋಗ ಭತ್ಯೆ ಪಾವತಿ ಮಾಡುವುದಕ್ಕಾಗಿ ಯೋಜನೆಯೊಂದನ್ನು ರೂಪಿಸತಕ್ಕದ್ದು.

# ಅಧ್ಯಾಯ – XIV

## ಇತರೆ

**ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಯಾವುದೇ ಸೌಲಭ್ಯವನ್ನು ಮೋಸದಿಂದ ಬಳಸಿಕೊಂಡರೆ ಶಿಕ್ಷೆ ವಿಧಿಸುವುದು :** (69) ಯಾರು ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಯಾವುದೇ ಸೌಲಭ್ಯವನ್ನು ಮೋಸದಿಂದ ಬಳಸಿಕೊಂಡರೆ ಅಥವಾ ಬಳಸಿಕೊಳ್ಳಲು ಪ್ರಯತ್ನಿಸಿದರೆ ಎರಡು ವರ್ಷಗಳವರೆಗಿನ ಕಾರಾವಾಸ ಶಿಕ್ಷೆಯಿಂದ ಅಥವಾ ಇಪ್ಪತ್ತು ಸಾವಿರ ರೂಪಾಯಿವರೆಗಿನ ದಂಡದಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಯಾವುದೇ ಸೌಲಭ್ಯವನ್ನು ಮೋಸದಿಂದ ಬಳಸಿಕೊಂಡರೆ ಶಿಕ್ಷೆ ವಿಧಿಸುವುದು :** (70) ಮುಖ್ಯ ಆಯುಕ್ತರು, ಆಯುಕ್ತರುಗಳು, ಅಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯು ಸಾರ್ವಜನಿಕ ನೌಕರರಾಗಿರುವುದು.

ಮುಖ್ಯ ಆಯುಕ್ತರು, ಆಯುಕ್ತರುಗಳು, ಮತ್ತು ಇತರೆ ಅಧಿಕಾರಿಗಳು ಮತ್ತು ಅವರಿಗೆ ಒದಗಿಸಲಾದ ಸಿಬ್ಬಂದಿಯನ್ನು ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರರೆಂದು ಭಾವಿಸತಕ್ಕದ್ದು.

**ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ :** (71) ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶಗಳ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲುದ್ದೇಶಿಸಿರುವ ಯಾವುದೇ ಕಾರ್ಯದ ಬಗ್ಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಸರ್ಕಾರದ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶ ಇರತಕ್ಕದ್ದಲ್ಲ.

**ಅಧಿನಿಯಮ ಇತರೆ ಕಾನೂನಿನ ಜತೆಗೆ ಇರುವುದು ಹಾಗೂ ಇತರೆ ಕಾನೂನುಗಳಿಗೆ ಅಪಮಾನಕಾರವಾಗಿರುವುದಲ್ಲ :** (72) ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು ಅಂಗವಿಕಲ ವ್ಯಕ್ತಿಗಳ ಸೌಲಭ್ಯಕ್ಕಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನು ಅಥವಾ ಅದರ ಮೇರೆಗೆ ಹೊರಡಿಸಿದ, ಅಧಿನಿಯಮಿಸಿದ ಅಥವಾ ನೀಡಲಾದ ಯಾವುದೇ ನಿಯಮಗಳ ಆದೇಶ ಅಥವಾ ಸೂಚನೆಗಳ ಜತೆಗೆ ಇರಬೇಕೆ ಹೊರತು ಅವುಗಳನ್ನು ನ್ಯೂನ ಗೋಳಿಸುವಂತೆ ಇರತಕ್ಕದ್ದಲ್ಲ.

**ಸಮುಚಿತ ಸರ್ಕಾರಕ್ಕೆ ನಿಯಮ ರಚನಾಧಿಕಾರ :** (73) ಸಮುಚಿತ ಸರ್ಕಾರವು ಅಧಿಸೂಚನೆ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಈ ಹಿಂದಿನ ಅಧಿಕಾರಗಳ ಸಾಮಾನ್ಯ ನ್ಯಾಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು ಅವುಗಳೆಂದರೆ

(ಎ) 3ನೇ ಪ್ರಕರಣದ (2)ನೇ ಉಪ–ಪ್ರಕರಣದ (ಕೆ) ಖಂಡದ ಮೇರೆಗೆ ರಾಜ್ಯ ಸರ್ಕಾರವನ್ನು ಅಥವಾ ಕೇಂದ್ರಾಡಳಿತ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ವಿಧಾನ

(ಬಿ) ಸದಸ್ಯರು 4ನೇ ಪ್ರಕರಣದ (7)ನೇ ಉಪ–ಪ್ರಕರಣದ ಮೇರೆಗೆ ಪಡೆಯುವ ಭತ್ಯೆಗಳು

(ಸಿ) ಕೇಂದ್ರ ಸಮನ್ವಯ ಸಮಿತಿಯು 7ನೇ ಪ್ರಕರಣದ ಮೇರೆಗೆ ತನ್ನ ಸಭೆಗಳಲ್ಲಿ ನಡೆಸುವ ವ್ಯವಹಾರಗಳ ಸಂಬಂಧದಲ್ಲಿ ಪಾಲಿಸಬೇಕಾದ ಪ್ರಕ್ರಿಯಾ ನಿಯಮಗಳು

(ಡಿ) ಕೇಂದ್ರ ಸಮನ್ವಯ ಸಮಿತಿಯು 8ನೇ ಪ್ರಕರಣದ (2)ನೇ ಉಪ–ಪ್ರಕರಣದ (ಹೆಚ್) ಖಂಡದ ಮೇರೆಗೆ ಪಾಲಿಸಬೇಕಾದಂಥ ಇತರೆ ಪ್ರಕಾರ್ಯಗಳು

(ಇ) 9ನೇ ಪ್ರಕರಣದ (2)ನೇ ಉಪ–ಪ್ರಕರಣದ (ಹೆಚ್) ಖಂಡದ ಮೇರೆಗೆ ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳತಕ್ಕ ವಿಧಾನ

(ಎಫ್) ಸದಸ್ಯರು 9ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಪಡೆಯುವ ಭತ್ಯೆಗಳು

(ಜಿ) ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು 11ನೇ ಪ್ರಕರಣದ ಮೇರೆಗೆ ತನ್ನ ಸಭೆಗಳಲ್ಲಿ ನಡೆಸುವ ವ್ಯವಹಾರಗಳ ಸಂಬಂಧದಲ್ಲಿ ಪಾಲಿಸಬೇಕಾದ ಪ್ರಕ್ರಿಯಾ ನಿಯಮಗಳು

(ಹೆಚ್) 12ನೇ ಪ್ರಕರಣದ 1ನೇ ಉಪ–ಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯನ್ನು ಸಹ ಸದಸ್ಯನನ್ನಾಗಿ ಮಾಡಿಕೊಳ್ಳುವ ರೀತಿ ಮತ್ತು ಉದ್ದೇಶಗಳು

(ಐ) ಕೇಂದ್ರ ಕಾರ್ಯನಿರ್ವಾಹಕ ಸಮಿತಿಗೆ ಸಹ ಸದಸ್ಯರನ್ನಾಗಿ ನೇಮಕ ಮಾಡಿಕೊಂಡ ವ್ಯಕ್ತಿಯು ೧೨ನೇ ಪ್ರಕರಣದ (೩) ನೇ ಉಪ–ಪ್ರಕರಣದ ಮೇರೆಗೆ ಸ್ವೀಕರಿಸುವ ಶುಲ್ಕಗಳು ಮತ್ತು ಭತ್ಯೆಗಳು

(ಜೆ) ಸದಸ್ಯರು ೧೬ನೇ ಪ್ರಕರಣದ (7)ನೇ ಉಪ–ಪ್ರಕರಣದ ಮೇರೆಗೆ ಪಡೆಯುವ ಭತ್ಯೆಗಳು

(ಕೆ) ರಾಜ್ಯ ಸಮನ್ವಯ ಸಮಿತಿಯು 17ನೇ ಪ್ರಕರಣದ ಮೇರೆಗೆ ತನ್ನ ಸಭೆಗಳಲ್ಲಿ ನಡೆಸುವ ವ್ಯವಹಾರಗಳ ಸಂಬಂಧದಲ್ಲಿ ಪಾಲಿಸಬೇಕಾದ ಪ್ರಕ್ರಿಯಾ ನಿಯಮಗಳು

(ಎಲ್) ರಾಜ್ಯ ಸಮನ್ವಯ ಸಮಿತಿಯು 17ನೇ ಪ್ರಕರಣದ (2)ನೇ ಉಪ–ಪ್ರಕರಣದ (ಜೆ) ಖಂಡದ ಮೇರೆಗೆ ಪಾಲಿಸಬಹುದಾದಂಥ ಇತರೆ ಪ್ರಕಾರ್ಯಗಳು

(ಎಂ) ಸದಸ್ಯರು ೧೯ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಪಡೆಯಬಹುದಾದ ಭತ್ಯೆಗಳು

(ಎನ್) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು 21ನೇ ಪ್ರಕರಣದ ಮೇರೆಗೆ ತನ್ನ ಸಭೆಗಳಲ್ಲಿ ನಡೆಸುವ ವ್ಯವಹಾರಗಳ ಸಂಬಂಧದಲ್ಲಿ ಪಾಲಿಸಬೇಕಾದ ಪ್ರಕ್ರಿಯಾ ನಿಯಮಗಳು

(ಓ) 22ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯನ್ನು ಸಹಸದಸ್ಯನನ್ನಾಗಿ ನೇಮಕ ಮಾಡಿಕೊಳ್ಳುವ ರೀತಿ ಮತ್ತು ಉದ್ದೇಶಗಳು

(ಪಿ) ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ಸಹ ಸದಸ್ಯನಾಗುವ ವ್ಯಕ್ತಿಯು 22ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಸ್ವೀಕರಿಸುವ ಶುಲ್ಕಗಳು ಮತ್ತು ಭತ್ಯೆಗಳು

(ಕ್ಯೂ) ಪ್ರತಿಯೊಂದು ಕಾರ್ಯ ಸಂಸ್ಥೆಯಲ್ಲಿನ ನಿಯೋಜಕನು ತನ್ನ ಸಂಸ್ಥೆಯ ಬಗ್ಗೆ ಮಾಹಿತಿ ಅಥವಾ ವಿವರಪಟ್ಟಿಯನ್ನೊದಗಿಸಬೇಕು ಮತ್ತು ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಅಂಥ ಮಾಹಿತಿ ಅಥವಾ ವಿವರಪಟ್ಟಿಯನ್ನು (34)ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಂಥ ಮಾಹಿತಿ ವಿವರಪಟ್ಟಿಯನ್ನು ಒದಗಿಸತಕ್ಕದ್ದು.

(ಆರ್) (37)ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಒಬ್ಬ ನಿಯೋಜಕನು ದಾಖಲೆಗಳನ್ನು ನಿರ್ವಹಿಸಿಕೊಂಡು ಬರುವ ವಿಧಾನ ಮತ್ತು ರೀತಿ

(ಎಸ್) 52ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಒಂದು ಅರ್ಜಿಯನ್ನು ಸಲ್ಲಿಸುವ ವಿಧಾನ ಮತ್ತು ರೀತಿ

(ಟಿ) 52ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ನಿವಾರಣೆಯ ಆದೇಶವನ್ನು ತಿಳಿಸುವ ರೀತಿ

(ಯು) 52ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಒದಗಿಸಬೇಕಾದ ನಿರ್ವಹಿಸಬೇಕಾದ ಸೌಲಭ್ಯಗಳು ಹಾಗೂ ಗುಣಮಟ್ಟಗಳು

(ವಿ) 52ನೇ ಪ್ರಕರಣದ (4)ನೇ ಉಪ–ಪ್ರಕರಣದ (ಎ) ಖಂಡದ ಮೇರೆಗೆ ಒಂದು ನೋಂದಣಿ ಪ್ರಮಾಣ ಪತ್ರವು ಮಾನ್ಯವಾಗಿರಬೇಕಾದ ಅವಧಿ

(ಡಬ್ಲ್ಯೂ) 52ನೇ ಪ್ರಕರಣದ (4)ನೇ ಉಪ–ಪ್ರಕರಣದ (ಸಿ) ಖಂಡದ ಮೇರೆಗೆ ಒಂದು ನೋಂದಣಿ ಪ್ರಮಾಣಪತ್ರವನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ನೀಡಬೇಕೆಂಬುದು

(ಎಕ್ಸ್) 54ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಯಾವ ಅವಧಿಯೊಳಗಾಗಿ ಅಪೀಲು ಹೂಡಬೇಕೆಂಬುದು

(ವೈ) ತೀವ್ರವಾಗಿ ಅಂಗವಿಕಲ ಹೊಂದಿದ ವ್ಯಕ್ತಿಗಳ ಸಂಸ್ಥೆಯನ್ನು ನಿರ್ವಹಿಸಬೇಕಾದ ರೀತಿ ಮತ್ತು 56ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಪೂರೈಸಬೇಕಾದ ಷರತ್ತುಗಳು

(ಜಡ್) 57ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಮುಖ್ಯ ಆಯುಕ್ತರು ಸಂಬಳ, ಭತ್ಯೆ ಮತ್ತು ಇತರೆ ಸೇವಾ ನಿಬಂಧನೆ ಮತ್ತು ಷರತ್ತುಗಳು

(ಜಡ್‌ಎ) 57ನೇ ಪ್ರಕರಣ (6)ನೇ ಉಪ–ಪ್ರಕರಣದ ಮೇರೆಗೆ ಅಧಿಕಾರಿಗಳ ಮತ್ತು ನೌಕರರ ಸಂಬಳ, ಭತ್ಯೆ ಮತ್ತು ಇತರೆ ಸೇವಾ ಷರತ್ತುಗಳು

(ಜಡ್‌ಬಿ) ಮುಖ್ಯ ಆಯುಕ್ತರು ೫೮ನೇ ಪ್ರಕರಣದ (ಡಿ) ಖಂಡದ ಮೇರೆಗೆ ಕೇಂದ್ರ ಸರ್ಕಾರಕ್ಕೆ ವರದಿ ಕಳುಹಿಸುವ ಅಂತರಗಳು

(ಜಡ್‌ಸಿ) 60ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಆಯುಕ್ತರು ಸಂಬಳ, ಭತ್ಯೆ ಮತ್ತು ಇತರೆ ಸೇವಾ ನಿಬಂಧನೆ ಮತ್ತು ಷರತ್ತುಗಳು

(ಜಡ್‌ಡಿ) 60ನೇ ಪ್ರಕರಣದ (6)ನೇ ಉಪ–ಪ್ರಕರಣದ ಮೇರೆಗೆ ಅಧಿಕಾರಿಗಳ ಮತ್ತು ನೌಕರರ ಸಂಬಳ, ಭತ್ಯೆ ಮತ್ತು ಇತರೆ ಸೇವಾ ಷರತ್ತುಗಳು

(ಜಡ್‌ಇ) ಆಯುಕ್ತರ 61ನೇ ಪ್ರಕರಣದ (ಡಿ) ಖಂಡದ ಮೇರೆಗೆ ರಾಜ್ಯ ಸರ್ಕಾರಕ್ಕೆ ವರದಿಗಳನ್ನು ಕಳುಹಿಸುವ ಅಂತರಗಳು

(ಜಡ್‌ಎಫ್) 64ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ವಾರ್ಷಿಕ ವರದಿಗಳನ್ನು ತಯಾರಿಸುವ ನಮೂನೆ ಮತ್ತು ಕಾಲ

(ಬಿಡ್‌ಹೆಚ್) ಗೊತ್ತುಪಡಿಸಲಾಗುವ ಅಥವಾ ಗೊತ್ತುಪಡಿಸಬಹುದಾದಂಥ ಯಾವುದೇ ಇತರ ವಿಷಯಗಳು.

(3) 33ನೇ ಪ್ರಕರಣ ಪರಂತುಕದ, 47ನೇ ಪ್ರಕರಣದ (2)ನೇ ಉಪ–ಪ್ರಕರಣದ ಪರಂತುಕದ ಮೇರೆಗೆ ಕೇಂದ್ರ ಸರ್ಕಾರವು ಮಾಡಿರುವ ಪ್ರತಿಯೊಂದು ಅಧಿಸೂಚನೆಯನ್ನು, ಪ್ರಕರಣ 27, ಪ್ರಕರಣ 30, 38ನೇ ಪ್ರಕರಣದ (1)ನೇ ಉಪ–ಪ್ರಕರಣ, ಪ್ರಕರಣ 42, ಪ್ರಕರಣ 43, ಪ್ರಕರಣ 67, ಪ್ರಕರಣ 68ರ ಮೇರೆಗೆ ರೂಪಿಸಿದ ಪ್ರತಿಯೊಂದು ಯೋಜನೆಯನ್ನು ಮತ್ತು (1)ನೇ ಉಪ–ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅವುಗಳನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಅದರ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಮಂಡಿತಕ್ಕದ್ದು, ಮತ್ತು ಮೇಲೆ ಹೇಳಲಾದ ಅಧಿವೇಶನದ ನಿಕಟೋತ್ತರದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳು ಮುಕ್ತಾಯವಾಗುವ ಮುಂಚೆ, ಆ ನಿಯಮ, ಅಧಿಸೂಚನೆ ಅಥವಾ ಯೋಜನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮ ಅಧಿಸೂಚನೆ ಅಥವಾ ಯೋಜನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬಾರದೆಂದು ಎರಡೂ ಸದನಗಳು ಒಪ್ಪಿದರೆ, ಅಂಥ ನಿಯಮ, ಅಧಿಸೂಚನೆ ಅಥವಾ ಯೋಜನೆಯು ಆ ನಂತರದಿಂದ ಸಂದರ್ಭಾನುಸಾರವಾಗಿ ಹಾಗೆ ಮಾರ್ಪಾಟಾದ ರೂಪದಲ್ಲಿ ಅಥವಾ ಮಾರ್ಪಾಟಾಗದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾಯತಿಯು ಆ ನಿಯಮ, ಅಧಿಸೂಚನೆ ಅಥವಾ ಯೋಜನೆ ಮೇರೆಗೆ ಸಂದರ್ಭಾನುಸಾರವಾಗಿ ಈ ಹಿಂದೆ ಮಾಡಲಾದ ಯಾವುದೇ ಕಾರ್ಯಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

(4) ರಾಜ್ಯ ಸರ್ಕಾರವು (33)ನೇ ಪ್ರಕರಣದ ಪರಂತುಕ, (47)ನೇ ಪ್ರಕರಣದ (2)ನೇ ಉಪ–ಪ್ರಕರಣದ, ಪರಂತುಕದ ಮೇರೆಗೆ ಮಾಡಿದ ಪ್ರತಿಯೊಂದು ಅಧಿಸೂಚನೆಯನ್ನು ಪ್ರಕರಣದ 27, ಪ್ರಕರಣದ 30, ಪ್ರಕರಣ 38ರ (1)ನೇ ಉಪ–ಪ್ರಕರಣದ, ಪ್ರಕರಣ 42, ಪ್ರಕರಣ 43, ಪ್ರಕರಣ 68ರ ಮೇರೆಗೆ ಯೋಜಿಸಿದ ಪ್ರತಿಯೊಂದು ಯೋಜನೆಯನ್ನು ಮತ್ತು (1)ನೇ ಉಪ–ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲವು ಎರಡು ಸದನಗಳನ್ನು ಹೊಂದಿದ್ದರೆ ಅಂಥ ಪ್ರತಿಯೊಂದು ಸದನದ ಮುಂದೆ ಮತ್ತು ಅಂಥ ವಿಧಾನ ಮಂಡಲವು ಒಂದು ಸದನವನ್ನು ಹೊಂದಿದ್ದರೆ ಅಂಥ ಸದನದ ಮುಂದೆ ಮಂಡಿಸತಕ್ಕದ್ದು.

(74) 1987ರ 39ನೇ ಅಧಿನಿಯಮದ ತಿದ್ದುಪಡಿ

ಕಾನೂನು ಸೇವಾ ಪ್ರಾಧಿಕಾರಗಳ ಅಧಿನಿಯಮ, 1987ರ 12ನೇ ಪ್ರಕರಣದಲ್ಲಿ (ಡಿ) ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ

"(ಡಿ) ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995ನ 25ನೇ ಪ್ರಕರಣದ (1)ನೇ ಖಂಡದಲ್ಲಿ ವಿವರಿಸಿರುವಂತೆ ಅಂಗವಿಕಲ ವ್ಯಕ್ತಿ".

ಕೆ.ಎಲ್. ಮೋಹನ್ ಪೂರಿಯಾ
ಭಾರತ ಸರ್ಕಾರದ ಕಾರ್ಯದರ್ಶಿ

---

# ಕಲ್ಯಾಣ ಮಂತ್ರಾಲಯ

## ಅಧಿಸೂಚನೆ

*ನವದೆಹಲಿ ಡಿಸೆಂಬರ್ 31, 1996*

ಎಸ್.ಓ. 908 (ಇ) ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮದ 93ನೇ ಪ್ರಕರಣದ (1) ಮತ್ತು (2)ನೇ ಉಪ–ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೇಂದ್ರ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸಿದೆ ಎಂದರೆ

### ಅಧ್ಯಾಯ–1

### ಸಂಕ್ಷಿಪ್ತ ಶೀರ್ಷಿಕೆ ಮತ್ತು ಪ್ರಾರಂಭ

1. ಈ ನಿಯಮಗಳನ್ನು ಅಂಗವಿಕಲ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ನಿಯಮಗಳು 1996 ಎಂದು ಕರೆಯತಕ್ಕದ್ದು.
2. ಈ ನಿಯಮಗಳು ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಪರಿಭಾಷೆ : ಈ ನಿಯಮಗಳಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ

a. "ನಿಯಮ" ಎಂದರೆ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ನಿಯಮ 1995 (1996 ರ 1)
b. "ಅಧ್ಯಕ್ಷ" ಎಂದರೆ ಈ ನಿಯಮದ ಮೇರೆಗೆ ನೇಮಕಗೊಂಡ ಒಬ್ಬ ಅಧ್ಯಕ್ಷ.
c. "ಉಪಾಧ್ಯಕ್ಷ" ಎಂದರೆ ಈ ನಿಯಮದ ಮೇರೆಗೆ ನೇಮಕಗೊಂಡ ಒಬ್ಬ ಉಪಾಧ್ಯಕ್ಷ.
d. "ಸದಸ್ಯ" ಎಂದರೆ ಈ ನಿಯಮದ ಮೇರೆಗೆ ನೇಮಕಗೊಂಡ ಒಬ್ಬ ಸದಸ್ಯ.

e. "ಸದಸ್ಯ ಕಾರ್ಯದರ್ಶಿ" ಎಂದರೆ ಈ ನಿಯಮದ ಮೇರೆಗೆ ನೇಮಕಗೊಂಡ ಒಬ್ಬ ಸದಸ್ಯ ಕಾರ್ಯದರ್ಶಿ.

f. "ವಿಶೇಷ ಉದ್ಯೋಗ ವಿನಿಮಯ ಕೇಂದ್ರ" ಎಂದರೆ ಸಾಮಾನ್ಯ ಉದ್ಯೋಗ ವಿನಿಮಯ ಕೇಂದ್ರದಲ್ಲಿಯ ವಿಶೇಷ ಉದ್ಯೋಗ ವಿನಿಮಯ ಕೇಂದ್ರದ ವಿಶೇಷ ವಿಭಾಗ ಮತ್ತು ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ವಿಶೇಷ ಉದ್ಯೋಗ ವಿನಿಮಯ ಕೇಂದ್ರಗಳೆಂದು ಪ್ರಕಟಿಸಲಾದಂಥ ಉದ್ಯೋಗ ವಿನಿಮಯ ಕೇಂದ್ರಗಳು.

g. "ವರ್ಷ" ಎಂದರೆ ಏಪ್ರಿಲ್ ತಿಂಗಳು ಒಂದನೇ ದಿನಾಂಕದಂದು ಆರಂಭವಾಗುವ ಹಣಕಾಸಿನ ವರ್ಷ.

## ಅಧ್ಯಾಯ-2

## ವಿವಿಧ ಅಂಗವಿಕಲತೆಗಳ ಮೌಲ್ಯಮಾಪನ ಮತ್ತು ನಿರ್ಧಾರಣೆಗಾಗಿ ಮಾರ್ಗದರ್ಶಕ ಸೂತ್ರಗಳು

3. ಭಾರತ ಸರ್ಕಾರದ ಕಲ್ಯಾಣ ಮಂತ್ರಾಲಯವು ನಂ.4-2-83 ಹೆಚ್‌ಡಬ್ಲ್ಯೂ 3 ದಿನಾಂಕ ಆಗಸ್ಟ್ 6, 1996 ರಂದು ಹೊರಡಿಸಿದ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತಹ ವಿವಿಧ ಅಂಗವಿಕಲತೆಗಳ ಮೌಲ್ಯಮಾಪನ ಮತ್ತು ನಿರ್ಧಾರಣೆಗಾಗಿ ಇರುವ ಸಾಮಾನ್ಯ ಮಾರ್ಗದರ್ಶಕ ಸೂತ್ರಗಳನ್ನು ಅಧಿನಿಯಮದ 2(ನಿ) (ಇ) (1) (ಎನ್) (ಒ) (ಕ್ಯೂ) (ಆರ್) (ಟಿ) ಮತ್ತು (ಯು) ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ವಿವಿಧ ಅಂಗವಿಕಲತೆಗಳ ಮೌಲ್ಯಮಾಪನಕ್ಕೆ ಅನುಸರಿಸತಕ್ಕದ್ದು.

4. ಅಂಗವಿಕಲತೆಯ ಪ್ರಮಾಣಪತ್ರವನ್ನು ಕೊಡುವ ಪ್ರಾಧಿಕಾರ

1. ಅಂಗವಿಕಲತೆಯ ಪ್ರಮಾಣ ಪತ್ರವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಸೂಕ್ತವಾಗಿ ರಚಿತವಾದ ವೈದ್ಯಕೀಯ ಮಂಡಲಿಯು ನೀಡತಕ್ಕದ್ದು.

2. ರಾಜ್ಯ ಸರ್ಕಾರವು, ಮಂದದೃಷ್ಟಿ, ಶ್ರವಣಶಕ್ತಿ ಮತ್ತು ವಾಕ್ ದೌರ್ಬಲ್ಯ, ಬುದ್ಧಿಮಾಂದ್ಯ ಮತ್ತು ಕುಷ್ಠರೋಗ ವಾಸಿಯೂ ಸೇರಿದಂತೆ ಚಲನಶಕ್ತಿ, ದೃಷ್ಟಿದೋಷವನ್ನು ನಿರ್ಧರಿಸುವುದಕ್ಕಾಗಿ ನಿರ್ದಿಷ್ಟ ಕ್ಷೇತ್ರದಲ್ಲಿ ವಿಶೇಷ ಪರಿಣತಿ ಪಡೆದ ಕೊನೆಪಕ್ಷ ಒಬ್ಬರಾದರೂ ಇರುವಂತಹ ಕನಿಷ್ಠ ಮೂವರು ಸದಸ್ಯರನ್ನು ಒಳಗೊಂಡಿರುವ ಒಂದು ವೈದ್ಯಕೀಯ ಮಂಡಲಿಯನ್ನು ರಚಿಸಬಹುದು.

5. ಶಾಶ್ವತ ಅಂಗವಿಕಲತೆಗಾಗಿ ಪ್ರಮಾಣಪತ್ರ

1. ವೈದ್ಯಕೀಯ ಮಂಡಲಿಯು ಯಥೋಚಿತ ಪರೀಕ್ಷೆ ಮಾಡಿದ ನಂತರ ಅಂಗವಿಕಲತೆಯ ಪ್ರಮಾಣದಲ್ಲಿ ಯಾವುದೇ ಬದಲಾವಣೆಯ ಸಾಧ್ಯತೆಯಿರದಂಥ ಶಾಶ್ವತ ಅಂಗವಿಕಲತೆಯ ಸಂದರ್ಭಗಳಲ್ಲಿ ಕಾಯಂ ಅಂಗವಿಕಲತೆಯ ಪ್ರಮಾಣ ಪತ್ರವನ್ನು ನೀಡಬೇಕು.

2. ಅಂಗವಿಕಲತೆಯ ಪ್ರಮಾಣದಲ್ಲಿ ಬದಲಾವಣೆಯಾಗುವ ಯಾವುದೇ ಸಾಧ್ಯತೆಯಿದ್ದರೆ ಅಂಥ ಸಂದರ್ಭಗಳಲ್ಲಿ ವೈದ್ಯಕೀಯ ಮಂಡಲಿಯ ಪ್ರಮಾಣ ಪತ್ರದಲ್ಲಿ ಮಾನ್ಯತೆಯ ಅವಧಿಯನ್ನು ಸೂಚಿಸುವುದು.

3. ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳುವ ಅವಕಾಶ ನೀಡಿದ ಹೊರತು ಅಂಗವಿಕಲತಾ ಪ್ರಮಾಣಪತ್ರವನ್ನು ನೀಡಲು ನಿರಾಕರಿಸುವಂತಿಲ್ಲ.

4. ಅರ್ಜಿದಾರನ ಮನವಿಯ ಮೇರೆಗೆ ವೈದ್ಯಕೀಯ ಮಂಡಲಿಯು, ಪ್ರಕರಣದ ಎಲ್ಲಾ ಅಂಶಗಳನ್ನು ಮತ್ತು ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ತನ್ನ ನಿರ್ಣಯವನ್ನು ಪುನರ್ ಪರಿಶೀಲಿಸಬಹುದು.

6. ಅಂಗವಿಕಲ ವೈದ್ಯಕೀಯ ಪ್ರಮಾಣಪತ್ರ

6ನೇ ನಿಯಮದ ಮೇರೆಗೆ ವೈದ್ಯಕೀಯ ಮಂಡಲಿಯು, ಒಬ್ಬ ವ್ಯಕ್ತಿಗೆ ನೀಡಿದ ಪ್ರಮಾಣ ಪತ್ರವು, ಕೇಂದ್ರ ಅಥವಾ ರಾಜ್ಯ ಸರ್ಕಾರವು ವಿಧಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಸರ್ಕಾರದ ಮತ್ತು ಸರ್ಕಾರೇತರ ಸಂಸ್ಥೆಗಳ ಯೋಜನೆಗಳ ಮೇರೆಗೆ ಇರುವ ಸೌಲಭ್ಯ, ರಿಯಾಯಿತಿ ಮತ್ತು ಪ್ರಯೋಜನಗಳಿಗೆ ಅರ್ಜಿ ಸಲ್ಲಿಸುವುದಕ್ಕೆ ಅರ್ಹತೆ ದೊರಕಿಸಿಕೊಡುತ್ತದೆ.

## ಅಧ್ಯಾಯ-3

## ಕೇಂದ್ರ ಸಮನ್ವಯ ಸಮಿತಿ

7. ಸದರಿ ಆಧಾರದ ಮೇಲೆ ರಾಜ್ಯ ಸರ್ಕಾರದ ಪ್ರತಿನಿಧಿಗಳ ನಾಮನಿರ್ದೇಶನ

ಅಧಿನಿಯಮದ 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಕೆ) ಖಂಡದ ಮೇರೆಗೆ ಪ್ರತಿವರ್ಷ ದೇಶದ ಎಲ್ಲ ನಾಲ್ಕು ಪ್ರದೇಶಗಳಿಗೂ ಪ್ರಾತಿನಿಧ್ಯ ದೊರೆಯುವ ರೀತಿಯಲ್ಲಿ ಸರದಿ ಆಧಾರದ ಮೇಲೆ ಕೇಂದ್ರ ಸರ್ಕಾರವು ರಾಜ್ಯದಿಂದ ಮೂವರು ಮತ್ತು ಸಂಘ ರಾಜ್ಯ ಕ್ಷೇತ್ರದಿಂದ ಒಬ್ಬರು ಹೀಗೆ ನಾಲ್ಕು ಜನ ಸದಸ್ಯನನ್ನು ನಾಮ ನಿರ್ದೇಶನ ಮಾಡತಕ್ಕದ್ದು.

8. ಸದಸ್ಯತ್ವದ ಪಟ್ಟಿ

ಸದಸ್ಯ ಕಾರ್ಯದರ್ಶಿಯ ಸದಸ್ಯರ ಹೆಸರುಗಳ ಮತ್ತು ಅವರ ವಿಳಾಸಗಳ ದಾಖಲೆಯನ್ನು ಹೊಂದಿರತಕ್ಕದ್ದು.

9. ವಿಳಾಸದ ಬದಲಾವಣೆ

ಒಬ್ಬ ಸದಸ್ಯನು ತನ್ನ ವಿಳಾಸವನ್ನು ಬದಲಾಯಿಸಿದ್ದಲ್ಲಿ ತನ್ನ ಹೊಸ ವಿಳಾಸವನ್ನು ಸದಸ್ಯ ಕಾರ್ಯದರ್ಶಿಗೆ ತಿಳಿಸತಕ್ಕದ್ದು. ಅವರು ಅಂಥ ಹೊಸ ವಿಳಾಸವನ್ನು ಅಧಿಕೃತ ದಾಖಲೆಗಳಲ್ಲಿ ನಮೂದಿಸಿಕೊಳ್ಳತಕ್ಕದ್ದು. (ಆದರೆ ಸದಸ್ಯನು ಹೊಸ ವಿಳಾಸವನ್ನು ತಿಳಿಸಲು ತಪ್ಪಿದರೆ, ಅಧಿಕೃತ ದಾಖಲೆಗಳಲ್ಲಿರುವ ವಿಳಾಸವನ್ನೇ ಎಲ್ಲ ಉದ್ದೇಶಗಳಿಗೆ ಅವನ ಸರಿಯಾದ ವಿಳಾಸ ಎಂಬುದಾಗಿ ಭಾವಿಸತಕ್ಕದ್ದು)

10. ದಿನಭತ್ಯೆ ಮತ್ತು ಪ್ರಮಾಣ ಭತ್ಯೆ

1. ದೆಹಲಿಯಲ್ಲಿ ವಾಸಿಸುತ್ತಿರುವ ಕೇಂದ್ರ ಸಮನ್ವಯ ಸಮಿತಿಯ ಅಧಿಕಾರೇತರ ಸದಸ್ಯರಿಗೆ ಕೇಂದ್ರ ಸಮನ್ವಯ ಸಮಿತಿಯ ವಾಸ್ತವಿಕ ಸಭೆಗಳ ಸಂದರ್ಭದಲ್ಲಿ ಪ್ರತಿಯೊಂದು ದಿನಕ್ಕೆ ಎಪ್ಪತ್ತೈದು ರೂಪಾಯಿ ಭತ್ಯೆ ನೀಡಲಾಗುತ್ತದೆ.

2. ದೆಹಲಿಯಲ್ಲಿ ವಾಸಿಸದ ಕೇಂದ್ರ ಸಮನ್ವಯ ಸಮಿತಿಯ ಅಧಿಕಾರೇತರ ಸದಸ್ಯರಿಗೆ ಕೇಂದ್ರ ಸರ್ಕಾರದ 1ನೇ ದರ್ಜೆ ಅಧಿಕಾರಿಗೆ ನೀಡುವ ಅತ್ಯಂತ ಹೆಚ್ಚಿನ ದರಗಳಲ್ಲಿ ವಾಸ್ತವಿಕವಾಗಿ ಸಭೆ ನಡೆದ ಪ್ರತಿಯೊಂದು ದಿನಕ್ಕೆ ದಿನಭತ್ಯೆ ಮತ್ತು ಪ್ರಯಾಣ ಭತ್ಯೆ ಸಂದಾಯ ಮಾಡತಕ್ಕದ್ದು.

ಆದರೆ ಕೇಂದ್ರ ಸಮನ್ವಯ ಸಮಿತಿಯ ಸದಸ್ಯರೂ ಆಗಿರುವ ಲೋಕಸಭೆಯ ಸದಸ್ಯರ ಸಂದರ್ಭದಲ್ಲಿ ಲೋಕಸಭೆಯ ಅಧಿವೇಶನದಲ್ಲಿ ಇಲ್ಲದಿರುವಾಗ ಮತ್ತು ಅಂಥ ಸದಸ್ಯನು

ಯಾವುದೇ ಇತರ ಸರ್ಕಾರದ ಮೂಲದಿಂದ ಅದೇ ಪ್ರಯಾಣ ಮತ್ತು ತಂಗುವಿಕೆಗಳಿಗೆ ಅಂಥ ಯಾವುದೇ ಭತ್ಯೆಗಳನ್ನು ಪಡೆದಿರುವುದಿಲ್ಲವೆಂಬ ಪ್ರಮಾಣ ಪತ್ರ ಹಾಜರುಪಡಿಸಿದ ಮೇಲೆ ಲೋಕಸಭಾ ಸದಸ್ಯರಾಗಿ ಪಡೆಯುವಂಥ ದರಗಳಲ್ಲಿಯೇ ಅವರಿಗೆ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು.

3. ಕೇಂದ್ರ ಸಮನ್ವಯ ಸಮಿತಿಯ ಅಧಿಕೃತ ಸದಸ್ಯನಿಗೆ, ಅಂಥ ಸದಸ್ಯನು ಸೇವೆ ಸಲ್ಲಿಸುತ್ತಿರುವ ಸಂಬಂಧಪಟ್ಟ ಸರ್ಕಾರದ ಪ್ರಸಕ್ತ ನಿಯಮಗಳ ಮೇರೆಗೆ ಲಭ್ಯವಿರುವ ದರಗಳಲ್ಲಿ ಅದೇ ಪ್ರಯಾಣ ಅಥವಾ ತಂಗುವಿಕೆಗಳಿಗೆ ಯಾವುದೇ ಇತರ ಸರ್ಕಾರದ ಮೂಲದಿಂದ ಅಂಥ ಯಾವುದೇ ಭತ್ಯೆಗಳನ್ನು ಪಡೆದಿಲ್ಲವೆಂಬ ಪ್ರಮಾಣ ಪತ್ರ ಹಾಜರುಪಡಿಸಿದ ಮೇರೆಗೆ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು.

**11. ಸಭೆಗಳ ನೋಟೀಸು**

1. ಕೇಂದ್ರ ಸಮನ್ವಯ ಸಮಿತಿಯ ಸಭೆಗಳನ್ನು ಸಾಮಾನ್ಯವಾಗಿ ಅಧ್ಯಕ್ಷರು ನಿಗದಿಪಡಿಸಬಹುದಾದಂಥ ದಿನಗಳಂದು ದೆಹಲಿಯಲ್ಲಿ ನಡೆಸತಕ್ಕದ್ದು.

   ಆದರೆ ಕೊನೇಪಕ್ಷ ಆರು ತಿಂಗಳುಗಳಿಗೊಮ್ಮೆ ಸಭೆ ಸೇರತಕ್ಕದ್ದು.

2. ಕೇಂದ್ರ ಸಮನ್ವಯ ಸಮಿತಿಯ ಕನಿಷ್ಠ ಹತ್ತು ಸದಸ್ಯರ ಲಿಖಿತ ಕೋರಿಕೆಯ ಮೇರೆಗೆ ಅಧ್ಯಕ್ಷರು ಸಮಿತಿಯ ವಿಶೇಷ ಸಭೆಯನ್ನು ಕರೆಯತಕ್ಕದ್ದು.

3. ಸಾಮಾನ್ಯ ಸಭೆಗೆ ಹದಿನೈದು ದಿನಗಳ ನೋಟೀಸನ್ನು ಮತ್ತು ವಿಶೇಷ ಸಭೆಗೆ ಐದು ದಿನಗಳ ನೋಟೀಸನ್ನು, ಅಂಥ ಸಭೆಯನ್ನು ನಡೆಸುವ ಸಮಯ ಹಾಗೂ ಸ್ಥಳವನ್ನು ಮತ್ತು ಸಭೆಯಲ್ಲಿ ನಡೆಸತಕ್ಕ ಕಾರ್ಯಕಲಾಪಗಳನ್ನು ತಿಳಿಸಿ ಸದಸ್ಯ ಕಾರ್ಯದರ್ಶಿಯವರು ಸದಸ್ಯರಿಗೆ ನೀಡತಕ್ಕದ್ದು.

4. ಸಭೆಯ ನೋಟೀಸನ್ನು ಸಂದೇಶವಾಹಕನ ಮೂಲಕ ಅಥವಾ ಸದಸ್ಯನ ಇತ್ತೀಚಿಗಿನ ಮನೆಯ ಅಥವಾ ವ್ಯವಹಾರದ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಅಥವಾ ಸಂದರ್ಭಕ್ಕೆ ತಕ್ಕಂತೆ ಅಧ್ಯಕ್ಷರು ಸೂಕ್ತವೆಂದು ಭಾವಿಸಬಹುದಾದ ರೀತಿಯಲ್ಲಿ ಸದಸ್ಯರಿಗೆ ಕಳುಹಿಸಿಕೊಡಬಹುದು.

5. ಯಾರೇ ಸದಸ್ಯ, ಸಭೆಯಲ್ಲಿ ಯಾವುದೇ ವಿಷಯದ ಪರಿಶೀಲನೆಗಾಗಿ ಸದಸ್ಯ ಕಾರ್ಯದರ್ಶಿಯವರಿಗೆ ಹತ್ತು ದಿನಗಳ ನೋಟೀಸನ್ನು ನೀಡಿರದಿದ್ದ ಸಂದರ್ಭದಲ್ಲಿ ಅಧ್ಯಕ್ಷರು ತಮ್ಮ ವಿವೇಚನಾನುಸಾರ ಅಂಥ ವಿಷಯವನ್ನು ಪರಿಶೀಲನೆಗಾಗಿ ಮಂಡಿಸಲು ಸದಸ್ಯನಿಗೆ ಅನುಮತಿ ನೀಡಿದ ಹೊರತು ಆ ವಿಷಯವನ್ನು ಸಭೆಯ ಮುಂದೆ ತರತಕ್ಕದ್ದಲ್ಲ.

6. (ಎ) ಕೇಂದ್ರ ಸಮನ್ವಯ ಸಮಿತಿಯು ತನ್ನ ಸಭೆಗಳನ್ನು ದಿನದಿಂದ ದಿನಕ್ಕೆ ಅಥವಾ ಯಾವುದೇ ಒಂದು ನಿರ್ದಿಷ್ಟ ದಿನಕ್ಕೆ ಮುಂದೂಡಬಹುದು.

   (ಬಿ) ಕೇಂದ್ರ ಸಮನ್ವಯ ಸಮಿತಿಯ ಸಭೆಯನ್ನು ದಿನದಿಂದ ದಿನಕ್ಕೆ ಮುಂದೂಡಿದಲ್ಲಿ ಹಾಗೆ ಮುಂದೂಡಿದ ಸಭೆಯನ್ನು ಇರುವಂಥ ಸದಸ್ಯರಿಗೆ ಆ ಸಭೆ ನಡೆದಿದ್ದರೆ ಸಂದೇಶ ವಾಹಕನ ಮೂಲಕ ನೀಡತಕ್ಕದ್ದು. ಮತ್ತು ಮುಂದೂಡಿದ ಸಭೆಯ ನೋಟೀಸನ್ನು ಇತರ ಸದಸ್ಯರಿಗೆ ನೀಡುವ ಅಗತ್ಯವಿರುವುದಿಲ್ಲ.

   (ಸಿ) ಕೇಂದ್ರ ಸಮನ್ವಯ ಸಮಿತಿಯ ಸಭೆಯನ್ನು ದಿನದಿಂದ ದಿನಕ್ಕೆ ಮುಂದೂಡದೆ, ಯಾವ ದಿನಾಂಕದಂದು ಸಭೆ ನಡೆಸಬೇಕಾಗಿತ್ತೋ ಆ ದಿನಾಂಕದಿಂದ ಮತ್ತೊಂದು ದಿನಾಂಕಕ್ಕೆ ಮುಂದೂಡಿರುವಲ್ಲಿ ಅಂಥ ಸಭೆಯ ನೋಟೀಸನ್ನು ಈ ನಿಯಮದ 4ನೇ ಉಪ-ನಿಯಮದಲ್ಲಿ ಉಪಬಂಧಿಸಲಾದಂತೆ ಎಲ್ಲ ಸದಸ್ಯರಿಗೆ ನೀಡತಕ್ಕದ್ದು.

**12. ಮಂಡನಾಧಿಕಾರಿ**

ಅಧ್ಯಕ್ಷರು ಮಂಡಲಿಯ ಪ್ರತಿಯೊಂದು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಅವರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರು ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಯಾವುದೇ ಸಭೆಯಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇಬ್ಬರೂ ಗೈರುಹಾಜರಾಗಿರುವಾಗ ಅಲ್ಲಿ ಹಾಜರಿದ್ದ ಸದಸ್ಯರಲ್ಲಿ ಒಬ್ಬ ಸದಸ್ಯನನ್ನು ಸಭೆಯ ಅಧ್ಯಕ್ಷತೆ ವಹಿಸಲು ಚುನಾಯಿಸತಕ್ಕದ್ದು.

**13. ಕೋರಂ**

1. ಯಾವುದೇ ಸಭೆಗೆ ಒಟ್ಟು ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರು ಹಾಜರಿರಬೇಕು.

2. ಯಾವುದೇ ಸಭೆಗೆ ಸಮಯವನ್ನು ನಿಗಧಿ ಮಾಡಿರುವಲ್ಲಿ ಅಥವಾ ಯಾವುದೇ ಸಭೆ ನಡೆಯುತ್ತಿರುವ ಸಂದರ್ಭದಲ್ಲಿ ಒಟ್ಟು ಸದಸ್ಯರ ಮೂರನೇ ಒಂದರಷ್ಟಕ್ಕಿಂತ ಕಡಿಮೆ ಸದಸ್ಯರು ಹಾಜರಿರುವಲ್ಲಿ ಅಧ್ಯಕ್ಷರು ಸೂಕ್ತವೆಂದು ಭಾವಿಸಬಹುದಾದ ಸಮಯದ ಅಥವಾ ಮುಂದಿನ ಯಾವುದೇ ದಿನಕ್ಕೆ ಆ ಸಭೆಯನ್ನು ಮುಂದೂಡಬಹುದು.

3. ಮುಂದೂಡಲಾದ ಸಭೆಗೆ ಯಾವ ಕೋರಂನ ಅವಶ್ಯಕತೆಯಿರುವುದಿಲ್ಲ.

4. ಸಾಮಾನ್ಯ ಸಭೆಯ ಅಥವಾ ಸಂದರ್ಭಾನುಸಾರ ವಿಶೇಷ ಸಭೆಯ ಕಾರ್ಯಸೂಚಿಯಲ್ಲಿ ಇಲ್ಲದ ಯಾವುದೇ ವಿಷಯವನ್ನು ಮುಂದೂಡಲಾದ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳತಕ್ಕದ್ದಲ್ಲ.

5. (ಎ) ಕೇಂದ್ರ ಸಮನ್ವಯ ಸಮಿತಿಯ ಯಾವುದೇ ಸಭೆಯನ್ನು ಕೋರಂನ ಕೊರತೆಯಿಂದಾಗಿ ಮೇಲೆ ತಿಳಿಸಿದ (2)ನೇ ಉಪ-ನಿಯಮದ ಮೇರೆಗೆ ಮುಂದಿನ ದಿನಕ್ಕೆ ಮುಂದೂಡಿದಾಗ ಹಾಗೆ ಸಭೆಯನ್ನು ಮುಂದೂಡಿದ ಬಗ್ಗೆ ಮುಂದೂಡಿದ ಸಭೆ ನಡೆದ ಸ್ಥಳದಲ್ಲಿ ಇರುವ ಸದಸ್ಯರಿಗೆ ಸಂದೇಶ ವಾಹಕನ ಮೂಲಕ ನೋಟೀಸನ್ನು ನೀಡತಕ್ಕದ್ದು ಮತ್ತು ಹಾಗೆ ಮುಂದೂಡಿದ ಸಭೆಯ ನೋಟೀಸನ್ನು ಇತರ ಸದಸ್ಯರಿಗೆ ನೀಡುವ ಅಗತ್ಯವಿರುವುದಿಲ್ಲ.

   (ಬಿ) ಕೇಂದ್ರ ಸಮನ್ವಯ ಸಮಿತಿಯ ಸಭೆಯನ್ನು ಕೋರಂನ ಕೊರತೆಯಿಂದಾಗಿ ಮೇಲೆ ತಿಳಿಸಿದ (2)ನೇ ಉಪ-ನಿಯಮದ ಮೇರೆಗೆ ಮುಂದಿನ ದಿನಾಂಕಕ್ಕೆ ಮುಂದೂಡದೆ ಹೆಚ್ಚು ಕಾಲಾವಧಿ ದಿನಕ್ಕೆ ಮುಂದೂಡಿದಾಗ. ಹಾಗೆ ಮುಂದೂಡಿದ ಸಭೆಯ ನೋಟೀಸನ್ನು 11ನೇ ನಿಯಮದ (5)ನೇ ಉಪ-ನಿಯಮದಲ್ಲಿ ಉಪಬಂಧಿಸಿರುವಂತೆ ಎಲ್ಲ ಸದಸ್ಯರಿಗೂ ನೀಡತಕ್ಕದ್ದು.

**14. ನಡವಳಿಗಳು**

1. ಸದಸ್ಯ ಕಾರ್ಯದರ್ಶಿಯು ಸಭೆಗೆ ಹಾಜರಾಗಿರುವ ಸದಸ್ಯರ ಹೆಸರುಗಳನ್ನು ಮತ್ತು ಸಭೆಯಲ್ಲಿ ನಡೆದ ವ್ಯವಹಾರಣೆಗಳನ್ನು ಆ ಉದ್ದೇಶಕ್ಕಾಗಿ ಇಟ್ಟಿರುವ ಪುಸ್ತಕದಲ್ಲಿ ದಾಖಲು ಮಾಡಿಸತಕ್ಕದ್ದು.

2. ಹಿಂದಿನ ಸಭೆಯ ನಡವಳಿಗೆಳನ್ನು ಮುಂದೆ ನಡೆಯುವ ಪ್ರತಿಯೊಂದು ಸಭೆಯಲ್ಲಿ ಅಧ್ಯಕ್ಷ ಅಧಿಕಾರಿಯು ಓದಿ ಹೇಳತಕ್ಕದ್ದು ಮತ್ತು ಅಂಥ ಸಭೆಯಲ್ಲಿ ಅದನ್ನು ಸ್ವೀಕರಿಸಿ ಸಹಿ ಹಾಕತಕ್ಕದ್ದು.

3. ಸದಸ್ಯ ಕಾರ್ಯದರ್ಶಿಯವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ವ್ಯವಹಾರಣೆಗಳನ್ನು ಯಾವನೇ ಸದಸ್ಯನು ಪರಿಶೀಲಿಸಲು ಅವಕಾಶವಿರತಕ್ಕದ್ದು.

**15. ಸಭೆಯಲ್ಲಿ ಸಭಾ ನಿಯಮಗಳನ್ನು ಪಾಲಿಸುವುದು**

ಮಂಡನಾಧಿಕಾರಿಯು ಸಭೆಯಲ್ಲಿ ಸಭಾ ನಿಯಮಗಳನ್ನು ಪಾಲಿಸತಕ್ಕದ್ದು.

**16. ಸಭೆಯಲ್ಲಿ ವ್ಯವಹರಿಸತಕ್ಕ ಕಾರ್ಯಕಲಾಪಗಳು**

ಅಧ್ಯಕ್ಷ ಅಧಿಕಾರಿಯ ಅನುಮತಿ ನೀಡಿದ ಹೊರತು ಕಾರ್ಯಸೂಚಿಯಲ್ಲಿ ಸೇರಿರದ ಅಥವಾ 11ನೇ ನಿಯಮದ (5)ನೇ ಉಪ-ನಿಯಮದ ಮೇರೆಗೆ ಆ ಕುರಿತು ಸದಸ್ಯನು ನೋಟೀಸನ್ನು ನೀಡಿದಂಥ ಯಾವುದೇ ಕಾರ್ಯಕಲಾಪದ ಬಗ್ಗೆ ಚರ್ಚಿಸತಕ್ಕದ್ದಲ್ಲ.

**17. ಸಭೆಯಲ್ಲಿ ಕಾರ್ಯಕಲಾಪಗಳನ್ನು ವ್ಯವಹರಿಸತಕ್ಕ ರೀತಿಗಳು**

1. ಯಾವುದೇ ಸಭೆಯಲ್ಲಿ ಅಧ್ಯಕ್ಷ ಅಧಿಕಾರಿಯ ಅನುಮತಿ ಪಡೆದು ಸಭೆಯಲ್ಲಿಯ ಕಾರ್ಯಕಲಾಪವನ್ನು ಅನ್ಯಥಾ ನಿರ್ಣಯಿಸಿದ ಹೊರತು ಕಾರ್ಯಸೂಚಿಯಲ್ಲಿ ನಮೂದಿಸಲಾದ ಕ್ರಮದಲ್ಲಿ ಅದನ್ನು ವ್ಯವಹರಿಸತಕ್ಕದ್ದು.

2. ಸಭೆಯ ಪ್ರಾರಂಭದಲ್ಲಿ ಅಥವಾ ಸಭೆ ನಡೆಯುವ ಸಮಯದಲ್ಲಿ ನಿಲುವಳಿ ಸೂಚನೆ ಮೇಲಿನ ಚರ್ಚೆ ಮುಕ್ತಾಯಗೊಂಡ ನಂತರ ಅಧ್ಯಕ್ಷ ಅಧಿಕಾರಿಯಾಗಲಿ ಅಥವಾ ಒಬ್ಬ ಸದಸ್ಯನಾಗಲಿ ಕಾರ್ಯಸೂಚಿಯಲ್ಲಿ ನಮೂದಿಸಿದಂಥ ಕಾರ್ಯಕಲಾಪಗಳ ಕ್ರಮದಲ್ಲಿ ಯಾವುದೇ ಬದಲಾವಣೆಗೆ ಸಲಹೆ ಮಾಡಿದ್ದು ಅದನ್ನು ಅಧ್ಯಕ್ಷರು ಒಪ್ಪಿದರೆ ಮಾತ್ರ ಅಂಥ ಮಾರ್ಪಾಟು ಮಾಡತಕ್ಕದ್ದು.

**18. ಬಹುಮತದ ಮೂಲಕ ನಿರ್ಣಯ**

ಸಮಿತಿಯ ಸಭೆಯಲ್ಲಿ ಪರಿಶೀಲಿಸಲಾದ ಎಲ್ಲ ಪ್ರಶ್ನೆಗಳನ್ನು ಹಾಜರಿದ್ದ ಸದಸ್ಯರ ಬಹುಮತದ ಮತ್ತು ಮತ ಚಲಾಯಿಸುವ ಮೂಲಕ ನಿರ್ಣಯಿಸತಕ್ಕದ್ದು ಮತ್ತು ಸಮಾನ ಮತಗಳು ಬಂದ ಸಂದರ್ಭದಲ್ಲಿ ಅಧ್ಯಕ್ಷರು ಅಥವಾ ಅಧ್ಯಕ್ಷರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಅಥವಾ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಇಬ್ಬರೂ ಗೈರು ಹಾಜರಿರುವ ಸಂದರ್ಭಾನುಸಾರ ಸಭೆಯ ಅಧ್ಯಕ್ಷತೆ ವಹಿಸಿದ್ದ ಸದಸ್ಯನು ಎರಡನೆಯ ಅಥವಾ ನಿರ್ಣಾಯಕ ಮತ ಹೊಂದಿರತಕ್ಕದ್ದು.

**19. ಖಾಲಿಸ್ಥಾನ ಅಥವಾ ದೋಷದ ಕಾರಣದಿಂದಾಗಿ ಯಾವುದೇ ವ್ಯವಹರಣೆ ಅಮಾನ್ಯವಾಗತಕ್ಕದ್ದಲ್ಲ**

ಕೇಂದ್ರ ಸಮನ್ವಯ ಸಮಿತಿಯ ಯಾವುದೇ ವ್ಯವಹರಣೆಯು ಯಾವುದೇ ಖಾಲಿ ಸ್ಥಾನ ಇರುವಿಕೆಯ ಅಥವಾ ಸಮಿತಿಯ ರಚನೆಯಲ್ಲಿನ ಯಾವುದೇ ದೋಷದ ಕಾರಣದಿಂದ ಅಮಾನ್ಯವಾಗತಕ್ಕದ್ದಲ್ಲ.

## ಅಧ್ಯಾಯ–IV

## ಕೇಂದ್ರ ಕಾರ್ಯನಿರ್ವಾಹಕ ಸಮಿತಿ

**20. ಸರದಿಯ ಪ್ರಕಾರ ರಾಜ್ಯ ಸರ್ಕಾರದ ಪ್ರತಿನಿಧಿಗಳ ನಾಮನಿರ್ದೇಶನ**

ಕೇಂದ್ರ ಸರ್ಕಾರವು ಪ್ರತಿ ವರ್ಷ ದೇಶದ ನಾಲ್ಕು ಪ್ರದೇಶಗಳಿಗೂ ಪ್ರಾತಿನಿಧ್ಯವಿರುವಂತೆ ಸರದಿಯ ಪ್ರಕಾರ ಅಧಿನಿಯಮದ 9ನೇ ಪ್ರಕರಣದ (2)ನೇ ಉಪ–ಪ್ರಕರಣದ (ಹೆಚ್) ಖಂಡದ ಮೇರೆಗೆ ರಾಜ್ಯಗಳಿಂದ ಮೂವರು–ಸಂಘ ರಾಜ್ಯ ಕ್ಷೇತ್ರದಿಂದ ಒಬ್ಬರು ಹೀಗೆ ನಾಲ್ವರು ಸದಸ್ಯರನ್ನು ನಾಮನಿರ್ದೇಶಿಸತಕ್ಕದ್ದು.

**21. ದಿನಭತ್ಯೆ ಮತ್ತು ಪ್ರಯಾಣ ಭತ್ಯೆ**

1. ದೆಹಲಿಯಲ್ಲಿ ವಾಸಿಸುತ್ತಿರುವ ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಅಧಿಕಾರೇತರ ಸದಸ್ಯರಿಗೆ ಕೇಂದ್ರ ಸಮನ್ವಯ ಸಮಿತಿಯ ವಾಸ್ತವಿಕ ಸಭೆಗಳು ನಡೆದ ಪ್ರತಿಯೊಂದು ದಿನಕ್ಕೆ ಎಪ್ಪತ್ತೈದು ರೂಪಾಯಿ ಭತ್ಯೆ ನೀಡತಕ್ಕದ್ದು.

2. ದೆಹಲಿಯಲ್ಲಿ ವಾಸಿಸದ ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಅಧಿಕಾರೇತರ ಸದಸ್ಯರಿಗೆ ಸರ್ಕಾರದ 1ನೇ ದರ್ಜೆ ಅಧಿಕಾರಿಗೆ ನೀಡುವ ಅತ್ಯಂತ ಹೆಚ್ಚಿನ ದರಗಳಲ್ಲಿ ವಾಸ್ತವಿಕವಾಗಿ ಸಭೆ ನಡೆದ ಪ್ರತಿಯೊಂದು ದಿನಕ್ಕೆ ದಿನಭತ್ಯೆ ಮತ್ತು ಪ್ರಯಾಣ ಭತ್ಯೆ ಸಂದಾಯ ಮಾಡತಕ್ಕದ್ದು.

3. ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಅಧಿಕಾರಿ ಸದಸ್ಯನಿಗೆ, ಅಂಥ ಸದಸ್ಯನು ಸೇವೆ ಸಲ್ಲಿಸುತ್ತಿರುವ ಸಂಬಂಧಪಟ್ಟ ಸರ್ಕಾರದ ಪ್ರಸಕ್ತ ನಿಯಮಗಳ ಮೇರೆಗೆ ದೊರೆಯುವಂಥ ದರಗಳಲ್ಲಿ ಅದೇ ಪ್ರಯಾಣ ಅಥವಾ ತಂಗುವಿಕೆಗಳಿಗೆ ಯಾವುದೇ ಇತರ ಸರ್ಕಾರದ ಮೂಲದಿಂದ ಅಂಥ ಯಾವುದೇ ಭತ್ಯೆಗಳನ್ನು ಪಡೆದಿಲ್ಲವೆಂಬ ಪ್ರಮಾಣ ಪತ್ರ ಹಾಜರುಪಡಿಸಿದ ನಂತರ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು.

**22. ಸಭೆಗಳ ನೋಟೀಸು**

1. ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಸಭೆಗಳನ್ನು ಸಾಮಾನ್ಯವಾಗಿ ಅಧ್ಯಕ್ಷರು ನಿಗದಿಪಡಿಸಬಹುದಾದಂಥ ದಿನಗಳಂದು ದೆಹಲಿಯಲ್ಲಿ ನಡೆಸತಕ್ಕದ್ದು.

   ಆದರೆ, ಕೊನೆಪಕ್ಷ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

2. ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಕನಿಷ್ಠ ಹತ್ತು ಸದಸ್ಯರ ಲಿಖಿತ ಕೋರಿಕೆಯ ಮೇರೆಗೆ ಅಧ್ಯಕ್ಷರು ಸಮಿತಿಯ ವಿಶೇಷ ಸಭೆಯನ್ನು ಕರೆಯತಕ್ಕದ್ದು.

3. ಸಾಮಾನ್ಯ ಸಭೆಗೆ ಹದಿನೈದು ದಿನಗಳ ನೋಟೀಸನ್ನು ಮತ್ತು ವಿಶೇಷ ಸಭೆಗೆ ಐದು ದಿನಗಳ ನೋಟೀಸನ್ನು ಅಂಥ ಸಭೆಯನ್ನು ನಡೆಸುವ ಸಮಯ ಹಾಗೂ ಸ್ಥಳವನ್ನು ಮತ್ತು ಆ ಸಭೆಯಲ್ಲಿ ನಡೆಸತಕ್ಕ ಕಾರ್ಯಕಲಾಪಗಳನ್ನು ತಿಳಿಸಿ ಸದಸ್ಯ ಕಾರ್ಯದರ್ಶಿಯವರು ಸದಸ್ಯರಿಗೆ ನೀಡತಕ್ಕದ್ದು.

4. ಸಭೆಯ ನೋಟೀಸನ್ನು ಸಂದೇಶವಾಹಕನ ಮೂಲಕ ಅಥವಾ ಸದಸ್ಯನ ಇತ್ತೀಚಿಗಿನ ಮನೆಯ ಅಥವಾ ವ್ಯವಹಾರದ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಅಥವಾ ಸಂದರ್ಭಕ್ಕೆ ತಕ್ಕಂತೆ ಅಧ್ಯಕ್ಷರು ಸೂಕ್ತವೆಂದು ಭಾವಿಸಬಹುದಾದ ರೀತಿಯಲ್ಲಿ ಸದಸ್ಯರಿಗೆ ಕಳುಹಿಸಿಕೊಡಬಹುದು.

5. ಯಾರೇ ಸದಸ್ಯ ಸಭೆಯಲ್ಲಿ ಯಾವುದೇ ವಿಷಯದ ಪರಿಶೀಲನೆಗಾಗಿ ಸದಸ್ಯ ಕಾರ್ಯದರ್ಶಿಯವರಿಗೆ ಹತ್ತು ದಿನಗಳ ನೋಟೀಸನ್ನು ನೀಡಿರದೆ ಇದ್ದ ಸಂದರ್ಭದಲ್ಲಿ ಅಂಥ ವಿಷಯದ ಪರಿಶೀಲನೆಗಾಗಿ ಅಧ್ಯಕ್ಷರು ತಮ್ಮ ವಿವೇಚನಾನುಸಾರ ಸದಸ್ಯನಿಗೆ ಹಾಗೆ ಮಂಡಿಸಲು ಅನುಮತಿ ನೀಡಿದ್ದ ಹೊರತು ಸಭೆಯ ಮುಂದೆ ಆ ವಿಷಯವನ್ನು ತರತಕ್ಕದ್ದಲ್ಲ.

6. (ಎ) ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು ತನ್ನ ಸಭೆಗಳನ್ನು ದಿನದಿಂದ ದಿನಕ್ಕೆ ಅಥವಾ ಯಾವುದೇ ಒಂದು ನಿರ್ದಿಷ್ಟ ದಿನಕ್ಕೆ ಮುಂದೂಡಬಹುದು.

(ಬಿ) ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಸಭೆಯನ್ನು ದಿನದಿಂದ ದಿನಕ್ಕೆ ಮುಂದೂಡಿದಲ್ಲಿ ಹಾಗೆ ಮುಂದೂಡಲಾದ ಸಭೆಯ ನೋಟೀಸನ್ನು ಹಾಗೆ ಮುಂದೂಡಿದ ಸಭೆಯನ್ನು ನಡೆಸಿದ್ದರೆ ಅದರಲ್ಲಿ ಇರುವಂಥ ಸದಸ್ಯರಿಗೆ ಸಂದೇಶವಾಹಕನ ಮೂಲಕ ನೀಡತಕ್ಕದ್ದು ಮತ್ತು ಮುಂದೂಡಿದ ಸಭೆಯ ನೋಟೀಸನ್ನು ಇತರ ಸದಸ್ಯರಿಗೆ ನೀಡುವ ಅಗತ್ಯವಿರುವುದಿಲ್ಲ.

(ಸಿ) ಕೇಂದ್ರ ಕಾರ್ಯನಿರ್ವಾಹಕ ಸಮಿತಿಯನ್ನು ದಿನದಿಂದ ದಿನಕ್ಕೆ ಮುಂದೂಡದೆ ಯಾವ ದಿನಾಂಕದಂದು ಸಭೆ ನಡೆಸಬೇಕಾಗಿದೆಯೋ ಆ ದಿನಾಂಕದಿಂದ ಮತ್ತೊಂದು ದಿನಾಂಕಕ್ಕೆ ಮುಂದೂಡಿರುವಲ್ಲಿ ಅಂಥ ಸಭೆಯ ನೋಟೀಸನ್ನು ಈ ನಿಯಮದ (4)ನೇ ಉಪ–ನಿಯಮದಲ್ಲಿ ಉಪಬಂಧಿಸಲಾದಂತೆ ಎಲ್ಲ ಸದಸ್ಯರಿಗೆ ನೀಡತಕ್ಕದ್ದು.

**23. ಮಂಡನಾಧಿಕಾರಿ**

ಅಧ್ಯಕ್ಷರು ಮಂಡಲಿಯ ಪ್ರತಿಯೊಂದು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಅವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಯಾವುದೇ ಸಭೆಯಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇಬ್ಬರಿಗೂ ಗೈರುಹಾಜರಿರುವಾಗ ಅದರಲ್ಲಿ ಹಾಜರಿರುವ ಸದಸ್ಯರಲ್ಲಿ ಒಬ್ಬ ಸದಸ್ಯನನ್ನು ಸಭೆಯ ಅಧ್ಯಕ್ಷತೆ ವಹಿಸಲು ಚುನಾಯಿಸತಕ್ಕದ್ದು.

**24. ಕೋರಂ**

1. ಯಾವುದೇ ಸಭೆಗೆ ಒಟ್ಟು ಸದಸ್ಯರ ಮೂರನೇ ಒಂದು ಭಾಗದಷ್ಟು ಸದಸ್ಯರು ಹಾಜರಿರತಕ್ಕದ್ದು.
2. ಯಾವುದೇ ಸಭೆಗೆ ಸಮಯವನ್ನು ನಿಗದಿ ಮಾಡಿರುವಲ್ಲಿ ಅಥವಾ ಯಾವುದೇ ಸಭೆ ನಡೆಯುವ ಸಂದರ್ಭದಲ್ಲಿ ಒಟ್ಟ ಸದಸ್ಯರ ಮೂರನೇ ಒಂದರಷ್ಟಕ್ಕಿಂತ ಕಡಿಮೆ ಸದಸ್ಯರು ಹಾಜರಿರುವಲ್ಲಿ ಅಧ್ಯಕ್ಷರು ಸೂಕ್ತವೆಂದು ಭಾವಿಸಬಹುದಾದ ಗಂಟೆಗಳವರೆಗೆ ಅಥವಾ ಮುಂದಿನ ಯಾವುದೇ ದಿನಾಂಕಕ್ಕೆ ಆ ಸಭೆಯನ್ನು ಮುಂದೂಡಬಹುದು.
3. ಮುಂದೂಡಲಾದ ಸಭೆಗೆ ಯಾವ ಕೋರಂನ ಆವಶ್ಯಕತೆಯಿರುವುದಿಲ್ಲ.
4. ಸಾಮಾನ್ಯ ಸಭೆಯ ಅಥವಾ ಸಂದರ್ಭಾನುಸಾರ ವಿಶೇಷ ಸಭೆಯ ಕಾರ್ಯಸೂಚಿಯಲ್ಲಿ ಇಲ್ಲದ ಯಾವುದೇ ವಿಷಯವನ್ನು ಮುಂದೂಡಲಾದ ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳತಕ್ಕದ್ದಲ್ಲ.
5. (ಎ) ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಯಾವುದೇ ಸಭೆಯನ್ನು ಕೋರಂನ ಕೊರತೆಯಿಂದಾಗಿ ಮೇಲೆ ತಿಳಿಸಿದ (2)ನೇ ಉಪ–ನಿಯಮದ ಮೇರೆಗೆ ಮುಂದಿನ ದಿನಕ್ಕೆ ಮುಂದೂಡಿದಾಗ ಹಾಗೆ ಸಭೆಯನ್ನು ಮುಂದೂಡಿದ ಬಗ್ಗೆ ಮುಂದೂಡಿದ ಸಭೆ ನಡೆದಿದ್ದರೆ ಸಭೆಯ ಸ್ಥಳದಲ್ಲಿ ಇರುವ ಸದಸ್ಯರಿಗೆ ಸಂದೇಶವಾಹಕನ ಮೂಲಕ ನೋಟೀಸನ್ನು ನೀಡತಕ್ಕದ್ದು ಮತ್ತು ಹಾಗೆ ಮುಂದೂಡಿದ ಸಭೆಯ ನೋಟೀಸನ್ನು ಇತರ ಸದಸ್ಯರಿಗೆ ನೀಡುವ ಅಗತ್ಯವಿರುವುದಿಲ್ಲ.

(ಬಿ) ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಸಭೆಯನ್ನು ಕೋರಂನ ಕೊರತೆಯಿಂದಾಗಿ ಮೇಲೆ ತಿಳಿಸಿದ (2)ನೇ ಉಪ–ನಿಯಮದ ಮೇರೆಗೆ ದಿನಾಂಕಕ್ಕೆ ಅಲ್ಲದೆ ಸಾಕಷ್ಟು ಅವಧಿಗೆ ಮುಂದೂಡಿದಾಗ ಹಾಗೆ ಮುಂದೂಡಿದ ಸಭೆಯ ನೋಟೀಸನ್ನು 22ನೇ ನಿಯಮದ (4)ನೇ ಉಪ–ನಿಯಮದಲ್ಲಿ ಎಲ್ಲ ಸದಸ್ಯರಿಗೂ ನೀಡತಕ್ಕದ್ದು.

**25. ನಡಾವಳಿಗಳು**

1. ಸದಸ್ಯ ಕಾರ್ಯದರ್ಶಿಯು ಸಭೆಗೆ ಹಾಜರಾಗಿರುವ ಸದಸ್ಯರ ಹೆಸರುಗಳನ್ನು ಮತ್ತು ಸಭೆಯಲ್ಲಿ ನಡೆದ ವ್ಯವಹರಣೆಗಳನ್ನು ಆ ಉದ್ದೇಶಕ್ಕಾಗಿ ಇಟ್ಟಿರುವ ಪುಸ್ತಕದಲ್ಲಿ ದಾಖಲು ಮಾಡಿಸತಕ್ಕದ್ದು.
2. ಮುಂದೆ ನಡೆಯುವ ಪ್ರತಿಯೊಂದು ಸಭೆಯಲ್ಲಿ ಹಿಂದಿನ ಸಭೆಯ ನಡಾವಳಿಗಳನ್ನು ಮಂಡನಾಧಿಕಾರಿಯು ಓದಿ ಹೇಳತಕ್ಕದ್ದು ಮತ್ತು ಅಂಥ ಸಭೆಯಲ್ಲಿ ಅದನ್ನು ಸ್ವೀಕರಿಸಿ ಸಹಿ ಹಾಕತಕ್ಕದ್ದು.
3. ಸದಸ್ಯ ಕಾರ್ಯದರ್ಶಿಯವರ ಕಚೇರಿಯಲ್ಲಿ ನಡಾವಳಿಗಳನ್ನು ಯಾವನೇ ಸದಸ್ಯನು ಕಚೇರಿ ವೇಳೆಯಲ್ಲಿ ಪರಿಶೀಲಿಸಲು ಅವಕಾಶವಿರತಕ್ಕದ್ದು.

**26. ಸಭೆಯಲ್ಲಿ ಸಭಾ ನಿಯಮಗಳನ್ನು ಪಾಲಿಸುವುದು**

ಮಂಡನಾಧಿಕಾರಿಯು ಸಭೆಯಲ್ಲಿ ಸಭಾ ನಿಯಮಗಳನ್ನು ಪಾಲಿಸತಕ್ಕದ್ದು.

**27. ಸಭೆಯಲ್ಲಿ ವ್ಯವಹರಿಸತಕ್ಕ ಕಾರ್ಯಕಲಾಪಗಳು**

ಮಂಡನಾಧಿಕಾರಿಯ ಅನುಮತಿ ಪಡೆದ ಹೊರತು ಕಾರ್ಯಸೂಚಿಯಲ್ಲಿ ಸೇರಿರದ ಅಥವಾ 22ನೇ ನಿಯಮದ (5)ನೇ ಉಪ–ನಿಯಮದ ಮೇರೆಗೆ ಆ ಕುರಿತು ಸದಸ್ಯನು ನೋಟೀಸನ್ನು ನೀಡಿದಂಥ ಯಾವುದೇ ಕಾರ್ಯಕಲಾಪದ ಬಗ್ಗೆ ಚರ್ಚಿಸತಕ್ಕದ್ದಲ್ಲ.

**28.** (1) ಯಾವುದೇ ಸಭೆಯಲ್ಲಿ ಕಾರ್ಯಕಲಾಪವನ್ನು ಕಾರ್ಯಸೂಚಿಯಲ್ಲಿ ನಮೂದಿಸಲಾದ ಕ್ರಮದಲ್ಲಿ ವ್ಯವಹರಿಸತಕ್ಕದ್ದು.

(2) ಸಭೆಯ ಪ್ರಾರಂಭದಲ್ಲಿ ಅಥವಾ ಸಭೆ ನಡೆಯುವ ಸಮಯದಲ್ಲಿ ನಿಲುವಳಿ ಸೂಚನೆ ಮೇಲಿನ ಚರ್ಚೆ ಮುಕ್ತಾಯಗೊಂಡ ನಂತರ ಅಧ್ಯಕ್ಷ ಅಧಿಕಾರಿಯಾಗಲಿ ಅಥವಾ ಒಬ್ಬ ಸದಸ್ಯನಾಗಲಿ ಕಾರ್ಯಸೂಚಿಯಲ್ಲಿ ನಮೂದಿಸಿದಂತೆ ಕಾರ್ಯಕಲಾಪಗಳ ಕ್ರಮದಲ್ಲಿ ಯಾವುದೇ ಬದಲಾವಣೆಗೆ ಸಲಹೆ ಮಾಡಿದ್ದು ಅದನ್ನು ಅಧ್ಯಕ್ಷರು ಒಪ್ಪಿದರೆ ಮಾತ್ರ ಅಂಥ ಮಾರ್ಪಾಟು ಮಾಡತಕ್ಕದ್ದು.

**29. ಬಹುಮತದ ಮೂಲಕ ನಿರ್ಣಯ**

ಸಮಿತಿಯ ಸಭೆಯಲ್ಲಿ ಪರಿಶೀಲಿಸಲಾದ ಎಲ್ಲ ಪ್ರಶ್ನೆಗಳನ್ನು ಹಾಜರಿದ್ದ ಸದಸ್ಯರ ಬಹುಮತದ ಮತ್ತು ಮತ ಚಲಾಯಿಸುವ ಮೂಲಕ ನಿರ್ಣಯಿಸತಕ್ಕದ್ದು ಮತ್ತು ಸಮಾನ ಮತಗಳು ಬಂದ ಸಂದರ್ಭದಲ್ಲಿ ಅಧ್ಯಕ್ಷರು ಅಥವಾ ಅಧ್ಯಕ್ಷರು ಗೈರುಹಾಜರಿಯಿದ್ದಾಗ ಉಪಾಧ್ಯಕ್ಷರು ಅಥವಾ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಇಬ್ಬರೂ ಗೈರುಹಾಜರಿರುವಾಗ ಸಂದರ್ಭಾನುಸಾರ ಸಭೆಯ ಅಧ್ಯಕ್ಷತೆ ವಹಿಸಿದ ಸದಸ್ಯನು ಎರಡನೆಯ ಅಥವಾ ನಿರ್ಣಾಯಕ ಮತ ಹೊಂದಿರತಕ್ಕದ್ದು.

**30. ಖಾಲಿಸ್ಥಾನ ಅಥವಾ ಯಾವುದೇ ದೋಷದ ಕಾರಣದಿಂದಾಗಿ ನಡವಳಿಗಳು ಅಮಾನ್ಯವಾಗತಕ್ಕದ್ದಲ್ಲ.**

ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಯಾವುದೇ ನಡವಳಿಗಳು ಯಾವುದೇ ಖಾಲಿಸ್ಥಾನ ಇರುವಿಕೆಯ ಅಥವಾ ಸಮಿತಿಯ ರಚನೆಯಲ್ಲಿನ ಯಾವುದೇ ದೋಷದ ಕಾರಣದಿಂದ ಅಮಾನ್ಯವಾಗತಕ್ಕದ್ದಲ್ಲ.

**31. ಕೇಂದ್ರ ಕಾರ್ಯನಿರ್ವಾಹಕ ಸಮಿತಿಯೊಂದಿಗೆ ವ್ಯಕ್ತಿಗಳ ಸಹಭಾಗಿತ್ವದ ವಿಧಾನ ಮತ್ತು ಉದ್ದೇಶ**

1. ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು ನಿಯಮದ ಮೇರೆಗೆ ತನ್ನ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಯಾವನೇ ವ್ಯಕ್ತಿಯ ಸಹಾಯ ಅಥವಾ ಸಲಹೆಯು ಉಪಯುಕ್ತವೆಂದು ಭಾವಿಸಿದಲ್ಲಿ ಅಂಥ ವ್ಯಕ್ತಿಯನ್ನು ತನ್ನ ಸಭೆಗಳ ಚರ್ಚೆಗಳಲ್ಲಿ ಭಾಗವಹಿಸಲು ಆಮಂತ್ರಿಸಬಹುದು.
2. (1)ನೇ ಉಪ-ನಿಯಮದ ಮೇರೆಗೆ ಕೇಂದ್ರ ಕಾರ್ಯನಿರ್ವಾಹಕ ಸಮಿತಿಯೊಂದಿಗೆ ಸಹಭಾಗಿಯಾದ್ದ ವ್ಯಕ್ತಿಯು ದೆಹಲಿಯಲ್ಲಿರುವ ಅಧಿಕಾರೇತರ ನಿವಾಸಿಯಾಗಿದ್ದರೆ ಹಾಗೆ ಅವನು ಭಾಗವಹಿಸಿದ್ದ ಸಮಿತಿಯ ವಾಸ್ತವಿಕ ಸಭೆಯ ಪ್ರತಿಯೊಂದು ದಿನಕ್ಕೆ ಎಪ್ಪತ್ತೈದು ರೂಪಾಯಿ ಭತ್ಯೆ ಪಡೆಯಲು ಅರ್ಹನಾಗಿರುತ್ತಾನೆ.
3. ಅಂಥ ವ್ಯಕ್ತಿಯು ದೆಹಲಿಯ ನಿವಾಸಿಯಾಗಿರದಿದ್ದರೆ ಕೇಂದ್ರ ಸರ್ಕಾರದ 1ನೇ ದರ್ಜೆ ಅಧಿಕಾರಿಗೆ ನೀಡುವ ಅತ್ಯಂತ ಹೆಚ್ಚಿನ ದರದಲ್ಲಿ ವಾಸ್ತವಿಕ ಸಭೆ ನಡೆದ ಪ್ರತಿಯೊಂದು ದಿನಕ್ಕೆ ದಿನಭತ್ಯೆ ಮತ್ತು ಪ್ರಯಾಣಭತ್ಯೆಯನ್ನು ಆ ವ್ಯಕ್ತಿಗೆ ಸಂದಾಯಮಾಡತಕ್ಕದ್ದು.
4. ಅಂಥ ವ್ಯಕ್ತಿಯು ಸರ್ಕಾರಿ ನೌಕರನಾಗಿದ್ದರೆ ಅಥವಾ ಸರ್ಕಾರದ ಸಂಸ್ಥೆಯಲ್ಲಿ ನೌಕರನಾಗಿದ್ದರೆ ಅವನಿಗೆ ಅನ್ವಯಿಸುವ ಪ್ರಸಕ್ತ ನಿಯಮಗಳ ಮೇರೆಗೆ ನೀಡಬಹುದಾದ ದರಗಳಲ್ಲಿ ಪ್ರಯಾಣ ಮತ್ತು ದಿನಭತ್ಯೆಗಳನ್ನು ಯಾವುದೇ ಸರ್ಕಾರದ ಮೂಲದಿಂದ ಅದೇ ಪ್ರಯಾಣ ಮತ್ತು ತಂಗುವಿಕೆಗೆ ಅಂಥ ಯಾವುದೇ ಭತ್ಯೆ ಪಡೆದಿಲ್ಲವೆಂಬ ಪ್ರಮಾಣಪತ್ರ ಹಾಜರುಪಡಿಸಿದ ಮೇಲೆ ಪಡೆಯಲು ಅರ್ಹನಾಗಿರತಕ್ಕದ್ದು.

**32. ಸಹಭಾಗಿಯಾಗಿದ್ದ ವ್ಯಕ್ತಿಗೆ ಶುಲ್ಕ**

31ನೇ ನಿಯಮದಲ್ಲಿ ಏನೇ ಇದ್ದರೂ ಕೇಂದ್ರ ಕಾರ್ಯನಿರ್ವಾಹಕ ಸಮಿತಿಯೊಂದಿಗೆ ಸಹಭಾಗಿಯಾದ್ದ ವ್ಯಕ್ತಿಗೆ ಕೇಂದ್ರ ಸರ್ಕಾರದ ಪೂರ್ವ ಅನುಮತಿ ಪಡೆದು ಸಹಭಾಗಿಯಾಗಿದ್ದ ವ್ಯಕ್ತಿಗೆ ವಹಿಸಿದ ಕೆಲಸದ ಸ್ವರೂಪ, ವಿದ್ಯಾರ್ಹತೆ ಮತ್ತು ಅನುಭವವನ್ನು ಆಧರಿಸಿ ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

**33. ಸಹಭಾಗಿಯಾಗಿದ್ದ ವ್ಯಕ್ತಿಗಳು ಕೈಗೊಳ್ಳುವ ಪ್ರವಾಸಗಳು**

ಸಹಭಾಗಿಯಾಗಿದ್ದ ವ್ಯಕ್ತಿಯು, ಅಧ್ಯಕ್ಷರ ಪೂರ್ವ ಅನುಮತಿ ಪಡೆದು ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು ತನಗೆ ವಹಿಸಿಕೊಟ್ಟ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ದೇಶದೊಳಗೆ ಪ್ರವಾಸ ಕೈಗೊಳ್ಳಬಹುದು ಮತ್ತು ಅಂಥ ಪ್ರವಾಸಗಳಿಗೆ ಕೇಂದ್ರ ಸರ್ಕಾರದ 1ನೇ ದರ್ಜೆ ಅಧಿಕಾರಿಗೆ ನೀಡಲಾಗುವ ದರಗಳಲ್ಲಿ ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ಪಡೆಯಲು ಅರ್ಹನಾಗಿರತಕ್ಕದ್ದು.

**34. ಸಹಭಾಗಿಯಾಗಿದ್ದ ವ್ಯಕ್ತಿಯು ಯಾವುದೇ ಮಾಹಿತಿಯನ್ನು ಬಹಿರಂಗ ಪಡಿಸತಕ್ಕದ್ದಲ್ಲ**

ಸಹಭಾಗಿಯಾಗಿದ್ದ ವ್ಯಕ್ತಿಯು ಕೇಂದ್ರ ಕಾರ್ಯನಿರ್ವಾಹಕ ಸಮಿತಿ ನೀಡಿರುವ ಅಥವಾ ಕೇಂದ್ರ ಕಾರ್ಯನಿರ್ವಾಹಕ ಸಮಿತಿಯಿಂದ ಅಥವಾ ಇತರ ರೀತಿಯಲ್ಲಿ ತನಗೆ ವಹಿಸಿಕೊಟ್ಟ ಕರ್ತವ್ಯಗಳನ್ನು ನಿರ್ವಹಿಸುವಾಗ ಪಡೆದಿರುವ ಯಾವುದೇ ಮಾಹಿತಿಯನ್ನು ಸಮಿತಿಯ ಅಧ್ಯಕ್ಷರ ಲಿಖಿತ ಅನುಮತಿಯಿಲ್ಲದೆ ಕೇಂದ್ರ ಕಾರ್ಯನಿರ್ವಾಹಕ ಸಮಿತಿಗೆ ಸಂಬಂಧಿಸಿರದ ಯಾವನೇ ಇತರ ವ್ಯಕ್ತಿಗೆ ಬಹಿರಂಗಗೊಳಿಸತಕ್ಕದ್ದಲ್ಲ.

**35. ಸಹಭಾಗಿಯಾಗಿದ್ದ ವ್ಯಕ್ತಿಯ ಕರ್ತವ್ಯಗಳು ಮತ್ತು ಪ್ರಕಾರ್ಯಗಳು**

ಸಹಭಾಗಿಯಾಗಿದ್ದ ವ್ಯಕ್ತಿಯು, ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು ವಹಿಸಿಕೊಡಬಹುದಾದಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

## ಅಧ್ಯಾಯ-V

## ಉದ್ಯೋಗ

**36. ಖಾಲಿ ಸ್ಥಾನಗಳ ಗಣನೆ**

ಗ್ರೂಪ್ ಎ,ಬಿ,ಸಿ ಮತ್ತು ಡಿ ಹುದ್ದೆಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗಾಗಿ ಖಾಲಿಯಿರುವ ಹುದ್ದೆಗಳನ್ನು ಎಣಿಕೆ ಮಾಡುವ ಉದ್ದೇಶಕ್ಕಾಗಿ; ಖಾಲಿ ಸ್ಥಾನಗಳನ್ನು ಎಣಿಕೆ ಮಾಡುವ ವಿಧಾನವು ಸರ್ಕಾರವು ಈ ಕುರಿತು ಸೂಚನೆಗಳ ಅಥವಾ ಆದೇಶಗಳ ಮೂಲಕ ನಿರ್ಧರಿಸಬಹುದಾದಂಥ ವಿಧಾನವಾಗಿರತಕ್ಕದ್ದು.

**37. ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಖಾಲಿ ಹುದ್ದೆಗಳನ್ನು ಅಧಿಸೂಚಿಸುವುದು**

1. ಈ ಕೆಳಕಂಡ ಖಾಲಿ ಹುದ್ದೆಗಳನ್ನು ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಅಧಿಸೂಚಿಸತಕ್ಕದ್ದು

(ಎ) ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ಸಮುಚಿತ ಸರ್ಕಾರವಾಗಿರುವಂಥ ಕಾರ್ಯಸಂಸ್ಥೆಯಲ್ಲಿ ಉಂಟಾಗುವಂಥ ತಿಂಗಳೊಂದಕ್ಕೆ 1400 ರೂ. ಅಥವಾ ಅದಕ್ಕೂ ಹೆಚ್ಚಿನ ಮೂಲವೇತನದ ತಾಂತ್ರಿ ಅಥವಾ ವೈಜ್ಞಾನಿಕ ಸ್ವರೂಪದ ಖಾಲಿ ಹುದ್ದೆಗಳು ಮತ್ತು

(ಬಿ) ಕಾರ್ಯಸಂಸ್ಥೆಯು ಇರುವಂಥ ರಾಜ್ಯದ ಅಥವಾ ಸಂಘ ರಾಜ್ಯಕ್ಷೇತ್ರದ ಹೊರಗಿನ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ನಿಯೋಜಕನು ಖಾಲಿ ಹುದ್ದೆಗಳನ್ನು ತಿಳಿಸಬೇಕೆಂದು ಅಪೇಕ್ಷಿಸಿದಲ್ಲಿ, ಈ ಕುರಿತು ಕೇಂದ್ರ ಸರ್ಕಾರವು ಅಧಿಸೂಚನೆ ಮೂಲಕ ರಾಜ್ಯಪತ್ರದಲ್ಲಿ ನಿರ್ದಿಷ್ಟ ಪಡಿಸಬಹುದಾದಂತೆ ಅಂಥ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಅಧಿಸೂಚಿಸತಕ್ಕದ್ದು. ಖಾಲಿ ಹುದ್ದೆಗಳ ಅಧಿಸೂಚನೆಯ ಒಂದು ಪ್ರತಿಯನ್ನು ಸಂಬಂಧಪಟ್ಟ ಅಂಗವಿಕಲರ ವೃತ್ತೀಯ ಪುನರ್ ವಸತಿ ಕೇಂದ್ರಕ್ಕೆ ಕಳುಹಿಸತಕ್ಕದ್ದು.

2. (1)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿದ ಖಾಲಿ ಹುದ್ದೆಗಳನ್ನು ಸಂಬಂಧಪಟ್ಟ ಸ್ಥಳೀಯ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಅಧಿಸೂಚಿಸತಕ್ಕದ್ದು. ಖಾಲಿ ಹುದ್ದೆಗಳ ಅಧಿಸೂಚನೆಯ ಒಂದು ಪ್ರತಿಯನ್ನು

ಸಂಬಂಧಪಟ್ಟ ಅಂಗವಿಕಲರ ವೃತ್ತೀಯ ಪುನರ್ ವಸತಿ ಕೇಂದ್ರಕ್ಕೆ ಕಳುಹಿಸತಕ್ಕದ್ದು.

**38. ಖಾಲಿ ಹುದ್ದೆಗಳನ್ನು ಅಧಿಸೂಚಿಸುವ ನಮೂನೆ ಮತ್ತು ವಿಧಾನ**

ಖಾಲಿ ಹುದ್ದೆಗಳನ್ನು ಸಂಬಂಧಪಟ್ಟ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಲಿಖಿತ ರೂಪದಲ್ಲಿ ಅಧಿಸೂಚಿಸತಕ್ಕದ್ದು ಮತ್ತು ಪ್ರತಿಯೊಂದು ಖಾಲಿ ಹುದ್ದೆಯ ಬಗ್ಗೆ ಈ ಮುಂದಿನ ವಿವರಗಳನ್ನು ಒದಗಿಸತಕ್ಕದ್ದು ಎಂದರೆ

(1) ನಿಯೋಜಕರ ಹೆಸರು ಮತ್ತು ವಿಳಾಸ

(2) ನಿಯೋಜಕನ ದೂರವಾಣಿ ಸಂಖ್ಯೆ ಯಾವುದಾದರೂ ಇದ್ದರೆ

(3) ಖಾಲಿ ಹುದ್ದೆಯ ಸ್ವರೂಪ

(ಎ) ಬೇಕಾಗಿರುವ ನೌಕರರ ಮಾದರಿ (ಪದನಾಮ)

(ಬಿ) (i) ಕರ್ತವ್ಯಗಳ ವಿವರ

(ii) ದೈಹಿಕ ಅಗತ್ಯತೆ (ಎಂದರೆ ಹುದ್ದೆಯ ದೃಷ್ಟಿಯ ನಿಖರತೆ, ಆಗಾಗ್ಗೆ ಚಲನೆ, ನಡೆಯುವಿಕೆ, ದೀರ್ಘಕಾಲ ಕುಳಿತುಕೊಂಡಿರುವಿಕೆ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.)

(ಸಿ) ಬೇಕಾಗಿರುವ ವಿದ್ಯಾರ್ಹತೆ

(i) ಅಗತ್ಯವಿರುವುದು

(ii) ಅಪೇಕ್ಷಣೀಯ

(ಡಿ) ವಯೋಮಿತಿ, ಏನಾದರೂ ಇದ್ದರೆ

(ಇ) ಮಹಿಳೆಯರು ಅರ್ಹರೆ ?

4. ಖಾಲಿ ಹುದ್ದೆಗಳ ಸಂಖ್ಯೆ (ಅಂಗವಿಕಲ ವ್ಯಕ್ತಿಗಳಿಗೆ ಮೀಸಲಿರಿಸಿರುವುದು)

| ದೈಹಿಕ ಅಂಗವಿಕಲತೆ | ದೃಷ್ಟಿ ದೋಷ ಅಂಗವಿಕಲತೆ | ಶ್ರವಣ ದೋಷ ಅಂಗವಿಕಲತೆ |
|---|---|---|

(ಎ) ಖಾಯಂ

(ಬಿ) ತಾತ್ಕಾಲಿಕ

5. ವೇತನ ಮತ್ತು ಭತ್ಯೆಗಳು

6. ಕೆಲಸದ ಸ್ಥಳ (ಕಾರ್ಯಸಂಸ್ಥೆ ಇರುವಂಥ ಪಟ್ಟಣ, ಗ್ರಾಮ ಮತ್ತು ಜಿಲ್ಲೆಯ ಹೆಸರು)

7. ಖಾಲಿ ಹುದ್ದೆಯನ್ನು ತುಂಬಿಕೊಳ್ಳುವ ಸಂಭವನೀಯ ದಿನಾಂಕ

8. ಅರ್ಜಿದಾರರ ಸಂದರ್ಶನ, ಪರೀಕ್ಷೆಗೆ ಸಂಬಂಧಿಸಿದ ವಿವರಗಳು

(ಎ) ಸಂದರ್ಶನದ, ಪರೀಕ್ಷೆಯ ದಿನಾಂಕ

(ಬಿ) ಸಂದರ್ಶನದ, ಪರೀಕ್ಷೆಯ ಸಮಯ

(ಸಿ) ಸಂದರ್ಶನದ, ಪರೀಕ್ಷೆಯ ಸ್ಥಳ

(ಡಿ) ಅರ್ಜಿದಾರರು ಯಾವ ವ್ಯಕ್ತಿಯ ಬಳಿ ವರದಿ ಮಾಡಿಕೊಳ್ಳಬೇಕೋ ಅಂಥ ವ್ಯಕ್ತಿಯ ಪದನಾಮ ಮತ್ತು ವಿಳಾಸ

9. ಯಾವುದೇ ಇತರ ಸಂಬಂಧಪಟ್ಟ ಮಾಹಿತಿ

ಈ ನಿಯಮದ ಮೇರೆಗೆ ವಿಶೇಷ ಉದ್ಯೋಗ ವಿನಿಮಯ ಕೇಂದ್ರ, ಹಾಗೂ ಅಂಗವಿಕಲ ವ್ಯಕ್ತಿಗಳ ವೃತ್ತೀಯ ಪುನರ್ ವಸತಿ ಕೇಂದ್ರಕ್ಕೆ ಈಗಾಗಲೇ ಒದಗಿಸಿರುವ ಖಾಲಿ ಹುದ್ದೆಗಳ ಕುರಿತ ವಿವರಗಳಲ್ಲಿ ಯಾವುದೇ ಬದಲಾವಣೆಯಿದ್ದರೆ ಅದನ್ನು ಸಂಬಂಧಪಟ್ಟ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಪುನಃ ಲಿಖಿ ರೂಪತದಲ್ಲಿ ತಿಳಿಯಪಡಿಸತಕ್ಕದ್ದು.

**39. ಖಾಲಿ ಹುದ್ದೆಗಳನ್ನು ಅಧಿಸೂಚಿಸಲು ಕಾಲಮಿತಿ**

1. ಸ್ಥಳೀಯ ಉದ್ಯೋಗ ವಿನಿಮಯ ಕೇಂದ್ರಕ್ಕೆ ಅಧಿಸೂಚಿಸಬೇಕಾಗಿರುವ ಖಾಲಿ ಹುದ್ದೆಗಳನ್ನು ಸಂದರ್ಶನ ಅಥವಾ ಪರೀಕ್ಷೆಗಳನ್ನು ನಡೆಸುವುದಿದ್ದಲ್ಲಿ ಅರ್ಜಿದಾರರ ಸಂದರ್ಶನ ಅಥವಾ ಪರೀಕ್ಷೆ ನಡೆಸುವ ದಿನಾಂಕಕ್ಕೆ ಅಥವಾ ಸಂದರ್ಶನ ಅಥವಾ ಪರೀಕ್ಷೆಗಳನ್ನು ನಡೆಸದಿರುವ ಸಂದರ್ಭದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲುದ್ದೇಶಿಸಿರುವ ದಿನಾಂಕಕ್ಕೆ ಕೊನೆಪಕ್ಷ ಮೂವತ್ತು ದಿವಸಗಳಿಗೆ ಮೊದಲು ಅಧಿಸೂಚಿಸತಕ್ಕದ್ದು.

2. 37ನೇ ನಿಯಮದ (1)ನೇ ಉಪ-ನಿಯಮದ ಮೇರೆಗೆ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಅಧಿಸೂಚಿಸಬೇಕಾದ ಖಾಲಿ ಹುದ್ದೆಗಳನ್ನು, ಸಂದರ್ಶನಗಳನ್ನು ಅಥವಾ ಪರೀಕ್ಷೆಗಳನ್ನು ನಡೆಸುವ ಸಂದರ್ಭದಲ್ಲಿ ಅರ್ಜಿದಾರರ ಸಂದರ್ಶನ ಅಥವಾ ಪರೀಕ್ಷೆ ನಡೆಸುವ ದಿನಾಂಕಕ್ಕೆ ಅಥವಾ ಸಂದರ್ಶನ ಅಥವಾ ಪರೀಕ್ಷೆಯನ್ನು ನಡೆಸದೆ ಹಾಗೆಯೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಲ್ಲಿ ಅಂಥ ಭರ್ತಿ ಮಾಡಿಕೊಳ್ಳುವ ದಿನಾಂಕಕ್ಕೆ ಕನಿಷ್ಠ ಮೂರು ವಾರಗಳಿಗೆ ಮೊದಲು ಅಧಿಸೂಚಿಸತಕ್ಕದ್ದು.

3. ಒಬ್ಬ ನಿಯೋಜಕನು, ಆಯ್ಕೆಯ ಫಲಿತಾಂಶವನ್ನು ಆಯ್ಕೆ ಮಾಡಿಕೊಂಡ ದಿನಾಂಕದಿಂದ ಹದಿನೈದು ದಿನಗಳ ಒಳಗೆ ಸಂಬಂಧಪಟ್ಟ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಒದಗಿಸತಕ್ಕದ್ದು.

**40. ವರದಿಗಳನ್ನು ಸಲ್ಲಿಸುವಿಕೆ**

1. ಒಬ್ಬ ನಿಯೋಜಕನು, ಕಾಲಕಾಲಕ್ಕೆ ತಿದ್ದುಪಡಿಯಾಗಬಹುದಾದಂಥ ಡಿಪಿಇಆರ್-1ರ ನಮೂನೆಯಲ್ಲಿ ತ್ರೈಮಾಸಿಕ ವರದಿಗಳನ್ನು ಮತ್ತು ಡಿಪಿಇಆರ್-IIರ ನಮೂನೆಯಲ್ಲಿ ದೈವಾರ್ಷಿಕ ವರದಿಗಳನ್ನು ಸ್ಥಳೀಯ ಉದ್ಯೋಗ ವಿನಿಮಯ ಕೇಂದ್ರಕ್ಕೆ ಸಲ್ಲಿಸತಕ್ಕದ್ದು.

2. ತ್ರೈಮಾಸಿಕ ವರದಿಗಳನ್ನು ಅವುಗಳ ವಾಯಿದೆಯ ದಿನಾಂಕಗಳಾದ ಮಾರ್ಚ್ 31 ಮತ್ತು ಜೂನ್ 30, ಸೆಪ್ಟೆಂಬರ್ 30 ಮತ್ತು ಡಿಸೆಂಬರ್ 31ರ ತರುವಾಯ ಮೂವತ್ತು ದಿವಸಗಳೊಳಗೆ ಸಲ್ಲಿಸತಕ್ಕದ್ದು.

3. ದೈವಾರ್ಷಿಕ ವರದಿಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ವಾಯಿದೆಯ ದಿನಾಂಕದ ಮೂವತ್ತು ದಿನಗಳ ಒಳಗೆ ಸಲ್ಲಿಸತಕ್ಕದ್ದು.

**41. ನಿಯೋಜಕನು ದಾಖಲೆಯನ್ನು ಇಡತಕ್ಕ ನಮೂನೆ**

ನಿಯೋಜಕನು ಕಾಲಕಾಲಕ್ಕೆ ತಿದ್ದುಪಡಿಯಾಗಬಹುದಾದಂತಹ ಡಿಪಿಇಆರ್-III ನಮೂನೆಯಲ್ಲಿ ಅಂಗವಿಕಲ ನೌಕರರ ದಾಖಲೆಯನ್ನು ಇಟ್ಟಿರತಕ್ಕದ್ದು.

## ಅಧ್ಯಾಯ-VI

## ಅಂಗವಿಕಲ ವ್ಯಕ್ತಿಗಳಿಗಾಗಿ ಮುಖ್ಯ ಆಯುಕ್ತರು

**42. ಆಯುಕ್ತರು ಅನುಸರಿಸಬೇಕಾದ ಕಾರ್ಯವಿಧಾನ**

1. ಕೆಳಕಂಡ ವಿವರಗಳನ್ನು ಒಳಗೊಂಡಿರುವ ಫಿರ್ಯಾದನ್ನು ಫಿರ್ಯಾದುದಾರನು ಖುದ್ದಾಗಿ ಅಥವಾ ತನ್ನ ಏಜೆಂಟನ ಮೂಲಕ ಅಂಗವಿಕಲ ವ್ಯಕ್ತಿಗಳ ಮುಖ್ಯ ಆಯುಕ್ತರಿಗೆ ಸಲ್ಲಿಸತಕ್ಕದ್ದು ಅಥವಾ ಮುಖ್ಯ ಆಯುಕ್ತರ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಕಳಿಸತಕ್ಕದ್ದು.

   (ಎ) ಫಿರ್ಯಾದುದಾರನ ಹೆಸರು, ವಿವರ ಮತ್ತು ವಿಳಾಸ.

   (ಬಿ) ಎದುರ ಪಕ್ಷಕಾರರನ್ನು ಅಥವಾ ಸಂದರ್ಭಾನುಸಾರ ಪಕ್ಷಕಾರರನ್ನು ಗೊತ್ತುಪಡಿಸಿಕೊಳ್ಳಲು ಸಾಧ್ಯವಾಗುವಂತೆ ಅವರ ಹೆಸರು, ವಿವರ ಮತ್ತು ವಿಳಾಸ.

   (ಸಿ) ಫಿರ್ಯಾದಿಗೆ ಸಂಬಂಧಿಸಿದ ಸಂಗತಿಗಳು ಮತ್ತು ಅವು ಯಾವಾಗ ಮತ್ತು ಎಲ್ಲಿ ಉದ್ಭವಿಸಿದವು

   (ಡಿ) ಫಿರ್ಯಾದಿನಲ್ಲಿ ಒಳಗೊಂಡ ಆಪಾದನೆಗಳನ್ನು ಸಮರ್ಥಿಸುವ ದಸ್ತಾವೇಜುಗಳು

   (ಇ) ಫಿರ್ಯಾದುದಾರನು ಕ್ಲೇಮು ಮಾಡಿರುವ ಪರಿಹಾರ.

2. ಮುಖ್ಯ ಆಯುಕ್ತರು ಒಂದು ಫಿರ್ಯಾದನ್ನು ಸ್ವೀಕರಿಸಿದ ನಂತರ ಫಿರ್ಯಾದಿನಲ್ಲಿ ತಿಳಿಸಿರುವ ಎದುರು ಪಕ್ಷಕಾರನಿಗೆ, ಪಕ್ಷಕಾರರಿಗೆ ಅಂಥ ಫಿರ್ಯಾದಿನ ಒಂದು ಪ್ರತಿಯನ್ನು ಕಳುಹಿಸಿ ಮೂವತ್ತು ದಿನಗಳ ಒಳಗೆ ಅಥವಾ ಮುಖ್ಯ ಆಯುಕ್ತರು ಅನುಮತಿಸುವಂಥ ಹದಿನೈದು ದಿನಗಳಿಗೆ ಮೀರದ ಅಂಥ ವಿಸ್ತರಿಸಿದ ಅವಧಿಯೊಳಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವರದಿ ನೀಡಬೇಕೆಂದು ನಿರ್ದೇಶಿತಕ್ಕದ್ದು.

3. ವಿಚಾರಣೆಯ ದಿನಾಂಕದಂದು ಅಥವಾ ವಿಚಾರಣೆಯನ್ನು ಮುಂದೂಡಿದ ಇತರ ದಿನಾಂಕದಂದು ಪಕ್ಷಕಾರರು ಅಥವಾ ಅವರ ಏಜೆಂಟರು ಮುಖ್ಯ ಆಯುಕ್ತರ ಮುಂದೆ ಹಾಜರಾಗುವುದು ಕಡ್ಡಾಯವಾಗಿರತಕ್ಕದ್ದು.

4. ಅಂಥ ದಿನಗಳಂದು ಫಿರ್ಯಾದುದಾರನಾಗಲಿ ಅಥವಾ ಆತನ ಏಜೆಂಟಾಗಲಿ ಮುಖ್ಯ ಆಯುಕ್ತರವರ ಮುಂದೆ ಹಾಜರಾಗಲು ತಪ್ಪಿದರೆ, ಆಗ ಮುಖ್ಯ ಆಯುಕ್ತರು ತಮ್ಮ ವಿವೇಚನಾನುಸಾರ ಗೈರುಹಾಜರಿಯ ಕಾರಣದ ಮೇಲೆ ಫಿರ್ಯಾದನ್ನು ವಜಾ ಮಾಡಬಹುದು ಅಥವಾ ಅರ್ಹತೆಗಳ ಮೇಲೆ ತೀರ್ಮಾನಿಸಬಹುದು.

5. ವಿಚಾರಣೆಯ ದಿನಾಂಕದಂದು ಎದುರು ಪಕ್ಷಕಾರನಾಗಲಿ ಅಥವಾ ಅವನ ಏಜೆಂಟನಾಗಲಿ ಹಾಜರಾಗಲು ತಪ್ಪಿದರೆ ಮುಖ್ಯ ಆಯುಕ್ತರು ಎದುರು ಪಕ್ಷಕಾರನ ಹಾಜರಾತಿಗೆ ಸಮನ್ ನೀಡಲು ಅಥವಾ ಒತ್ತಾಯಪಡಿಸಲು ನಿಯಮದ 63ನೇ ಪ್ರಕರಣದ ಮೇರೆಗೆ ತಾನು ಸೂಕ್ತವೆಂದು ಭಾವಿಸುವಂತೆ ಕ್ರಮ ಕೈಕೊಳ್ಳಬಹುದು.

6. ಫಿರ್ಯಾದನ್ನು ಏಕಪಕ್ಷೀಯವಾಗಿ ವಿಲೆಗೊಳಿಸುವುದು ಅವಶ್ಯವೆನಿಸಿದಲ್ಲಿ ಮುಖ್ಯ ಆಯುಕ್ತರು ಹಾಗೆ ಮಾಡಬಹುದು.

7. ಮುಖ್ಯ ಆಯುಕ್ತರು ತಾವು ಸೂಕ್ತವೆಂದು ಭಾವಿಸುವ ನಿಬಂಧನೆಗಳ ಮೇರೆಗೆ ತಮ್ಮ ವ್ಯವಹರಣೆಗಳ ಯಾವುದೇ ಹಂತದಲ್ಲಿ ಫಿರ್ಯಾದಿನ ವಿಚಾರಣೆಯನ್ನು ಮುಂದೂಡಬಹುದು.

8. ಫಿರ್ಯಾದನ್ನು, ಸಾಧ್ಯವಿರುವಷ್ಟು ಮಟ್ಟಿಗೆ ಎದುರು ಪಕ್ಷಕಾರನಿಂದ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ತೀರ್ಮಾನಿಸತಕ್ಕದ್ದು.

**43. ಮುಖ್ಯ ಆಯುಕ್ತರವರ ಸಂಬಳ ಮತ್ತು ಭತ್ಯೆಗಳು**

ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಮುಖ್ಯ ಆಯುಕ್ತರು ಭಾರತ ಸರ್ಕಾರದ ಕಾರ್ಯದರ್ಶಿಯವರಿಗೆ ದೊರೆಯುವ ಸಂಬಳ, ಭತ್ಯೆ ಮತ್ತು ಇತರ ವಿಶೇಷ ಸೌಲಭ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

**44. ಕೇಂದ್ರ ಸರ್ಕಾರಕ್ಕೆ ವರದಿಗಳನ್ನು ಸಲ್ಲಿಸುವಿಕೆ**

ಮುಖ್ಯ ಆಯುಕ್ತರ ನಿಯಮವನ್ನು ಜಾರಿಗೊಳಿಸುವ ಕುರಿತು ವರದಿಯನ್ನು ಒಂದು ಆರ್ಥಿಕ ವರ್ಷದಲ್ಲಿ ಕೊನೆಪಕ್ಷ ಎರಡು ವರದಿಗಳನ್ನು ಸಲ್ಲಿಸುವ ಹಾಗೆ ಆರು ತಿಂಗಳ ಅಂತರದಲ್ಲಿ ಅಂಥ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**45. ವಾರ್ಷಿಕ ವರದಿಯನ್ನು ಸಲ್ಲಿಸುವಿಕೆ**

1. ಮುಖ್ಯ ಆಯುಕ್ತರು ಆರ್ಥಿಕ ವರ್ಷ ಕೊನೆಗೊಂಡ ನಂತರ ಆದಷ್ಟು ಬೇಗನೆ ಅಂದರೆ ಮುಂಬರುವ ವರ್ಷದ ಸೆಪ್ಟೆಂಬರ್ 30ಕ್ಕೆ ಮುಂಚೆ ಸದರಿ ಆರ್ಥಿಕ ವರ್ಷದಲ್ಲಿ ತಾವು ನಿರ್ವಹಿಸಿದ ಪೂರ್ಣ ಕಾರ್ಯಚಟುವಟಿಕೆಗಳನ್ನು ತಿಳಿಸುವ ವಾರ್ಷಿಕ ವರದಿಯನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

2. ನಿರ್ದಿಷ್ಟವಾಗಿ ಉಪ–ನಿಯಮ 1ರಲ್ಲಿ ಉಲ್ಲೇಖಿಸಲಾದ ವಾರ್ಷಿಕ ವರದಿಯು ಈ ಕೆಳಕಂಡ ಪ್ರತಿಯೊಂದು ವಿಷಯದ ಬಗ್ಗೆ ಮಾಹಿತಿಯನ್ನು ಒಳಗೊಂಡಿರತಕ್ಕದ್ದು ಎಂದರೆ

   (ಎ) ಮಂಡಲಿಯ ಅಧಿಕಾರಿಗಳ, ಸಿಬ್ಬಂದಿ ವರ್ಗದವರ ಹೆಸರು ಮತ್ತು ಸಂಘಟನಾ ವ್ಯವಸ್ಥೆಯನ್ನು ತೋರಿಸುವ ಚಾರ್ಟ್

   (ಬಿ) ಅಧಿನಿಯಮದ 48 ಮತ್ತು 49ನೇ ಪ್ರಕರಣಗಳ ಮೇರೆಗೆ ಮುಖ್ಯ ಆಯುಕ್ತರವರು ಅಧಿಕಾರ ಹೊಂದಿರುವಂಥ ಪ್ರಕಾರ್ಯಗಳು ಮತ್ತು ಈ ಸಂಬಂಧದಲ್ಲಿನ ಕಾರ್ಯಸಾಧನೆಯ ಮುಖ್ಯಾಂಶಗಳು

   (ಸಿ) ಮುಖ್ಯ ಆಯುಕ್ತರವರು ಮಾಡಿರುವ ಪ್ರಮುಖ ಶಿಫಾರಸ್ಸುಗಳು

   (ಡಿ) ಅಧಿನಿಯಮವನ್ನು ರಾಜ್ಯವಾರಾಗಿ ಜಾರಿಗೊಳಿಸುವಿಕೆಯಲ್ಲಿ ಉಂಟಾದ ಪ್ರಗತಿ

   (ಇ) ಮುಖ್ಯ ಆಯುಕ್ತರು ಸೇರ್ಪಡೆ ಮಾಡುವುದು ಸೂಕ್ತವೆಂದು ಭಾವಿಸುವಂಥ ಅಥವಾ ಕಾಲಕಾಲಕ್ಕೆ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸುವಂಥ ಯಾವುದೇ ಇತರ ವಿಷಯ.

(ಎ) ತ್ರೈಮಾಸಿಕ ಅವಧಿಯಲ್ಲಿ ಉಂಟಾದ ಮತ್ತು ಅಧಿಸೂಚಿಸಿದ ಖಾಲಿ ಹುದ್ದೆಗಳ ಸಂಖ್ಯೆ ಮತ್ತು ತ್ರೈಮಾಸಿಕ ಅವಧಿಯಲ್ಲಿ ತುಂಬಲಾದ ಹುದ್ದೆಗಳ ಸಂಖ್ಯೆ (ಅಂಗವಿಕಲ ಪುರುಷರ ಮತ್ತು ಅಂಗವಿಕಲ ಮಹಿಳೆಯರಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅಂಕಿಗಳನ್ನು ನೀಡಬೇಕು)

| ಈ ನಿಯಮದ ವ್ಯಾಪ್ತಿಯೊಳಗೆ ಬರುವ ಖಾಲಿ ಹುದ್ದೆಗಳ ಸಂಖ್ಯೆ | | | | |
|---|---|---|---|---|
| ಉಂಟಾದ ಖಾಲಿ ಹುದ್ದೆಗಳು | ಅಧಿಸೂಚಿಸಿದವು | ತುಂಬಲಾದವು | ತುಂಬಿಕೊಂಡ ಮೂಲ | (ಯಾವ ಮೂಲದಿಂದ ತುಂಬಲಾಯಿತು ಎಂಬುದನ್ನು ವಿವರಿಸಿ. |
| | ಸ್ಥಳೀಯ ವಿಶೇಷ ಉದ್ಯೋಗ ವಿನಿಮಯ ಕೇಂದ್ರ. | ಸಾಮಾನ್ಯ ಉದ್ಯೋಗ ವಿನಿಮಯ ಕೇಂದ್ರ | | |
| 1 | 2 | 3 | 4 | 5 |

(ಬಿ) ವರದಿಯಲ್ಲಿನ ತ್ರೈಮಾಸಿಕ ಅವಧಿಯಲ್ಲಿ ಉಂಟಾದ ಎಲ್ಲಾ ಖಾಲಿ ಹುದ್ದೆಗಳನ್ನು ಅಧಿಸೂಚಿಸಿದಿರುವುದಕ್ಕೆ ಕಾರಣಗಳು ಮೇಲಿನ 2ಎ ನೋಡಿ................................

3. ಮಾನವ ಸಂಪನ್ಮೂಲ ಕೊರತೆ

ಸೂಕ್ತ ಅಭ್ಯರ್ಥಿಗಳ ಕೊರತೆಯಿಂದಾಗಿ ತುಂಬಿರದ ಖಾಲಿ ಸ್ಥಾನಗಳು ಹುದ್ದೆಗಳು

| ವೃತ್ತಿಯ ಹೆಸರು ಅಥವಾ ಹುದ್ದೆಯ ಪದನಾಮ | ತುಂಬಿಲ್ಲದ ಖಾಲಿಸ್ಥಾನ ಹುದ್ದೆಗಳ ಸಂಖ್ಯೆ ಅಂಗವಿಕಲರಿಗಾಗಿ | | |
|---|---|---|---|
| | ಅಗತ್ಯವಿರುವ ವಿದ್ಯಾರ್ಹತೆ | ಅಗತ್ಯವಿರುವ ಅನುಭವ | ಅನುಭವದ ಅವಶ್ಯಕತೆಯಿಲ್ಲದ್ದು |
| 1 | 2 | 3 | 4 |

ಈ ಕಾರ್ಯ ಸಂಸ್ಥೆಯ ಯಾವ ವೃತ್ತಿಗಳಿಗೆ ಸಂಬಂಧಪಟ್ಟಂತೆ ಸೂಕ್ತ ಅಭ್ಯರ್ಥಿಗಳನ್ನು ಪಡೆಯುವಲ್ಲಿ ತೊಂದರೆಯನ್ನು ಹೊಂದಿದೆಯೋ ಅಂಥ ಯಾವುದೇ ಇತರ ವೃತ್ತಿಗಳನ್ನು ದಯವಿಟ್ಟು ಪಟ್ಟಿ ಮಾಡಿ.

ನಿಯೋಜಕನ ಸಹಿ

ಉದ್ಯೋಗ ವಿನಿಮಯ ಕೇಂದ್ರ

.............................................

.............................................

ಇವರಿಗೆ,

ಸೂಚನೆ :– ಈ ವರದಿಯು ಮಾರ್ಚ್ 31, ಜೂನ್ 30, ಸೆಪ್ಟೆಂಬರ್ 30 ಮತ್ತು ಡಿಸಂಬರ್ 31ಕ್ಕೆ ಅಂತ್ಯವಾಗುವ ತ್ರೈಮಾಸಿಕ ಅವಧಿಗೆ ಸಂಬಂಧಿಸಿದ್ದಾಗಿದೆ ಮತ್ತು ಸಂಬಂಧಪಟ್ಟ ತ್ರೈಮಾಸಿಕ ಅವಧಿ ಕೊನೆಗೊಂಡ ನಂತರ ಮೂವತ್ತು ದಿನಗಳ ಒಳಗೆ ಸ್ಥಳೀಯ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಸಲ್ಲಿಸತಕ್ಕದ್ದು.

# ನಮೂನೆ ಡಿ ಪಿ ಇ ಆರ್ – II

(40ನೇ ನಿಯಮ ನೋಡಿ)

ಸ್ಥಳೀಯ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಎರಡು ವರ್ಷಗಳಿಗೆ ಒಮ್ಮೆ ಸಲ್ಲಿಸತಕ್ಕ ವೃತ್ತಿಗಳಿಗೆ ಸಂಬಂಧಿಸಿದ ವರದಿ.

ನಿಯೋಜಕನ ಹೆಸರು ಮತ್ತು ವಿಳಾಸ .............................................

ವ್ಯವಹಾರದ ಸ್ವರೂಪ .............................................

(ಕಾರ್ಯ ಸಂಸ್ಥೆಯು ತನ್ನ ಪ್ರಧಾನ ಕಾರ್ಯಚಟುವಟಿಕೆಯಾಗಿ ಏನನ್ನು ಮಾಡುತ್ತಿದೆಯೋ ಅಥವಾ ನಿರ್ವಹಿಸುತ್ತಿದೆಯೋ ಅದನ್ನು ವಿವರಿಸಿ)

1. ............................ ರಂದು (ದಿನಾಂಕ ಸ್ಪಷ್ಟವಾಗಿ ತಿಳಿಸಿ ಕಾರ್ಯ ಸಂಸ್ಥೆಯಲ್ಲಿ ವೇತನ ಪಟ್ಟಿಯಲ್ಲಿ ಇರುವ ಜನರ ಒಟ್ಟು ಸಂಖ್ಯೆ) ಕಾರ್ಯ ಸಂಸ್ಥೆಯಿಂದ ಮಜೂರಿ ಅಥವಾ ವೇತನ ಮತ್ತು ಅಂಗವಿಕಲ ಮಹಿಳೆಯರಿಗೆ ಪ್ರತ್ಯೇಕ ಅಂಕಿಯನ್ನು ನೀಡಬೇಕು.)

2. ಮೇಲೆ ತಿಳಿಸಿದ ಐಟಂ ನಂ.1ರಲ್ಲಿ ತಿಳಿಸಿರುವಂಥ ಎಲ್ಲ ನೌಕರರ ವೃತ್ತಿಯ ವರ್ಗೀಕರಣ ಪ್ರತಿಯೊಂದು ವೃತ್ತಿಯಲ್ಲಿನ ನೌಕರರ ಸಂಖ್ಯೆಯನ್ನು ಪ್ರತ್ಯೇಕವಾಗಿ ಈ ಕೆಳಗೆ ದಯವಿಟ್ಟು ನೀಡಿ);

| ವೃತ್ತಿ | ನೌಕರರ ಸಂಖ್ಯೆ | | |
|---|---|---|---|
| ಸರಿಯಾದ ಪದ ಬಳಸಿ | ಅಂಗವಿಕಲ ಪುರುಷರು | ಅಂಗವಿಕಲ ಮಹಿಳೆಯರು | ಒಟ್ಟು |
| ಎಂದರೆ ಇಂಜನಿಯರು (ಮೆಕಾನಿಕಲ್) ಟೀಚರ್ (ಡೂಮ್ಯಾಸ್ಟಿಕ್/ವಿಜ್ಞಾನ) ಕರ್ತವ್ಯದ ಮೇಲಿರುವ ಅಧಿಕಾರಿ (ವಿಮಾಗಣಕ) ಸಹಾಯಕ ನಿರ್ದೇಶಕರು (ಲೋಹ ಶಾಸ್ತ್ರಜ್ಞ) | ದೈಹಿಕ ದೃಷ್ಟಿ ದೋಷ ಶ್ರವಣ ದೋಷ | ದೈಹಿಕ ದೃಷ್ಟಿ ದೋಷ ಶ್ರವಣ ದೋಷ | ಪ್ರತಿಯೊಂದು ವೃತ್ತಿಯಲ್ಲಿನ ಅದಷ್ಟು ಮಟ್ಟಿಗೆ ವೃತ್ತಿಗಳ ಅಂದಾಜು ಸಂಖ್ಯೆ ತಿಳಿಸಬೇಕು. ನಿವೃತ್ತಿಯಿಂದಾಗಿ ಮುಂದಿನ ಕ್ಯಾಲೆಂಡರ್ ವರ್ಷದಲ್ಲಿ ನೀವು ಭರ್ತಿ ಮಾಡಿಕೊಳ್ಳಬೇಕಾದಂಥ ಪ್ರತಿ ವೃತ್ತಿಯಲ್ಲಿನ ಖಾಲಿ ಸ್ಥಾನಗಳ ಅಂದಾಜು ಸಂಖ್ಯೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ದಯವಿಟ್ಟು ತಿಳಿಸಿ |

| | |
|---|---|
| ವೈಜ್ಞಾನಿಕ ಸಹಾಯಕ (ಕೆಮಿಸ್ಟ್)<br>ಸಂಶೋಧನಾಧಿಕಾರಿ (ಎಕನಾಮಿಸ್ಟ್)<br>ಭೋಧಕ (ಬಡಗಿ) ಸೂಪರ್‌ವೈಸರ್<br>(ದರ್ಜಿ) ಫಿಟ್ಟರ್ (ಇಂಟರ್ನಲ್<br>ಕಂಬಷ್ಚೆನ್ ಇಂಜಿನ್) ಇನ್ಸ್‌ಪೆಕ್ಟರ್<br>(ನೈರ್ಮಲ್ಯ) ಸೂಪರಿಂಟೆಂಡೆಂಟ್ (ಕಛೇರಿ)<br>ಅಪ್ರೆಂಟಿಸ್ (ಎಲೆಕ್ಟ್ರೀಷಿಯನ್) | ಕ್ಯಾಲೆಂಡರ್ ವರ್ಷದಲ್ಲಿ ನೇರ ಭರ್ತಿ ಮಾಡಬೇಕಾಗಿ ಬರಬಹುದು |
| ಒಟ್ಟು | |

ದಿನಾಂಕ : ನಿಯೋಜಕನ ಸಹಿ.

ಉದ್ಯೋಗ ವಿನಿಮಯ ಕೇಂದ್ರ,

.......................................................

.......................................................

ಇವರಿಗೆ,

(ದಯವಿಟ್ಟು ಇಲ್ಲಿ ನಿಮ್ಮ ಸ್ಥಳೀಯ ವಿಶೇಷ ಉದ್ಯೋಗ ವಿನಿಮಯ ಕಛೇರಿಯ ಹೆಸರನ್ನು ತುಂಬಿರಿ)

**ಸೂಚನೆ :-** ಬಾಬ್ತು 2ರ ಅಡಿಯಲ್ಲಿನ 8ನೇ ಕಾಲಂನ ಒಟ್ಟು ಸಂಖ್ಯೆಯ ಬಾಬ್ತು 10ರ ಮುಂದೆ ಕೊಡಲಾದ ಸಂಖ್ಯೆಗಳಿಗೆ ಸಂವಾದಿಯಾಗಿರಬೇಕು.

# ನಮೂನೆ ಡಿ ಪಿ ಇ ಆರ್ – 3

(41ನೇ ನಿಯಮ ನೋಡಿ)

1. ನಿಯೋಜಕನ ಹೆಸರು ಮತ್ತು ವಿಳಾಸ .......................................................

2. ಕೇಂದ್ರ ಕಛೇರಿಯೇ .......................................................

   ಶಾಖಾ ಕಛೇರಿಯೇ .......................................................

3. ವ್ಯವಹಾರದ ಮುಖ್ಯರ ಚಟುವಟಿಕೆಯ ಸ್ವರೂಪ .......................................................

4. ಕಾರ್ಯ ಸಂಸ್ಥೆಯ ವೇತನ ಪಟ್ಟಿಯಲ್ಲಿ ಒಟ್ಟು ಜನರ ಸಂಖ್ಯೆ (ಇದರಲ್ಲಿ ಕಾರ್ಯಸಂಸ್ಥೆಯಿಂದ ಮಜೂರಿ ಅಥವಾ ವೇತನವನ್ನು ಪಡೆಯುವಂಥ ಪ್ರತಿಯೊಬ್ಬ ವ್ಯಕ್ತಿಯ ಸಂಖ್ಯೆ ಒಳಗೊಂಡಿರತಕ್ಕದ್ದು.

5. ಕಾರ್ಯ ಸಂಸ್ಥೆಯ ವೇತನ ಪಟ್ಟಿಯಲ್ಲಿ ಒಟ್ಟು ಅಂಗವಿಕಲ ವ್ಯಕ್ತಿಗಳು (ಅಂಗವಿಕಲತೆವಾರು) (ಕಾರ್ಯಸಂಸ್ಥೆಯಿಂದ ಮಜೂರಿ ಅಥವಾ ವೇತನವನ್ನು ಪಡೆಯುವಂಥ ಪ್ರತಿಯೊಬ್ಬ ವ್ಯಕ್ತಿಯ ಸಂಖ್ಯೆ ಒಳಗೊಂಡಿರತಕ್ಕದ್ದು.

6. (ಎ) ಮೇಲೆ ಐಟಂ 5ರಲ್ಲಿ ತಿಳಿಸಿರುವಂತೆ ಎಲ್ಲಾ ನೌಕರರ ವೃತ್ತಿ ಸಂಬಂಧದ ಅರ್ಹತೆ (ಪ್ರತಿಯೊಂದು ವೃತ್ತಿಯಲ್ಲಿರುವ ನೌಕರರ ಸಂಖ್ಯೆಯನ್ನು ಪ್ರತ್ಯೇಕವಾಗಿ ಕೆಳಗೆ ತಿಳಿಸಬೇಕು).

| ವೃತ್ತಿ | ನೌಕರರ ಸಂಖ್ಯೆ | | | | | | | ಒಟ್ಟು |
|---|---|---|---|---|---|---|---|---|
| | ಅಂಗವಿಕಲ ಪುರುಷರು | | | ಅಂಗವಿಕಲ ಮಹಿಳೆಯರು | | | ಅಂಗವಿಕಲತೆಯ ಸ್ವರೂಪ ಶ್ರಮ ಮತ್ತು ವ್ಯಾಪ್ತಿ | |
| ಸರಿಯಾದ ಪದ ಬಳಸಿ ಎಂದರೆ ಇಂಜಿನಿಯರು (ಮೆಕಾನಿಕಲ್) ಟೀಚರ್ (ಡೊಮ್ಮೆಸ್ಟಿಕ್/ವಿಜ್ಞಾನ) ಕರ್ತವ್ಯದ ಮೇಲಿರುವ ಅಧಿಕಾರಿ (ಪ್ರಮಾಣಕ) ಸಹಾಯಕ ನಿರ್ದೇಶಕರು (ಲೋಹ ಶಾಸ್ತ್ರಜ್ಞ) ವೈಜ್ಞಾನಿಕ ಸಹಾಯಕ (ಕೆಮಿಸ್ಟ್) ಸಂಶೋಧನಾಧಿಕಾರಿ (ಎಕನಾಮಿಸ್ಟ್) ಬೋಧಕ (ಬಡಗಿ) ಸೂಪರ್‌ವೈಸರ್ (ದರ್ಜಿ) ಫಿಟ್ಟರ್ (ಇಂಟರ್ನಲ್ ಕಂಬಷ್ಟನ್ ಇಂಜಿನ್) ಇನ್ಸ್‌ಪೆಕ್ಟರ್ | ದೈಹಿಕ | ದೃಷ್ಟಿ ದೋಷ | ಶ್ರವಣ ದೋಷ | ದೈಹಿಕ | ದೃಷ್ಟಿ ದೋಷ | ಶ್ರವಣ ದೋಷ | | |
| 1 | 2 | 3 | 4 | 5 | 6 | 7 | | 8 |
| ಒಟ್ಟು | | | | | | | | |

(ಬಿ) ತ್ರೈಮಾಸಿಕ ಅವಧಿಯಲ್ಲಿ ಉದ್ಯೋಗದಲ್ಲಿ ಹೆಚ್ಚಳ ಅಥವಾ ಇಳಿಕೆಯು ಶೇಕಡಾ. ಕ್ಕಿಂತ ಹೆಚ್ಚಾಗಿದ್ದರೆ ಅಂಥ ಯಾವುದೇ ಹೆಚ್ಚಳ ಅಥವಾ ಇಳಿಕೆಯ ಮುಖ್ಯ ಕಾರಣಗಳನ್ನು ದಯೆವಿಟ್ಟು ತಿಳಿಸಿ.

7. ಖಾಲಿ ಹುದ್ದೆಗಳು :– ಚಾಲ್ತಿಯಲ್ಲಿರುವ ಕನಿಷ್ಟ ಮಜೂರಿಯಂತೆ ಪ್ರತಿ ತಿಂಗಳು ಮತ್ತು ಮೂರು ತಿಂಗಳ ಅವಧಿಯ ಒಟ್ಟು ಉಪಲಬ್ಧಗಳನ್ನು ಹೊಂದಿರುವ ಖಾಲಿ ಹುದ್ದೆಗಳು.

(ಎ) ತ್ರೈಮಾಸಿಕ ಅವಧಿಯಲ್ಲಿ ಉಂಟಾಗಿರುವ ಮತ್ತು ಅಧಿಸೂಚಿಸಲಾದ ಖಾಲಿ ಹುದ್ದೆಗಳ ಸಂಖ್ಯೆ ಮತ್ತು ತ್ರೈಮಾಸಿಕ ಅವಧಿಯಲ್ಲಿ ತುಂಬಲಾದ ಹುದ್ದೆಗಳ ಸಂಖ್ಯೆ.

ಈ ನಿಯಮದ ವ್ಯಾಪ್ತಿಯೊಳಗೆ ಬರುವ ಖಾಲಿ ಹುದ್ದೆಗಳ ಸಂಖ್ಯೆ

| ಉಂಟಾದ ಖಾಲಿ ಹುದ್ದೆ | ಅಧಿಸೂಚಿಸಿದವು | | ತುಂಬಲಾದವು | ತುಂಬಿಕೊಂಡ ಮೂಲ (ಯಾವ ಮೂಲದಿಂದ) ತುಂಬಲಾಯಿತೆಂದು ವಿವರಿಸಿ |
|---|---|---|---|---|
| | ಸ್ಥಳೀಯ ವಿಶೇಷ ಉದ್ಯೋಗ ವಿನಿಮಯ | ಸಾಮಾನ್ಯ ಉದ್ಯೋಗ ವಿನಿಮಯ ಕೇಂದ್ರ | | |
| 1 | 2 | 3 | 4 | 5 |
| ಒಟ್ಟು | | | | |

ಬಿ. ವರದಿಯಲ್ಲಿ ತ್ರೈಮಾಸಿಕ ಅವಧಿಯಲ್ಲಿ ಉಂಟಾದ ಎಲ್ಲ ಖಾಲಿ ಹುದ್ದೆಗಳನ್ನು ಅಧಿಸೂಚಿಸದಿರುವುದಕ್ಕೆ ಕಾರಣಗಳು ಎ ೨ ನೋಡಿ.

3. ಮಾನವ ಸಂಪನ್ಮೂಲ ಶಕ್ತಿಯ ಕೊರತೆ

ಸೂಕ್ತ ಅಭ್ಯರ್ಥಿಗಳ ಕೊರತೆಯಿಂದಾಗಿ ತುಂಬದಿರುವ ಖಾಲಿ ಸ್ಥಾನ ಹುದ್ದೆಗಳನ್ನು

| ವ್ಯಕ್ತಿಯ ಹೆಸರು ಅಥವಾ ಹುದ್ದೆಯ ಪದನಾಮ | ತುಂಬಿಲ್ಲದ ಖಾಲಿಸ್ಥಾನ ಹುದ್ದೆಗಳ ಸಂಖ್ಯೆ ಅಂಗವಿಕಲರಿಗಾಗಿ | | |
|---|---|---|---|
| | ಅಗತ್ಯವಿರುವ ವಿದ್ಯಾರ್ಹತೆ | ಅಗತ್ಯವಿರುವ ಅನುಭವ | ಅನುಭವದ ಅವಶ್ಯಕತೆಯಿಲ್ಲದ್ದು |
| 1 | 2 | 3 | 4 |

ಈ ಕಾರ್ಯ ಸಂಸ್ಥೆಗೆ ಯಾವ ವೃತ್ತಿಗಳಿಗೆ ಸಂಬಂಧಪಟ್ಟಂತೆ ಸೂಕ್ತ ಅಭ್ಯರ್ಥಿಗಳನ್ನು ಪಡೆಯುವಲ್ಲಿ ತೊಂದರೆ ಇದೆಯೋ ಅಂಥ ಇತರ ವೃತ್ತಿಗಳನ್ನು ದಯವಿಟ್ಟು ಪಟ್ಟಿ ಮಾಡಿ.

ನಿಯೋಜಕನ ಸಹಿ.

(ಎಫ್ ಸಂಖ್ಯೆ ೧೬-೭/೯೭ ಎನ್.ಐ.ಟಿ)

ಗೌರಿ ಚಟರ್ಜಿ

ಜಂಟಿ ಕಾರ್ಯದರ್ಶಿ

# ಅಧಿನಿಯಮದ ಪಕ್ಷಿ ನೋಟ

## ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ ಅಧಿನಿಯಮ ೯೫

ಕಲಮು 2 : ಕಾನೂನು ಮುಸೂದೆಯಲ್ಲಿ ಉಪಯೋಗಿಸಲ್ಪಡುವಂತಹ ಹಲವು ಶಬ್ದ ಪ್ರಯೋಗಗಳಿಗೆ, ಅಂದರೆ ಸಮುಚಿತ ಸರ್ಕಾರ, ಕೇಂದ್ರ ಸಮನ್ವಯ ಸಮಿತಿ, ಕೇಂದ್ರ ಕಾರ್ಯನಿರ್ವಾಹಕ ಸಮಿತಿ, ವಿಶೇಷ ಉದ್ಯೋಗ ವಿನಿಮಯ ಕೇಂದ್ರ, ರಾಜ್ಯ ಸಮನ್ವಯ ಸಮಿತಿ ಇತ್ಯಾದಿಗಳಿಗೆ ವ್ಯಾಖ್ಯಾನಗಳನ್ನು ಕೊಡುವ ಅವಕಾಶವನ್ನು ಕಲ್ಪಿಸುತ್ತದೆ.

ಕಲಮು 3 : ಕೇಂದ್ರ ಸಮನ್ವಯ ಸಮಿತಿ ಸ್ಥಾಪನೆಯ ವಿವರಣೆ

ಕಲಮು 4 : ಸಮಿತಿಯ ಸದಸ್ಯರ ಕಾಲ ಹಾಗು ಸೇವೆಯ ನಿಬಂಧನೆಗಳ ವಿವರಣೆ

ಕಲಮು 5 : ಸದಸ್ಯರ, ಸಮಿತಿಯ ಸದಸ್ಯತ್ವಕ್ಕೆ ಅನರ್ಹರಾಗುವ ಬಗೆಗಿನ ವಿವರಣೆ

ಕಲಮು 6 : ಸದಸ್ಯರ ಅನರ್ಹತೆಯ ಪರಿಣಾಮ

ಕಲಮು 7 : ಕೇಂದ್ರ ಸಮನ್ವಯ ಸಮಿತಿಯ ಕಾರ್ಯವಿಧಾನ ಇತ್ಯಾದಿ

ಕಲಮು 8 : ಕೇಂದ್ರ ಸಮನ್ವಯ ಸಮಿತಿ ರಾಷ್ಟ್ರೀಯ ಮಟ್ಟದಲ್ಲಿ ಅಂಗವಿಕಲರ ಸಮಸ್ಯೆ ಮತ್ತು ಪರಿಹಾರಗಳಿಗೆ ವ್ಯಾಪಕವಾದ ನೀತಿಯನ್ನು ರಚಿಸಲು ಇರುವ ಅವಕಾಶಗಳ ವಿವರಣೆ

ಕಲಮು 9 : ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಸ್ಥಾಪನೆಯ ವಿವರಣೆ

ಕಲಮು 10 : ಕೇಂದ್ರ ಕಾರ್ಯನಿರ್ವಾಹಕ ಸಮಿತಿಗೆ ಕೇಂದ್ರ ಸಮನ್ವಯ ಸಮಿತಿಯ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯ ಕಲ್ಪನೆ

ಕಲಮು 11 : ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಕಾರ್ಯ ವಿಧಾನವನ್ನು ಕಲ್ಪಿಸುತ್ತದೆ.

ಕಲಮು 12 : ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು ತನ್ನ ಕಾರ್ಯನಿರ್ವಹಣೆಗಾಗಿ ವ್ಯಕ್ತಿಗಳನ್ನು ಸಂಯೋಜಿಸಲು ಅವಕಾಶ ಕಲ್ಪಿಸುತ್ತದೆ.

ಕಲಮು 13 : ರಾಜ್ಯ ಸಮನ್ವಯ ಸಮಿತಿಯ ಸ್ಥಾಪನೆಗೆ ಅವಕಾಶ ಕಲ್ಪಿಸುತ್ತದೆ.

ಕಲಮು 14 : ರಾಜ್ಯಸಮನ್ವಯ ಸಮಿತಿಯು ಸದಸ್ಯರ ಕಾಲ ಮತ್ತು ಸೇವೆಯ ನಿಬಂಧನೆಗಳನ್ನು ಒಳಗೊಂಡಿರುತ್ತದೆ.

ಕಲಮು 15 : ರಾಜ್ಯ ಸಮನ್ವಯ ಸಮಿತಿಯ ಸದಸ್ಯರ ಅನರ್ಹತೆಯ ವಿವರಣೆ

ಕಲಮು 16 : ರಾಜ್ಯ ಸಮನ್ವಯ ಸಮಿತಿಯ ಸದಸ್ಯರ ಅನರ್ಹತೆಯ ಪರಿಣಾಮವನ್ನು ವಿವರಿಸುತ್ತದೆ.

ಕಲಮು 17 : ರಾಜ್ಯ ಸಮನ್ವಯ ಸಮಿತಿ ಸಭೆಗಳ ಕಾರ್ಯ ವಿಧಾನ

ಕಲಮು 18 : ರಾಜ್ಯ ಸಮನ್ವಯ ಸಮಿತಿ ಅಂಗವಿಕಲಾಂಗ ವ್ಯಕ್ತಿಗಳ ರಾಜ್ಯದ ಕೇಂದ್ರ ಬಿಂದುವಾಗಿ ಕಾರ್ಯನಿರ್ವಹಿಸಲು ಮತ್ತು ಅನುಕೂಲಗಳನ್ನು ಮಾಡಿಕೊಡುವ ಅಥವಾ ತೊಂದರೆಯನ್ನು ನಿವಾರಿಸುವ ನೀತಿಯನ್ನು ರಚಿಸುವ ಅವಕಾಶ.

ಕಲಮು 19 : ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಸ್ಥಾಪನೆಯ ವಿಧಾನಗಳನ್ನು ಕಲ್ಪಿಸುತ್ತದೆ.

ಕಲಮು 20 : ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ರಾಜ್ಯ ಸಮನ್ವಯ ಸಮಿತಿಯ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿಯನ್ನು ಕಲ್ಪಿಸುತ್ತದೆ.

ಕಲಮು 21 : ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಸಭೆಗಳಿಗೆ ಕಾರ್ಯವಿಧಾನವನ್ನು ಕಲ್ಪಿಸುತ್ತದೆ.

ಕಲಮು 22 : ರಾಜ್ಯ ಕಾರ್ಯನಿರ್ವಾಹಕ ಸಮಿತಿ ತನ್ನ ಕಾರ್ಯನಿರ್ವಹಣೆಗಾಗಿ ವ್ಯಕ್ತಿಗಳನ್ನು ಸಂಯೋಜಿಸಲು ಅವಕಾಶ ಕಲ್ಪಿಸುತ್ತದೆ.

ಕಲಮು 23 : ಕೇಂದ್ರ ಸಮನ್ವಯ ಸಮಿತಿಗೆ ಕೇಂದ್ರ ಸರ್ಕಾರವು ಆದೇಶ ನೀಡಲು ಅಧಿಕಾರ ಕೊಡುತ್ತದೆ. ಹಾಗೂ ರಾಜ್ಯ ಸರ್ಕಾರವು ರಾಜ್ಯ ಸಮನ್ವಯ ಸಮಿತಿಗೆ ಆದೇಶಿಸಲು ಅಧಿಕಾರ ಕೊಡುತ್ತದೆ.

ಕಲಮು 24 : ಕೇಂದ್ರ ಸಮನ್ವಯ ಸಮಿತಿ, ಕೇಂದ್ರ ಕಾರ್ಯನಿರ್ವಾಹಕ ಸಮಿತಿ, ರಾಜ್ಯ ಸಮನ್ವಯ ಸಮಿತಿ, ಅಥವಾ ರಾಜ್ಯ ಕಾರ್ಯನಿರ್ವಾಹಕ ಸಮಿತಿಯಲ್ಲಿ ಖಾಲಿ ಇರುವ ಸ್ಥಾನಗಳಿಂದ ಸಭಾ ಕಾರ್ಯಗಳನ್ನು ರದ್ದಾಗದಂತೆ ಅನುವು ಮಾಡಿಕೊಡುತ್ತದೆ.

ಕಲಮು 25 : ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು, ಅಂಗವಿಕಲತೆಯ ತಡೆಗಟ್ಟುವಿಕೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡುತ್ತದೆ..

ಕಲಮು 26 : ಅಂಗವಿಕಲ ವ್ಯಕ್ತಿಗಳಿಗೆ ಸಮುಚಿತ ಸರ್ಕಾರ ಹಾಗೂ ಸ್ಥಳೀಯ ಪ್ರಾಧಿಕಾರಗಳಿಂದ ೧೮ (ಹದಿನೆಂಟು) ವರುಷ ತುಂಬುವವರೆಗೂ ಉಚಿತ ಶಿಕ್ಷಣದ ಭರವಸೆ ಕೊಡಲು ಅನುವು ಮಾಡಿಕೊಡುತ್ತದೆ.

ಕಲಮು 27 : ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಕಾರ್ಯಕಾರಿ ಹಾಗೂ ಔಪಚಾರಿಕವಲ್ಲದ ಶಿಕ್ಷಣವನ್ನು ಒದಗಿಸಲು, ವಿಧಾನ ಹಾಗೂ ಕಾರ್ಯಕ್ರಮಗಳನ್ನು ರೂಪಿಸಲು ಅಧಿಕಾರ ಕೊಡುತ್ತದೆ.

ಕಲಮು 28 : ಅಂಗವಿಕಲ ಮಕ್ಕಳ ಪಾಠೋಪಕರಣಗಳ ತಂತ್ರಜ್ಞಾನಗಳನ್ನು ಮತ್ತು ಕಲಿಕೆಯ ಮಾರ್ಗದರ್ಶನದ ಸಂಶೋಧನೆಗೆ ಸರ್ಕಾರದಿಂದ ಅಥವಾ ಅಧಿಕಾರೇತರ ಸಂಸ್ಥೆಗಳ ಮೂಲಕ ವೃದ್ಧಿಗೊಳಿಸಲು ಅವಕಾಶ ಕಲ್ಪಿಸುತ್ತದೆ.

ಕಲಮು 29 : ಅಂಗವಿಕಲ ವ್ಯಕ್ತಿಗಳಿಗೆ ಬೋಧಿಸಲು ಶಿಕ್ಷಕರಿಗೆ ವಿಶೇಷ ತರಬೇತಿ ನೀಡಲು ಶಿಕ್ಷಕರ ತರಬೇತಿ ಕೇಂದ್ರಗಳನ್ನು ಸ್ಥಾಪಿಸುವ ಅಧಿಕಾರ ಸಮುಚಿತ ಸರ್ಕಾರಗಳಿಗೆ ಕೊಡುತ್ತದೆ.

ಕಲಮು 30 : ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಶೈಕ್ಷಣಿಕ ವ್ಯವಸ್ಥೆಯಲ್ಲಿ ಅಂಗವಿಕಲ ಮಕ್ಕಳಿಗಾಗಿ ಸಾರಿಗೆ ಸೌಲಭ್ಯ, ಪುಸ್ತಕ ಹಾಗೂ ಸಮವಸ್ತ್ರಗಳನ್ನು ಸರಬರಾಜು ಮಾಡಲು ಪೂರ್ವಸಿದ್ಧತೆಗೆ ಅನುವು ಮಾಡಿಕೊಡುತ್ತದೆ. ಹಾಗೂ ಅಂಥ ಮಕ್ಕಳಿಗಾಗಿ ವಿಶೇಷ ಪರೀಕ್ಷೆಗಳಲ್ಲಿ ಸೂಕ್ತ ಮಾರ್ಪಾಡು ಮಾಡಲು ಅವಕಾಶ ಕಲ್ಪಿಸುತ್ತದೆ.

ಕಲಮು 31 : ಎಲ್ಲ ಶೈಕ್ಷಣಿಕ ಸಂಸ್ಥೆಗಳ ಅಂಥ ವಿದ್ಯಾರ್ಥಿಗಳಿಗಾಗಿ ಸೌಲಭ್ಯಗಳನ್ನು ಕಲ್ಪಿಸುವುದಕ್ಕೆ ಪ್ರೇರೇಪಿಸುತ್ತದೆ.

ಕಲಮು 32 : ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಮೀಸಲಾಗಿಡುವಂತಹ ಉದ್ಯೋಗಗಳನ್ನು ಗುರುತಿಸುವುದಕ್ಕೆ ಅನುವು ಮಾಡಿಕೊಡುತ್ತದೆ.

ಕಲಮು 33 : ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಶೇಕಡ ೩ ರಷ್ಟು ಉದ್ಯೋಗಗಳ ಅವಕಾಶವನ್ನು ಮೀಸಲಾಗಿಡಲು ಅನುವು ಮಾಡಿಕೊಡುತ್ತದೆ.

ಕಲಮು 34 : ಸಮುಚಿತ ಸರ್ಕಾರಗಳು ಸಾರ್ವಜನಿಕ ಸಂಸ್ಥೆಗಳಲ್ಲಿ ಅಂಗವಿಕಲ ವ್ಯಕ್ತಿಯ ಉದ್ಯೋಗದ ನೇಮಕಾತಿಗಾಗಿ ಒದಗಿಸುವ ಬಗ್ಗೆ ಮಾಹಿತಿ ನೀಡುತ್ತದೆ.

ಕಲಮು 35 : ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಯಾವುದೇ ವ್ಯಕ್ತಿಯನ್ನು, ಸಾರ್ವಜನಿಕ ಸಂಸ್ಥೆಯ ಅಧೀನದಲ್ಲಿರುವ ಯಾವುದೇ ದಾಖಲೆಯನ್ನು ಪರೀಕ್ಷಿಸಲು ನೇಮಿಸುವುದಕ್ಕೆ ಅಧಿಕಾರ ಕೊಡುತ್ತದೆ.

ಕಲಮು 36 : ಅಂಗವಿಕಲ ವ್ಯಕ್ತಿಗಳಿಗಾಗಿ ಮೀಸಲಾಗಿರುವ ಉದ್ಯೋಗ ಅವಕಾಶಗಳನ್ನು ಮುಂಬರುವ ವರ್ಷಗಳಲ್ಲಿ ನೇಮಕಾತಿಗಾಗಿ ಮುಂದುವರಿಸಿಕೊಂಡು ಹೋಗಲು ಅನುವು ಮಾಡಿಕೊಡುತ್ತದೆ.

ಕಲಮು 37 : ಸಮುಚಿತ ಸರ್ಕಾರಗಳಿಗೆ ಸಾರ್ವಜನಿಕ ಸಂಸ್ಥೆಯ ಮಾಲೀಕರು ತಮ್ಮ ಸಂಸ್ಥೆಗಳಲ್ಲಿ ಅಂಗವಿಕಲ ವ್ಯಕ್ತಿಗಳ ನೇಮಕಾತಿ ಕುರಿತು ದಾಖಲೆಗಳ ಸಂರಕ್ಷಣೆ ಮಾಡುವಂತೆ ನಿಯಮಗಳನ್ನು ತರಲು ಅನುವು ಮಾಡಿಕೊಡುತ್ತದೆ.

ಕಲಮು 38 : ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಿಗಳಿಗೆ, ಅಂಗವಿಕಲ ವ್ಯಕ್ತಿಗಳಿಗಾಗಿ ನೇಮಕಾತಿಯನ್ನು ನಿಶ್ಚಿತಗೊಳಿಸುವ ವ್ಯವಸ್ಥೆಗಳನ್ನು ಸೂತ್ರರೂಪದಲ್ಲಿ ವ್ಯಕ್ತಗೊಳಿಸಲು ಅಧಿಕಾರ ಕೊಡುತ್ತದೆ.

ಕಲಮು 39 : ಎಲ್ಲಾ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು ಹಾಗೂ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಇತರೆ ಶೈಕ್ಷಣಿಕ ಸಂಸ್ಥೆಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಕನಿಷ್ಠಪಕ್ಷ ಶೇಕಡ ೩ ರಷ್ಟು ಮೀಸಲಾತಿ ಇಡಲು ಅನುವು ಮಾಡಿಕೊಡುತ್ತದೆ.

ಕಲಮು 40 : ಸಮುಚಿತ ಸರ್ಕಾರ ಹಾಗೂ ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲರಿಗೆ ಬಡತನ ನಿರ್ಮೂಲನ ಯೋಜನೆಗಳ ಕೆಳಗೆ ಕನಿಷ್ಠಪಕ್ಷ ಶೇ. ೩ರಷ್ಟು ಸ್ಥಾನಗಳನ್ನು ಮೀಸಲಾತಿಯ ಅವಕಾಶವನ್ನು ಕಲ್ಪಿಸುತ್ತದೆ.

ಕಲಮು 41 : ಸಾರ್ವಜನಿಕ ಹಾಗೂ ಖಾಸಗಿ ವಲಯಗಳಲ್ಲಿನ ನಿಯೋಜಕರು ಕನಿಷ್ಠ ಶೇ. ೫ ರಷ್ಟು ಮೀಸಲಾತಿಯನ್ನು ಅಂಗವಿಕಲ ವ್ಯಕ್ತಿಗಳಿಗೆ ನೀಡಿದ್ದ ಪಕ್ಷದಲ್ಲಿ ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು ತಮ್ಮ ಹಣಕಾಸಿನ ಪರಿಮಿತಿಗಳ ನಡುವೆ ಅಂಥ ನಿಯೋಜಕರಿಗೆ ನೀಡಬಹುದಾದ ಪ್ರೋತ್ಸಾಹಗಳ ವಿವರಣೆ.

ಕಲಮು 42 : ಸಮುಚಿತ ಸರ್ಕಾರಗಳಿಗೆ ಅಂಗವಿಕಲ ವ್ಯಕ್ತಿಗಳಿಗಾಗಿ ಉಪಯುಕ್ತ ಸಹಾಯ ಹಾಗೂ ಸಲಕರಣೆ ಒದಗಿಸುವ ವ್ಯವಸ್ಥೆಯನ್ನು ಮಾಡಲು ಆದೇಶ ಕೊಡುತ್ತದೆ.

ಕಲಮು 43 : ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಮನೆ, ಮನೋರಂಜನೆ ಕೇಂದ್ರ, ವಿಶೇಷ ಶಾಲೆ, ಸಂಶೋಧನ ಕೇಂದ್ರ ಇತ್ಯಾದಿಗಳ ನಿರ್ಮಾಣಕ್ಕಾಗಿ ನಿವೇಶನ ಸೌಕರ್ಯ ಒದಗಿಸಲು ಅವಕಾಶ ನೀಡುತ್ತದೆ.

ಕಲಮು 44 : ಸಾರಿಗೆ ಕ್ಷೇತ್ರದಲ್ಲಿರುವ ಸಾರ್ವಜನಿಕ ಸಂಸ್ಥೆಗಳು ಅಂಗವಿಕಲ ವ್ಯಕ್ತಿಗಳು ಸುಲಭವಾಗಿ ಪ್ರಯಾಣಿಸಲು ರೈಲು ಭೋಗಿಗಳಲ್ಲಿ, ಬಸ್ಸುಗಳಲ್ಲಿ ಹಡಗುಗಳಲ್ಲಿ ಮತ್ತು ವಿಮಾನಗಳಲ್ಲಿ ಒಳಬರಲು ವಿಶೇಷ ಸೌಲಭ್ಯಗಳನ್ನು ಕಲ್ಪಿಸಲು ಅನುವು ಮಾಡಿಕೊಡುತ್ತದೆ.

ಕಲಮು 45 : ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲರಿಗಾಗಿ ಸಾರ್ವಜನಿಕ ಸ್ಥಳಗಳಲ್ಲಿ ಸುಲಭ ಚಾಲನೆಗೆ ರೈಲ್ವೆ ಪ್ಲಾಟ್ ಫಾರ್ಮಗಳಲ್ಲಿ ಮತ್ತು ಜೀಬ್ರಾ ಕ್ರಾಸಿಂಗ್ನಲ್ಲಿ ಗಾಲಿ ಕುರ್ಚಿಗಳ ಸುಲಭ ಚಾಲನೆಯು ಸೇರಿದಂತೆ ಇನ್ನಿತರ ಅನುಕೂಲಗಳನ್ನು ಕಲ್ಪಿಸಲು ಅನುವು ಮಾಡಿಕೊಡುತ್ತದೆ.

ಕಲಮು 46 : ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಿಗಳು, ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಶೌಚಾಲಯಗಳಲ್ಲಿ ಗಾಲಿ ಕುರ್ಚಿಗಳ ಸುಲಭ ಚಲನೆ, ಹಾಗೂ ಲಿಫ್ಟ್‌ಗಳಲ್ಲಿ ಶಬ್ಧ ಸಂಕೇತಗಳನ್ನು ಅಳವಡಿಸಿ ಅಂಗವಿಕಲರಿಗೆ ಅನುಕೂಲವಾಗುವಂತೆ ಮಾಡಲು ಅನುವು ಮಾಡಿಕೊಡುತ್ತದೆ.

ಕಲಮು 47 : ಯಾವುದೇ ನೌಕರ ತನ್ನ ಸೇವೆ ಕಾಲದಲ್ಲಿ ವಿಕಲಾಂಗನಾದರೆ ಅವನ ಉದ್ಯೋಗ ಖಾತ್ರಿಯ ವಿಷಯದಲ್ಲಿ ವಿವರಣೆ ಪ್ರೇರೇಪಿಸುತ್ತದೆ.

ಕಲಮು 48 : ಸಮುಚಿತ ಸರ್ಕಾರಗಳ ಹಾಗೂ ಸ್ಥಳೀಯ ಪ್ರಾಧಿಕಾರಗಳ ಅಂಗವಿಕಲತೆಯನ್ನು ತಡೆಗಟ್ಟುವ ಅಂಗವಿಕಲ ವ್ಯಕ್ತಿಯ ಪುನರ್‌ವಸತಿ ಹಾಗೂ ಇತ್ಯಾದಿ ಕ್ಷೇತ್ರಗಳಲ್ಲಿ ಸಂಶೋಧನೆಯನ್ನು ಪ್ರೋತ್ಸಾಹಿಸಲು ಅನುವು ಮಾಡಿಕೊಡುತ್ತದೆ.

ಕಲಮು 49 : ಸಮುಚಿತ ಸರ್ಕಾರಗಳು, ವಿಶ್ವವಿದ್ಯಾಲಯ ಹಾಗೂ ಇತರ ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ವಿಶೇಷ ಶಿಕ್ಷಣದ ಪುನರ್ ಸ್ಥಾಪನೆ ಹಾಗೂ ಮಾನವ ಶಕ್ತಿಯನ್ನು ವಿಕಾಸಗೊಳಿಸುವುದಕ್ಕಾಗಿ ಸಂಶೋಧನೆ ಮಾಡಲು ಹಣಕಾಸಿನ ನೆರವನ್ನು ಒದಗಿಸುತ್ತದೆ.

ಕಲಮು 50 : ಕಾಯ್ದೆಯ ಉದ್ದೇಶಕ್ಕಾಗಿ ಯೋಗ್ಯ ಅಧಿಕಾರಿಯನ್ನು ನೇಮಿಸಲು ರಾಜ್ಯ ಸರ್ಕಾರವು ಅನುವು ಮಾಡಿಕೊಡುತ್ತದೆ.

ಕಲಮು 51 : ಸೂಕ್ತ ಅಧಿಕಾರಿಯಿಂದ ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಸಂಸ್ಥೆಗಳಿಗೆ ಪಂಜೀಕರಿಸಲು (ನೊಂದಣಿ) ಅನುವು ಮಾಡಿಕೊಡುತ್ತದೆ.

ಕಲಮು 52 : ಸೂಕ್ತ ಅಧಿಕಾರಿಗಳಿಗೆ ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಸಂಸ್ಥೆಗಳ ಪ್ರಮಾಣ ಪತ್ರಕ್ಕೆ ಪಂಜೀಕರಿಸಲು (ನೊಂದಣಿ) ಅನುಮತಿ ಕೊಡಲು ಅನುವು ಮಾಡಿಕೊಡುತ್ತದೆ.

ಕಲಮು 53 : ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಸಂಸ್ಥೆಗಳ ನೊಂದಣಿ ಪ್ರಮಾಣಪತ್ರವನ್ನು ರದ್ದುಪಡಿಸುವ ಅಧಿಕಾರವನ್ನು ಸೂಕ್ತ ಅಧಿಕಾರಿಗೆ ನೀಡುತ್ತದೆ.

ಕಲಮು 54 : ಸೂಕ್ತ ಅಧಿಕಾರಿಯ ನೋಂದಣಿ ಪ್ರಮಾಣ ಪತ್ರಕ್ಕೆ ಅನುಮತಿ ಕೊಡಲು ಅಥವಾ ಅದನ್ನು ರದ್ದು ಪಡಿಸಲು ನಿರಾಕರಿಸಿದರೆ ಅವರ ವಿರುದ್ಧ ರಾಜ್ಯ ಸರ್ಕಾರದಲ್ಲಿ ಅಪೀಲನ್ನು ಸಲ್ಲಿಸಲು ಅನುವು ಮಾಡಿಕೊಡುತ್ತದೆ.

ಕಲಮು 55 : ಅಂಗವಿಕಲ ಮಕ್ಕಳಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಸ್ಥಾಪಿಸಲ್ಪಟ್ಟಿರುವ ಹಾಗೂ ಸಂರಕ್ಷಣೆಗೆ ಒಳಪಟ್ಟಿರುವ ವ್ಯಾಪ್ತಿಯನ್ನು ಈ ಅಧ್ಯಾಯ ನಿರೂಪಿಸುತ್ತದೆ.

ಕಲಮು 56 : ಸಮುಚಿತ ಸರ್ಕಾರವು ತೀವ್ರ ಅಂಗವಿಕಲತೆಗಳಿಂದ ಬಳಲುತ್ತಿರುವ ವ್ಯಕ್ತಿಗಳಿಗಾಗಿ ಸಂಸ್ಥೆಯನ್ನು ಸ್ಥಾಪಿಸಲು ಅನುವು ಮಾಡಿಕೊಡುತ್ತದೆ.

ಕಲಮು 57 : ಕೇಂದ್ರ ಸಮನ್ವಯ ಸಮಿತಿಗೆ ಮುಖ್ಯ ಆಯುಕ್ತರನ್ನು ನೇಮಿಸುವ ಹಾಗೂ ಅವರ ಸಂಬಳ, ಭತ್ಯೆ, ಸೇವಾ ನಿಯಮಗಳನ್ನು ನಿಗದಿಗೊಳಿಸಲು ಅವಕಾಶ ಕಲ್ಪಿಸುತ್ತದೆ.

ಕಲಮು 58 : ಮುಖ್ಯ ಆಯುಕ್ತರ ಕರ್ತವ್ಯಗಳನ್ನು ತಿಳಿಸುತ್ತದೆ.

ಕಲಮು 59 : ಸಂಯುಕ್ತ ಸರ್ಕಾರಗಳು ಹಾಗೂ ಸ್ಥಳೀಯ ಅಧಿಕಾರಿಗಳು ಅಂಗವಿಕಲ ವ್ಯಕ್ತಿಗಳ ಏಳಿಗೆಗಾಗಿ ಹೊರಡಿಸಿರುವ ಕಾನೂನು ನಿಯಮ, ನಿಬಂಧನೆ ಹಾಗೂ ಆಜ್ಞೆಗಳನ್ನು ಜಾರಿಗೊಳಿಸದೆ ಇದ್ದ ಪಕ್ಷದಲ್ಲಿ ಅಥವಾ ಅವರ ಹಕ್ಕುಗಳಿಗೆ ಧಕ್ಕೆಯುಂಟಾದಲ್ಲಿ ಅಂಗವಿಕಲ ವ್ಯಕ್ತಿಗಳು ಸಲ್ಲಿಸಿರುವ ದೂರುಗಳನ್ನು ಪರಿಶೀಲಿಸಲು ಮುಖ್ಯ ಆಯುಕ್ತರಿಗೆ ಅಧಿಕಾರವಹಿಸುತ್ತದೆ.

ಕಲಮು 60 : ಅಂಗವಿಕಲತೆಯುಳ್ಳ ವ್ಯಕ್ತಿಗಳ ಕಾಯ್ದೆಯ ಉದ್ದೇಶಕ್ಕಾಗಿ ಆಯುಕ್ತರನ್ನು ನೇಮಿಸಲು ರಾಜ್ಯ ಸರ್ಕಾರಕ್ಕೆ ಅನುವು ಮಾಡಿಕೊಡುತ್ತದೆ. ಈ ನಿಯಮ ಮುಖ್ಯ ಆಯುಕ್ತರಿಗೆ ಒದಗಿಸಿರುವ ನೌಕರರ ಹಾಗೂ ಅಧಿಕಾರಿಗಳ ಸಂಬಳ, ಭತ್ಯೆ ಹಾಗೂ ಇತರ ನಿಯಮಗಳನ್ನು ವಿವರಿಸುತ್ತದೆ.

ಕಲಮು 61 : ಆಯುಕ್ತರ ಅಧಿಕಾರಗಳನ್ನು ವಿವರಿಸುತ್ತದೆ.

ಕಲಮು 62 : ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಅಧಿಕಾರಿಗಳು ಅಂಗವಿಕಲ ವ್ಯಕ್ತಿಗಳ ಏಳಿಗೆಗಾಗಿ ಹೊರಡಿಸುವ ಕಾನೂನು, ನಿಯಮ ಹಾಗೂ ಆಜ್ಞೆಗಳನ್ನು ಜಾರಿಗೊಳಿಸದೆ ಇದ್ದ ಪಕ್ಷದಲ್ಲಿ ಅಥವಾ ಅವರ ಹಕ್ಕುಗಳಿಗೆ ಸಲ್ಲಿಸಿರುವ ದೂರುಗಳನ್ನು ಪರಿಶೀಲಿಸಲು ಆಯುಕ್ತರಿಗೆ ಅಧಿಕಾರ ಕೊಡುತ್ತದೆ.

ಕಲಮು 63 : ಮುಖ್ಯ ಆಯುಕ್ತರಿಗೆ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ಸಂಬಂಧ ಪಟ್ಟಂತೆ ದಾಖಲೆಗಳನ್ನು ತರಿಸಿಕೊಳ್ಳುವುದು; ಸಾಕ್ಷಿಗಳನ್ನು ವಿಚಾರಿಸುವುದು ಮುಂತಾದ ಕಾರ್ಯಗಳಿಗೆ ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಕಲ್ಪಿಸುತ್ತದೆ.

ಕಲಮು 64 : ಮುಖ್ಯ ಆಯುಕ್ತರು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವುದಕ್ಕಾಗಿ, ಹಿಂದಿನ ಹಣಕಾಸಿನ ವರ್ಷದ ಕಾರ್ಯಕ್ರಮದ ವಿವರಗಳನ್ನು ಕೊಟ್ಟು ವಾರ್ಷಿಕ ವರದಿಯನ್ನು ತಯಾರಿಸಲು ಅನುವು ಮಾಡಿಕೊಡುತ್ತದೆ. ಈ ವಾರ್ಷಿಕ ವರದಿಯನ್ನು ಸಂಸತ್ತಿನ ಮುಂದೆ ಮಂಡಿಸಲು ಅವಕಾಶ ಕಲ್ಪಿಸಿಕೊಡುತ್ತದೆ.

ಕಲಮು 65 : ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರವನ್ನು ತಯಾರಿಸಲು ರಾಜ್ಯದ ಆಯುಕ್ತರಿಗೆ ಹಿಂದಿನ ವರ್ಷದ ವರದಿಯನ್ನು ತಯಾರಿಸಲು, ಅದನ್ನು ಶಾಸನ ಸಭೆಗಳ ಮುಂದೆ ಮಂಡಿಸಲು ಅವಕಾಶ ಕಲ್ಪಿಸುತ್ತದೆ.

ಕಲಮು 66 : ಸಮುಚಿತ ಸರ್ಕಾರಗಳು ಹಾಗೂ ಸ್ಥಳೀಯ ಅಧಿಕಾರಿಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಪುನರ್ವಸತಿಯನ್ನು ಕಲ್ಪಿಸುವ ಹೊಣೆಯನ್ನು ನಿರ್ವಹಿಸಲು ಅನುವು ಮಾಡಿಕೊಡುತ್ತದೆ.

ಕಲಮು 67 : ಸಂಯುಕ್ತ ಸರ್ಕಾರದಿಂದ ಅದರ ಅಂಗವಿಕಲ ನೌಕರರ ಒಳತಿಗಾಗಿ ವಿಮೆ ವ್ಯವಸ್ಥೆಯನ್ನು ರೂಪಿಸಲು ಅನುವು ಮಾಡಿಕೊಡುತ್ತದೆ.

ಕಲಮು 68 : ಸಂಯುಕ್ತ ಸರ್ಕಾರದಿಂದ ಅಂಗವಿಕಲರ ವ್ಯಕ್ತಿಗಳಿಗೆ ನಿರುದ್ಯೋಗ ಭತ್ಯೆಯನ್ನು ನೀಡುವ ಸಲುವಾಗಿ ವಿಧಾನವನ್ನು ರೂಪಿಸಲು ಅನುವು ಮಾಡಿಕೊಡುತ್ತದೆ.

ಕಲಮು 69 : ವಂಚನೆಯಿಂದ ಅಂಗವಿಕಲ ವ್ಯಕ್ತಿಗಳಿಗಾಗಿರುವ ಸೌಲಭ್ಯಗಳನ್ನು ಪಡೆಯಲು ಯಾವುದೇ ವ್ಯಕ್ತಿ ಯತ್ನಿಸಿದರೆ, ಅಂತಹ ವ್ಯಕ್ತಿಗಳಿಗೆ ಎರಡು ವರ್ಷಗಳ ಸೆರಮನೆ ಶಿಕ್ಷೆಯನ್ನು ಮತ್ತು ದಂಡವನ್ನು ವಿಧಿಸಲು ಅನುವು ಮಾಡಿಕೊಡುತ್ತದೆ.

ಕಲಮು 70 : ಮುಖ್ಯ ಆಯುಕ್ತರ ಸಿಬ್ಬಂದಿ ಭಾರತ ದಂಡ ಸಂಹಿತೆ ೨೧ರ ಪ್ರಕಾರ ಸರ್ಕಾರಿ ನೌಕರರೆಂದು ಪರಿಗಣಿಸಲು ಅವಕಾಶ ಕಲ್ಪಿಸುತ್ತದೆ.

ಕಲಮು 71 : ಈ ಕಾಯ್ದೆಯನ್ನು ಕಾರ್ಯಗತಗೊಳಿಸುವ ದಿಶೆಯಲ್ಲಿ ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರಗಳ ಪ್ರಾಮಾಣಿಕ ಪ್ರಯತ್ನವನ್ನು ರಕ್ಷಿಸಲು ಅನುವು ಮಾಡಿಕೊಡುತ್ತದೆ.

ಕಲಮು 72 : ಈ ಕಾಯ್ದೆಯ ಅನ್ವಯ ಹೊಂದಿರುವ ಅವಕಾಶಗಳು, ನಿತ್ಯದಲ್ಲಿ ಬದಲಾವಣೆಯಲ್ಲಿರುವ ಹಾಗೂ ಅಂಗವಿಕಲ ಮಕ್ಕಳಿಗೆ, ಪ್ರಯೋಜನವಾಗಿರುವ ಬೇರಾವುದೇ ಕಾನೂನಿಗೆ ಪೂರಕವಾಗಿದೆ ಮತ್ತು ವಿರುದ್ಧವಾಗಿರುವುದಿಲ್ಲವೆಂಬುದನ್ನು ಕಲ್ಪಿಸುತ್ತದೆ.

ಕಲಮು 73 : ಸಂಯುಕ್ತ ಸರ್ಕಾರಕ್ಕೆ ಈ ಕಾಯ್ದೆಯನ್ನು ಕಾರ್ಯರೂಪಗೊಳಿಸಲು ನಿಯಮವನ್ನು ಮಾಡುವ ಅಧಿಕಾರಕೊಡುತ್ತದೆ. ಕೇಂದ್ರ ಸರ್ಕಾರಕ್ಕೆ ಹೊರಡಿಸಿರುವ ಪ್ರಕಟಣೆಗಳು, ನಿಯಮಗಳು ಹಾಗೂ ವ್ಯವಸ್ಥೆಯನ್ನು ಸಂಸತ್ತಿನ ಎರಡು ಸಭೆಗಳ ಮುಂದೆ ಮಂಡಿಸಲು ಮತ್ತು ರಾಜ್ಯ ಸರ್ಕಾರವು ಹೊರಡಿಸಿರುವ ನಿಯಮಗಳ ಮತ್ತು ವ್ಯವಸ್ಥೆಗಳನ್ನು ರಾಜ್ಯ ಶಾಸನ ಸಭೆಯ ಎರಡು ಸದನಗಳಲ್ಲಿ ಮಂಡಿಸಲು ಅನುವು ಮಾಡಿಕೊಡುತ್ತದೆ.

1987ರ ಅಧಿನಿಯಮ 39ರ ತಿದ್ದುಪಡಿ

***ಷರಾ : ಕಾನೂನಿಗೆ ಸಂಬಂಧಿಸಿದಂತೆ ವಿಷಯಗಳಿಗೆ ಹಾಗೂ ಇತರ ವಿವರಗಳಿಗೆ ಅಂಗವಿಕಲರ ಅಧಿನಿಯಮ 1995ರ ಮೂಲ ಪ್ರತಿಯನ್ನು ನೋಡಬಹುದು.***

ಕರ್ನಾಟಕ ಸರ್ಕಾರ

ಸಂಖ್ಯೆ ಡಬ್ಲ್ಯೂಸಿಡಿ 172 ಪಿಹೆಚ್‌ಪಿ 98

ಕರ್ನಾಟಕ ಸರ್ಕಾರದ ಸಚಿವಾಲಯ

ಬಹುಮಹಡಿ ಕಟ್ಟಡ

ಬೆಂಗಳೂರು, ದಿನಾಂಕ 17.4.2004.

## ಅಧಿಸೂಚನೆ

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣಭಾಗವಹಿಸುವಿಕೆ) ಅಧಿನಿಯಮ, 1995 (1996ರ ಅಧಿನಿಯಮ ಸಂಖ್ಯೆ 1)ರ ಪ್ರಕರಣ 73ರ ಉಪಪ್ರಕರಣ (1)ರಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಮುಂದಿನ ನಿಯಮಗಳನ್ನು ಈ ಮೂಲಕ ರಚಿಸಿದೆ, ಎಂದರೆ:-

## ಅಧ್ಯಾಯ-I

### ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ನಿಯಮಗಳನ್ನು ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ನಿಯಮಗಳು, 2003 ಎಂದು ಕರೆಯತಕ್ಕದ್ದು.

(2) ಇವು ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.- ಈ ನಿಯಮಗಳಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,

ಎ) "ಅಧಿನಿಯಮ" ಎಂದರೆ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995 (1996ರ ಅಧಿನಿಯಮ ಸಂಖ್ಯೆ1) ;

ಬಿ) "ಪ್ರಕರಣ" ಎಂದರೆ ಈ ಅಧಿನಿಯಮದ ಪ್ರಕರಣಗಳು ;

ಸಿ) "ವರ್ಷ" ಎಂದರೆ ಏಪ್ರಿಲ್ ಮೊದಲ ದಿನದಂದು ಪ್ರಾರಂಭವಾಗುವ ಹಣಕಾಸು ವರ್ಷ;

3. ಅಂಗವಿಕಲತೆಯ ನಿರ್ಧಾರಣೆ ಮತ್ತು ಶಾಶ್ವತ ಅಂಗವಿಕಲತೆಯ ಪ್ರಮಾಣ ಪತ್ರವನ್ನು ನೀಡುವುದು.-

1. ಉಪನಿಯಮ (2)ರ ಅಡಿಯಲ್ಲಿ ರಚಿಸಲಾದ ವೈದ್ಯಕೀಯ ಮಂಡಲಿಯು ಅಂಗವಿಕಲ ವ್ಯಕ್ತಿಯ ಅರ್ಜಿಯ ಮೇಲೆ ನಮೂನೆ-1ಲ್ಲಿ ಅಂಗವಿಕಲತೆಯ ಪ್ರಮಾಣ ಪತ್ರವನ್ನು ನೀಡಬಹುದು.

2. ರಾಜ್ಯ ಸರ್ಕಾರವು, ಮೂವರು ವ್ಯಕ್ತಿಗಳನ್ನು ಒಳಗೊಂಡ ಒಂದು ವೈದ್ಯಕೀಯ ಮಂಡಲಿಯನ್ನು ರಚಿಸತಕ್ಕದ್ದು, ಅವರಲ್ಲಿ ಕೊನೇ ಪಕ್ಷ ಒಬ್ಬರು ಸಂದರ್ಭಾನುಸಾರ ಅಂಧತ್ವ, ಕಡಿಮೆದೃಷ್ಟಿ, ಕುಷ್ಠರೋಗ, ಶ್ರವಣದೋಷ, ಚಲನಶಕ್ತಿಯ ಅಸಾಮರ್ಥ್ಯ, ಬುದ್ಧಿಮಾಂದ್ಯರು ಅಥವಾ ಮಾನಸಿಕ ಅಸ್ವಸ್ಥರು ಕಾಯಿಲೆಗಳನ್ನು ನಿರ್ಧರಿಸಲು ಆ ಕ್ಷೇತ್ರದಲ್ಲಿ ಪರಿಣತಿ ಪಡೆದವರಾಗಿರತಕ್ಕದ್ದು.

3. ವೈದ್ಯಕೀಯ ಮಂಡಲಿಯು ಯುಕ್ತ ಪರೀಕ್ಷೆ ಮಾಡಿದ ನಂತರ ಭವಿಷ್ಯದಲ್ಲಿ ಅಂಗವಿಕಲತೆಯ ಪ್ರಮಾಣದಲ್ಲಿ ವ್ಯತ್ಯಯವಾಗುವ ಅವಕಾಶವಿಲ್ಲದಿರುವಂಥ ಶಾಶ್ವತ ಅಂಗವಿಕಲತೆಗಳ ಸಂದರ್ಭದಲ್ಲಿ ಶಾಶ್ವತ ಅಂಗವಿಕಲತೆಯ ಪ್ರಮಾಣಪತ್ರವನ್ನು ನೀಡತಕ್ಕದ್ದು.

4. ವೈದ್ಯಕೀಯ ಮಂಡಲಿಯು ವ್ಯತ್ಯಯದ ಯಾವುದೇ ಅವಕಾಶಗಳಿರುವ ಪ್ರಕರಣಗಳಲ್ಲಿ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡುವ ಅವಧಿಯನ್ನು ಸೂಚಿಸತಕ್ಕದ್ದು.

5. ಅಂಗವಿಕಲತೆಯ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಅಭ್ಯರ್ಥಿಗೆ ತನ್ನ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ಹೊರತು ನಿರಾಕರಿಸತಕ್ಕದ್ದಲ್ಲ.

6. ವೈದ್ಯಕೀಯ ಮಂಡಲಿಯು ಪ್ರಕರಣದ ಎಲ್ಲ ಸಂಗತಿ ಮತ್ತು ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ಅದರ ತೀರ್ಮಾನವನ್ನು ಪರಿಶೀಲಿಸಲು ಅಭ್ಯರ್ಥಿಯು ಮಾಡಿದ ನಿವೇದನೆಯ ಮೇಲೆ ಅದು ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಮಾಡತಕ್ಕದ್ದು.

7. ಈ ನಿಯಮಗಳ ಅಡಿಯಲ್ಲಿ ಯಾರಿಗೆ ಈ ಪ್ರಮಾಣ ಪತ್ರವನ್ನು ನೀಡಲಾಗುವುದೋ ಆ ವ್ಯಕ್ತಿಯು ರಾಜ್ಯ ಸರ್ಕಾರವು ವಿಧಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಅಧಿನಿಯಮದ ಅಡಿಯಲ್ಲಿ ಮಾಡಿದ ಯೋಜನೆಗಳ ಅಡಿಯಲ್ಲಿನ ಸೌಲಭ್ಯಗಳಿಗೆ, ರಿಯಾಯತಿಗಳಿಗೆ ಮತ್ತು ಸೌಕರ್ಯಗಳಿಗೆ ಅರ್ಜಿ ಸಲ್ಲಿಸಿಕೊಳ್ಳಲು ಅರ್ಹನಾಗಿರತಕ್ಕದ್ದು.

## ಅಧ್ಯಾಯ-II

## ರಾಜ್ಯ ಸಮನ್ವಯ ಸಮಿತಿ

**4.** ರಾಜ್ಯ ಸಮನ್ವಯ ಸಮಿತಿಗೆ ನಾಮನಿರ್ದೇಶನಗೊಂಡ ಸದಸ್ಯರಿಗೆ ದಿನಭತ್ಯೆ ಮತ್ತು ಪ್ರವಾಸಭತ್ಯೆ.–

1. 13ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ರಾಜ್ಯ ಸಮನ್ವಯ ಸಮಿತಿಗೆ ನಾಮನಿರ್ದೇಶನಗೊಂಡ ಸದಸ್ಯರು ಕರ್ನಾಟಕ ಸಿವಿಲ್ ಸೇವಾ ನಿಯಮಗಳ ಅನುಬಂಧ-ಎ ಯಲ್ಲಿ ನಿರ್ದಿಷ್ಟಪಡಿಸಿದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

2. ರಾಜ್ಯಸಮನ್ವಯ ಸಮಿತಿಯ ಅಧಿಕಾರೇತರ ಸದಸ್ಯರಿಗೆ ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳ ಅನುಬಂಧ-ಎ ಯಲ್ಲಿ ನಿರ್ದಿಷ್ಟಪಡಿಸಿದಂಥ ದಿನಭತ್ಯೆ, ಪ್ರವಾಸಭತ್ಯೆ ಮತ್ತು ಸಮಾವೇಶ ಭತ್ಯೆಗಳನ್ನು ಸಂದಾಯ ಮಾಡತಕ್ಕದ್ದು :

ಆದರೆ, ರಾಜ್ಯ ವಿಧಾನ ಮಂಡಲ ಸದಸ್ಯನು ರಾಜ್ಯ ಸಮನ್ವಯ ಸಮಿತಿಯ ಸದಸ್ಯ ಕೂಡ ಆಗಿರುವ ಸಂದರ್ಭದಲ್ಲಿ ವಿಧಾನಮಂಡಲವು ಅಧಿವೇಶನದಲ್ಲಿಲ್ಲದಿರುವಾಗ ಮತ್ತು ಸದಸ್ಯನು ಯಾವುದೇ ಇತರ ಸರ್ಕಾರಿ ಮೂಲಗಳಿಂದ ಅದೇ ಪ್ರಯಾಣ ಮತ್ತು ತಂಗುವಿಕೆಗಾಗಿ ಯಾವುದೇ ಅಂಥ ಭತ್ಯೆಗಳನ್ನು ಪಡೆದಿಲ್ಲವೆಂದು ಒಂದು ಪ್ರಮಾಣ ಪತ್ರವನ್ನು ಹಾಜರುಪಡಿಸಿದ ಮೇಲೆ ರಾಜ್ಯ ವಿಧಾನಮಂಡಲದ ಸದಸ್ಯನಾಗಿ ಅವನಿಗೆ ಗ್ರಾಹ್ಯವಿರುವ ದರಗಳಲ್ಲಿ ಸದರಿ ದಿನಭತ್ಯೆ ಮತ್ತು ಪ್ರವಾಸಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

**5.** ಸಭೆಗಳ ಸೂಚನೆ.– 1. ರಾಜ್ಯ ಸಮನ್ವಯ ಸಮಿತಿಯ ಸಭೆಗಳು ಸಾಮಾನ್ಯವಾಗಿ ಅಧ್ಯಕ್ಷರು ನಿಗದಿಪಡಿಸಬಹುದಾದ ದಿನಾಂಕದಂದು ರಾಜ್ಯ ಕೇಂದ್ರ ಕಾರ್ಯಸ್ಥಾನದಲ್ಲಿ ನಡೆಯತಕ್ಕದ್ದು.

2. ಅಧ್ಯಕ್ಷರು ರಾಜ್ಯ ಸಮನ್ವಯ ಸಮಿತಿಯ ಕನಿಷ್ಠ ಹತ್ತು ಜನ ಸದಸ್ಯರಿಗಿಂತ ಕಡಿಮೆ ಇಲ್ಲದಂತೆ ಲಿಖಿತದಲ್ಲಿ ಕೋರಿಕೆಯನ್ನು ಪಡೆದ ಮೇಲೆ ರಾಜ್ಯ ಸಮನ್ವಯ ಸಮಿತಿಯ ವಿಶೇಷ ಸಭೆಯನ್ನು ಕರೆಯತಕ್ಕದ್ದು.

3. ಯಾವುದೇ ಸಾಮಾನ್ಯ ಸಭೆಗೆ ಪೂರ್ಣ 15 ದಿನಗಳ ನೋಟೀಸು ಮತ್ತು ವಿಶೇಷ ಸಭೆಗೆ ಪೂರ್ಣ 5 ದಿನಗಳ ನೋಟೀಸು ನೀಡಿ ಅಂಥ ಸಭೆ ನಡೆಯಬೇಕಾದ ಸ್ಥಳ ಮತ್ತು ಕಾಲವನ್ನು ಮತ್ತು ಅಲ್ಲಿ ನಡೆಸಬೇಕಾದ ವ್ಯವಹಾರಗಳನ್ನು ನಿರ್ದಿಷ್ಟಪಡಿಸಿ ಸದಸ್ಯರಿಗೆ ಸದಸ್ಯಕಾರ್ಯದರ್ಶಿಯು ಸೂಚನೆ ನೀಡತಕ್ಕದ್ದು.

4. ಸದಸ್ಯರಿಗೆ ಸಭೆಯ ನೋಟೀಸನ್ನು ಸಂದೇಶ ವಾಹಕನ ಮೂಲಕ ಅಥವಾ ಅವನು ಕಡೆಯದಾಗಿ ವಾಸಿಸುತ್ತಿದ್ದನೆಂದು ತಿಳಿದಿರುವ ಸ್ಥಳಕ್ಕೆ ಅಥವಾ ವ್ಯವಹಾರ ಸ್ಥಳಕ್ಕೆ ನೋಂದಾಯಿತ ಅಂಚೆಯ ಮೂಲಕ ಅಥವಾ ಅಧ್ಯಕ್ಷರು ಪ್ರಕರಣದ ಸನ್ನಿವೇಶದಲ್ಲಿ ಸೂಕ್ತವೆಂದು ಭಾವಿಸುವಂಥ ಇತರ ರೀತಿಯಲ್ಲಿ ಕಳುಹಿಸತಕ್ಕದ್ದು.

5. ಯಾರೇ ಸದಸ್ಯನು, ಸದಸ್ಯ ಕಾರ್ಯದರ್ಶಿಗೆ ಹತ್ತು ಪೂರ್ಣ ದಿನಗಳ ನೋಟೀಸನ್ನು ನೀಡದೆ ಯಾವುದೇ ವಿಷಯವನ್ನು ಸಭೆಯ ಮುಂದೆ ಪರಿಗಣನೆಗೆ ತರಲು ಅಧ್ಯಕ್ಷರು ವಿವೇಚನಾನುಸಾರ ಅನುಮತಿ ನೀಡಿದ ಹೊರತು, ಹಾಗೆ ಮಾಡಲು ಅರ್ಹನಾಗಿರತಕ್ಕದ್ದಲ್ಲ.

6. ಎ) ರಾಜ್ಯ ಸಮನ್ವಯ ಸಮಿತಿಯು ಮುಂದಿನ ದಿನಕ್ಕೆ ಅಥವಾ ಯಾವುದೇ ನಿರ್ದಿಷ್ಟ ದಿನಕ್ಕೆ ಅದರ ಸಭೆಗಳನ್ನು ಮುಂದೂಡಬಹುದು.

ಬಿ) ರಾಜ್ಯ ಸಮನ್ವಯ ಸಮಿತಿಯ ಸಭೆಯನ್ನು ಮುಂದಿನ ದಿನಕ್ಕೆ ಮುಂದೂಡಿದಲ್ಲಿ ಸಭೆಯ ಅಂಥ ಮುಂದೂಡಿಕೆಯ ನೋಟೀಸನ್ನು ನಗರ, ಪಟ್ಟಣ ಅಥವಾ ಇತರೆ ಸ್ಥಳದಲ್ಲಿರುವ ಸದಸ್ಯರಿಗೆ ದೂರವಾಣಿ ಮೂಲಕವಾಗಲಿ ಅಥವಾ ವಿಶೇಷ ಸಂದೇಶ ವಾಹಕನ ಮೂಲಕವಾಗಲಿ ನೀಡತಕ್ಕದ್ದು. ಇತರೆ ಸದಸ್ಯರಿಗೆ ಮುಂದೂಡಿಕೆಯ ನೋಟೀಸನ್ನು ನೀಡುವ ಅವಶ್ಯಕತೆ ಇರತಕ್ಕದ್ದಲ್ಲ.

ಸಿ) ರಾಜ್ಯ ಸಮನ್ವಯ ಸಮಿತಿಯ ಸಭೆಯನ್ನು ಮುಂದಿನ ದಿನಕ್ಕೆ ಮುಂದೂಡದೆ, ಸಭೆಯನ್ನು ನಡೆಸಬೇಕಾಗಿದ್ದ ದಿನದಿಂದ ಮತ್ತೊಂದು ದಿನಕ್ಕೆ ಮುಂದೂಡಿದರೆ ಮಾತ್ರ, ಅಂಥ ಸಭೆಯ ನೋಟೀಸನ್ನು ಉಪನಿಯಮ (4)ರಲ್ಲಿ ನಿರ್ದಿಷ್ಟಪಡಿಸಿದಂತೆ ಎಲ್ಲ ಸದಸ್ಯರಿಗೆ ನೀಡತಕ್ಕದ್ದು.

**6. ಅಧ್ಯಕ್ಷತೆ ವಹಿಸುವ ಅಧಿಕಾರಿ.–** ಅಧ್ಯಕ್ಷರು, ಅವರು ಹಾಜರಿದ್ದರೆ ರಾಜ್ಯ ಸಮನ್ವಯ ಸಮಿತಿಯ ಪ್ರತಿಯೊಂದು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಅವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು, ಆದರೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಇಬ್ಬರೂ ಯಾವುದೇ ಸಭೆಯಿಂದ ಗೈರುಹಾಜರಾಗಿದ್ದಾಗ ಹಾಜರಿರುವ ಸದಸ್ಯರು ಸಭೆಯ ಅಧ್ಯಕ್ಷತೆ ವಹಿಸಲು (ಇದರಲ್ಲಿ ಇನ್ನು ಮುಂದೆ ಅಧ್ಯಕ್ಷತೆ ವಹಿಸುವ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ) ಸದಸ್ಯರುಗಳ ಪೈಕಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.

**7. ಕೋರಂ.–** 1) ಯಾವುದೇ ಸಭೆಯ ಕೋರಂ ಒಟ್ಟು ಸದಸ್ಯರ ಮೂರನೇ ಒಂದು ಭಾಗದಷ್ಟು ಇರತಕ್ಕದ್ದು.

2) ಯಾವುದೇ ಸಭೆಯನ್ನು ನಿಗದಿಪಡಿಸಿದ ಕಾಲದಲ್ಲಿ ಅಥವಾ ಯಾವುದೇ ಸಭೆಯ ಅವಧಿಯಲ್ಲಿ ಹಾಜರಿರುವ ಒಟ್ಟು ಸದಸ್ಯರಲ್ಲಿ ಮೂರನೇ ಒಂದು ಭಾಗಕ್ಕಿಂತ ಕಡಿಮೆ ಇದ್ದರೆ, ಅಧ್ಯಕ್ಷತೆ ವಹಿಸಿರುವ ಅಧ್ಯಕ್ಷರು ಮುಂದಿನ ಕೆಲವು ಗಂಟೆಗಳಿಗೆ ಅಥವಾ ಅವರು ಸೂಕ್ತವೆಂದು ಭಾವಿಸುವಂಥ ಇತರ ಮುಂದಿನ ದಿನಾಂಕಕ್ಕೆ ಸಭೆಯನ್ನು ಮುಂದೂಡಬಹುದು.

3) ಮುಂದಕ್ಕೆ ಹಾಕಲಾದ ಸಭೆಗೆ ಯಾವುದೇ ಕೋರಂನ ಅವಶ್ಯಕತೆ ಇರತಕ್ಕದ್ದಲ್ಲ.

4) ಮೂಲ ಸಭೆಯ ಕಾರ್ಯಸೂಚಿಯಲ್ಲಿ ಸೇರಿಸಿಲ್ಲದ ವಿಷಯವನ್ನು ಅಂಥ ಮುಂದೂಡಿದ ಸಭೆಯಲ್ಲಿ ಚರ್ಚಿಸತಕ್ಕದ್ದಲ್ಲ.

5) (ಎ) ರಾಜ್ಯ ಸಮನ್ವಯ ಸಮಿತಿಯ ಸಭೆಯು ಕೋರಂ ಇಲ್ಲದೆ ಮುಂದಿನ ದಿನಕ್ಕೆ ಮುಂದೂಡಿದಾಗ, ಅಂಥ ಮುಂದೂಡಿದ ಸಭೆಯ ನೋಟೀಸನ್ನು ದೂರವಾಣಿ ಮೂಲಕವಾಗಲಿ ಅಥವಾ ವಿಶೇಷ ಸಂದೇಶ ವಾಹಕನ ಮೂಲಕವಾಗಲಿ ಹಾಗೆ ಮುಂದೂಡಿದ ಸಭೆ ನಡೆಯುವ ನಗರ, ಪಟ್ಟಣ ಅಥವಾ ಇತರೆ ಸ್ಥಳಗಳಲ್ಲಿರುವ ಸದಸ್ಯರಿಗೆ ನೀಡತಕ್ಕದ್ದು. ಮತ್ತು ಇತರೆ ಸದಸ್ಯರಿಗೆ ಮುಂದೂಡಿದ ಸಭೆಯ ನೋಟೀಸನ್ನು ನೀಡುವ ಅವಶ್ಯಕತೆ ಇರತಕ್ಕದ್ದಲ್ಲ.

(ಬಿ) ರಾಜ್ಯ ಸಮನ್ವಯ ಸಮಿತಿಯ ಸಭೆಯನ್ನು ಕೋರಂ ಇಲ್ಲದೆ ಮುಂದಿನ ದಿನಕ್ಕೆ ಆದರೆ ಇತರೆ ದಿನಾಂಕಕ್ಕೆ ಉಪನಿಯಮ (2)ರ ಮೇರೆಗೆ ಮುಂದೂಡಿದಲ್ಲಿ, ಅಂಥ ಮುಂದೂಡಿದ ಸಭೆಯ ನೋಟೀಸನ್ನು 5ನೇ ನಿಯಮದ (4)ನೇ ಉಪನಿಯಮದಲ್ಲಿ ಉಪಬಂಧಿಸಿರುವಂತೆ ಎಲ್ಲ ಸದಸ್ಯರಿಗೆ ನೀಡತಕ್ಕದ್ದು.

**8. ನಡವಳಿಕೆಗಳು.–** 1) ಸದಸ್ಯ –ಕಾರ್ಯದರ್ಶಿಯು ಸಭೆಗೆ ಹಾಜರಾಗುವ ಸದಸ್ಯರ ಹೆಸರು ಮತ್ತು ಸಭೆಯಲ್ಲಿನ ವ್ಯವಹರಣೆಗಳನ್ನು, ಆ ಉದ್ದೇಶಕ್ಕಾಗಿ ನಿಯೋಜಿಸಲಾದ ಪುಸ್ತಕದಲ್ಲಿ ದಾಖಲಿಸತಕ್ಕದ್ದು.

2) ಹಿಂದಿನ ಸಭೆಯ ನಡಾವಳಿಗಳನ್ನು ಪ್ರತಿಯೊಂದು ನಂತರದ ಸಭೆಯ ಪ್ರಾರಂಭದಲ್ಲಿ ಓದತಕ್ಕದ್ದು ಮತ್ತು ಅಂಥ ಸಭೆಯ ಅಧ್ಯಕ್ಷತೆ ವಹಿಸಿರುವವರು ಅದನ್ನು ಸ್ಥಿರೀಕರಿಸತಕ್ಕದ್ದು ಮತ್ತು ಸಹಿ ಮಾಡತಕ್ಕದ್ದು.

3) ವ್ಯವಹರಣೆಗಳನ್ನು ಕಚೇರಿ ವೇಳೆಯಲ್ಲಿ ಸದಸ್ಯ ಕಾರ್ಯದರ್ಶಿಯವರ ಕಚೇರಿಯಲ್ಲಿ ಯಾರೇ ಸದಸ್ಯರ ಪರಿಶೀಲನೆಗೆ ಮುಕ್ತವಾಗಿಡತಕ್ಕದ್ದು.

**9. ಸಭೆಯ ಆದೇಶವನ್ನು ಪಾಲಿಸುವುದು.–** ಅಧ್ಯಕ್ಷರು ಸಭೆಯ ಆದೇಶವನ್ನು ಪಾಲಿಸತಕ್ಕದ್ದು.

**10. ಸಭೆಯಲ್ಲಿ ವ್ಯವಹರಿಸಬೇಕಾದ ಕಾರ್ಯಕಲಾಪ .–** ಅಧ್ಯಕ್ಷರ ಅನುಮತಿಯ ಹೊರತು, ಕಾರ್ಯಸೂಚಿಯಲ್ಲಿ ನಮೂದಿಸಿದ ಅಥವಾ 5ನೇ ನಿಯಮದ (5)ನೇ ಉಪನಿಯಮದ ಅಡಿಯಲ್ಲಿ ಸದಸ್ಯರು ನೋಟೀಸು ನೀಡಿದ ವಿಷಯಗಳನ್ನು ಯಾವುದೇ ಸಭೆಯಲ್ಲಿ ವ್ಯವಹರಿಸತಕ್ಕದ್ದಲ್ಲ.

**11. ಕಾರ್ಯಸೂಚಿ.–** ಯಾವುದೇ ಸಭೆಯಲ್ಲಿ, ಅಧ್ಯಕ್ಷರ ಅನುಮತಿ ಪಡೆದು ಸಭೆಯಲ್ಲಿ ಅನ್ಯಥಾ ನಿರ್ಣಯಿಸಿದ ಹೊರತು, ಕಾರ್ಯಸೂಚಿಯಲ್ಲಿ ನಮೂದಿಸಿದ ಕ್ರಮದಲ್ಲಿಯೇ ವ್ಯವಹರಿಸತಕ್ಕದ್ದು.

**12. ಬಹುಮತದ ಮೂಲಕ ತೀರ್ಮಾನ .–** ಸಮಿತಿಯ ಸಭೆಯಲ್ಲಿ ಪರಿಗಣಿತವಾಗುವ ಎಲ್ಲ ಪ್ರಶ್ನೆಗಳು ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಬಹುಮತದ ಮೂಲಕ ತೀರ್ಮಾನವಾಗತಕ್ಕದ್ದು ಮತ್ತು ಸಮಾನ ಮತಗಳ ಸಂದರ್ಭದಲ್ಲಿ, ಅಧ್ಯಕ್ಷರು ನಿರ್ಣಾಯಕ ಮತ ಚಲಾಯಿಸತಕ್ಕದ್ದು.

## ಅಧ್ಯಾಯ – III

## ರಾಜ್ಯ ಕಾರ್ಯನಿರ್ವಾಹಕ ಸಮಿತಿ

**13. ದಿನಭತ್ಯೆ ಮತ್ತು ಪ್ರವಾಸ ಭತ್ಯೆ .–** 1. 13ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ನಾಮನಿರ್ದೇಶನಗೊಂಡ ಸದಸ್ಯರು ಕರ್ನಾಟಕ ಸಿವಿಲ್ ಸೇವೆಗಳ ನಿಯಮಾವಳಿಯ ಅನುಬಂಧ–ಎ ಯಲ್ಲಿ ನಿರ್ದಿಷ್ಟಪಡಿಸಿದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

2. ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಅಧಿಕಾರೇತರ ಸದಸ್ಯರಿಗೆ ಕರ್ನಾಟಕ ಸಿವಿಲ್ ಸೇವಾ ನಿಯಮಾವಳಿಯ ಅನುಬಂಧ–ಎಯಲ್ಲಿ ನಿರ್ದಿಷ್ಟಪಡಿಸಿರುವ ದಿನಭತ್ಯೆ, ಪ್ರವಾಸಭತ್ಯೆ ಮತ್ತು ಸಮಾವೇಶನ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

**14. ಸಭೆಗಳ ನೋಟೀಸು.–** 1. ರಾಜ್ಯ ಕಾರ್ಯನಿರ್ವಾಹಕಸಮಿತಿಯ ಸಭೆಗಳು ಸಾಮಾನ್ಯವಾಗಿ ಅಧ್ಯಕ್ಷರು ನಿಗದಿಪಡಿಸಬಹುದಾದಂಥ ದಿನಾಂಕದಂದು ರಾಜ್ಯ ಕೇಂದ್ರ ಸ್ಥಾನದಲ್ಲಿ ನಡೆಯತಕ್ಕದ್ದು :

ಆದರೆ, ಕನಿಷ್ಠ ಪ್ರತಿ ಮೂರು ತಿಂಗಳಿಗೊಮ್ಮೆ ಅದು ಸಭೆ ಸೇರತಕ್ಕದ್ದು.

2. ಅಧ್ಯಕ್ಷರು, ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಕನಿಷ್ಠ ಹತ್ತು ಜನ ಸದಸ್ಯರಿಗಿಂತ ಕಡಿಮೆ ಇಲ್ಲದಂತೆ ಲಿಖಿತದಲ್ಲಿ ಕೋರಿಕೆಯನ್ನು ಪಡೆದ ಮೇಲೆ ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ವಿಶೇಷ ಸಭೆ ಕರೆಯತಕ್ಕದ್ದು.

3. ಯಾವುದೇ ಸಾಮಾನ್ಯ ಸಭೆಗೆ 15 ಪೂರ್ಣ ದಿನಗಳ ನೋಟೀಸನ್ನು ಮತ್ತು ವಿಶೇಷ ಸಭೆಗೆ 5 ಪೂರ್ಣ ದಿನಗಳ ನೋಟೀಸನ್ನು ನೀಡಿ ಅಂಥ ಸಭೆ ನಡೆಯಬೇಕಾದ ಸ್ಥಳ ಮತ್ತು ಕಾಲವನ್ನು ಮತ್ತು ಅಲ್ಲಿ ನಡೆಸಬೇಕಾದ ವ್ಯವಹಾರಗಳನ್ನು ಅದರಲ್ಲಿ ನಿರ್ದಿಷ್ಟಪಡಿಸುವಂತೆ ಸದಸ್ಯ ಕಾರ್ಯದರ್ಶಿಯು ಸದಸ್ಯರಿಗೆ ಸೂಚನೆ ನೀಡತಕ್ಕದ್ದು.

4. ಸಭೆಯ ನೋಟೀಸನ್ನು ಸದಸ್ಯರಿಗೆ ಸಂದೇಶ ವಾಹಕನ ಮೂಲಕ ಅಥವಾ ಅವನು ವಾಸಸ್ಥಳದ ಕಡೆಯದಾಗಿ ವಾಸಿಸುತ್ತಿದ್ದನೆಂದು ತಿಳಿದುಬಂದಿರುವ ಸ್ಥಳಕ್ಕೆ ಅಥವಾ ವ್ಯವಹಾರ ಸ್ಥಳಕ್ಕೆ ನೋಂದಾಯಿತ ಅಂಚೆಯ ಮೂಲಕ ಅಥವಾ ಅಧ್ಯಕ್ಷರು ಪ್ರಕರಣದ ಸನ್ನಿವೇಶದಲ್ಲಿ ಸೂಕ್ತವೆಂದು ಭಾವಿಸುವಂಥ ಇತರ ರೀತಿಯಲ್ಲಾಗಲೀ ಕಳುಹಿಸತಕ್ಕದ್ದು.

5. ಯಾರೇ ಸದಸ್ಯನು, ಸದಸ್ಯ ಕಾರ್ಯದರ್ಶಿಗೆ ಹತ್ತು ಪೂರ್ಣ ದಿನಗಳಿಗೆ ಮೊದಲು ನೋಟೀಸನ್ನು ನೀಡದೆ ಯಾವುದೇ ವಿಷಯವನ್ನು ಸಭೆಯ ಮುಂದೆ ಪರಿಗಣನೆಗೆ ತರಲು ಅಧ್ಯಕ್ಷರು ವಿವೇಚನಾನುಸಾರ ಅನುಮತಿ ನೀಡಿದ ಹೊರತು ಹಾಗೆ ಮಾಡಲು ಅರ್ಹನಾಗಿರತಕ್ಕದ್ದಲ್ಲ.

6. (ಎ) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ಮುಂದಿನ ದಿನಕ್ಕೆ ಅಥವಾ ಯಾವುದೇ ನಿರ್ದಿಷ್ಟಪಡಿಸಿದ ದಿನಕ್ಕೆ ಅದರ ಸಭೆಗಳನ್ನು ಮುಂದೂಡಬಹುದು.

(ಬಿ) ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಸಭೆಯನ್ನು ಮುಂದಿನ ದಿನಕ್ಕೆ ಮುಂದೂಡಿದಲ್ಲಿ, ಸಭೆಯ ಅಂಥ ಮುಂದೂಡಿಕೆಯ ನೋಟೀಸನ್ನು ನಗರ, ಪಟ್ಟಣ ಅಥವಾ ಇತರ ಸ್ಥಳದಲ್ಲಿರುವ ಸದಸ್ಯರಿಗೆ ದೂರವಾಣಿ ಮೂಲಕವಾಗಲಿ ಅಥವಾ ವಿಶೇಷ ಸಂದೇಶವಾಹಕನ ಮೂಲಕವಾಗಲಿ ನೀಡತಕ್ಕದ್ದು. ಇತರ ಸದಸ್ಯರಿಗೆ ಮುಂದೂಡಿಕೆಯ ನೋಟೀಸನ್ನು ನೀಡುವ ಅವಶ್ಯಕತೆ ಇರತಕ್ಕದ್ದಲ್ಲ.

(ಸಿ) ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಸಭೆಯನ್ನು ಮುಂದಿನ ದಿನಕ್ಕೆ ಮುಂದೂಡದೆ, ಸಭೆಯನ್ನು ನಡೆಸಬೇಕಾಗಿದ್ದ ದಿನದಿಂದ ಮತ್ತೊಂದು ದಿನಕ್ಕೆ ಮುಂದೂಡಿದರೆ ಮಾತ್ರ, ಅಂಥ ಸಭೆಯ ನೋಟೀಸನ್ನು ಉಪನಿಯಮ (4)ರಲ್ಲಿ ನಿರ್ದಿಷ್ಟಪಡಿಸಿದಂತೆ ಎಲ್ಲ ಸದಸ್ಯರಿಗೆ ನೀಡತಕ್ಕದ್ದು.

**15.** ಅಧ್ಯಕ್ಷತೆ ವಹಿಸುವ ಅಧಿಕಾರಿ.- ಅಧ್ಯಕ್ಷರು, ಅವರು ಹಾಜರಿದ್ದರೆ ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಪ್ರತಿಯೊಂದು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು, ಮತ್ತು ಅವರ ಗೈರು ಹಾಜರಿಯಲ್ಲಿ ಸಭೆಯ ಅಧ್ಯಕ್ಷತೆ ವಹಿಸಲು ಹಾಜರಿರುವ ಸದಸ್ಯರುಗಳ ಪೈಕಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. ಅಧ್ಯಕ್ಷರನ್ನು ಇದರಲ್ಲಿ ಇನ್ನು ಮುಂದೆ ಅಧ್ಯಕ್ಷತೆ ವಹಿಸುವ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ.

**16.** ಕೋರಂ.- 1. ಯಾವುದೇ ಸಭೆಗೆ ಒಟ್ಟು ಸದಸ್ಯರ ಮೂರನೇ ಒಂದರಷ್ಟು ಕೋರಂ ಇರಬೇಕು.

2. ಯಾವುದೇ ಸಭೆ ನಿಗದಿಪಡಿಸಿದ ಸಮಯದಲ್ಲಿ ಅಥವಾ ಯಾವುದೇ ಸಭೆ ನಡೆಯುತ್ತಿರುವಾಗ ಒಟ್ಟು ಸದಸ್ಯರ ಮೂರನೇ ಒಂದಕ್ಕಿಂತ ಕಡಿಮೆ ಸದಸ್ಯರು ಹಾಜರಿದ್ದರೆ, ಅಧ್ಯಕ್ಷರು ಮರುದಿನ ತಾವು ನಿಗದಿಪಡಿಸಬಹುದಾದಂಥ ಸಮಯದವರೆಗೆ ಅಥವಾ ಮುಂದಿನ ದಿನಾಂಕದವರೆಗೆ ಮುಂದೂಡಬಹುದು.

3. ಮುಂದೂಡಿದ ಸಭೆಗೆ ಯಾವುದೇ ಕೋರಂನ ಅಗತ್ಯವಿರತಕ್ಕದ್ದಲ್ಲ.

4. ಮೂಲಸಭೆಯ ಕಾರ್ಯಸೂಚಿಯಲ್ಲಿ ಇರದಿದ್ದ ಯಾವುದೇ ವಿಷಯವನ್ನು ಅಂಥ ಮುಂದೂಡಿದ ಸಭೆಯಲ್ಲಿ ಚರ್ಚಿಸತಕ್ಕದ್ದಲ್ಲ.

5. (ಎ) ರಾಜ್ಯ ಕಾರ್ಯಕಾರಿ ಸಮಿತಿಯ ಸಭೆಯನ್ನು ಕೋರಂ ಇಲ್ಲದ ಕಾರಣಕ್ಕಾಗಿ (2)ನೇ ಉಪನಿಯಮದಡಿಯಲ್ಲಿ ಮುಂದಿನ ದಿನಕ್ಕೆ ಮುಂದೂಡಿದಾಗ ಹಾಗೆ ಮುಂದೂಡಿದ ಸಭೆಯು ನಡೆಯುವ ನಗರ, ಪಟ್ಟಣ ಅಥವಾ ಇತರ ಸ್ಥಳದಲ್ಲಿ ಲಭ್ಯರಿರುವ ಸದಸ್ಯರಿಗೆ ದೂರವಾಣಿ ಮೂಲಕವಾಗಲೀ ಅಥವಾ ವಿಶೇಷ ಸಂದೇಶವಾಹಕನ ಮೂಲಕವಾಗಿಯಾಗಲೀ ಅಂಥ ಮುಂದೂಡಿದ ಸಭೆಯ ನೋಟೀಸು ನೀಡತಕ್ಕದ್ದು ಮತ್ತು ಇತರ ಸದಸ್ಯರಿಗೆ ಮುಂದೂಡಿದ ಸಭೆಯ ನೋಟೀಸು ನೀಡಬೇಕಾದ ಅವಶ್ಯಕತೆ ಇಲ್ಲ.

(ಬಿ) ರಾಜ್ಯ ಕಾರ್ಯಕಾರಿ ಸಮಿತಿಯ ಸಭೆಯನ್ನು ಕೋರಂ ಇಲ್ಲದ ಕಾರಣಕ್ಕಾಗಿ ಸಾಕಷ್ಟು ಸಮಯ ಕೊಟ್ಟು ಮುಂದಿನ ದಿನಾಂಕಕ್ಕೆ ಮುಂದೂಡಿದಾಗ, ಮುಂದೂಡಿದ ಸಭೆಯ ನೋಟೀಸನ್ನು 14ನೇ ನಿಯಮದ (4)ನೇ ಉಪನಿಯಮದಲ್ಲಿ ಉಪಬಂಧಿಸಿರುವ ಎಲ್ಲಾ ಸದಸ್ಯರಿಗೂ ನೀಡತಕ್ಕದ್ದು.

**17.** ನಡವಳಿಗಳು.- 1. ದಾಖಲೆಯು ಸಭೆಯಲ್ಲಿ ಭಾಗವಹಿಸಿದ ಸದಸ್ಯರ ಹೆಸರುಗಳು ಮತ್ತು ಸಭೆಯ ವ್ಯವಹಾರಗಳನ್ನು ಒಳಗೊಂಡಿದ್ದು ಅದನ್ನು ಸದಸ್ಯ-ಕಾರ್ಯದರ್ಶಿ ಆ ಉದ್ದೇಶಕ್ಕಾಗಿ ನಿರ್ವಹಿಸಿರುವ ಪುಸ್ತಕದಲ್ಲಿ ನಿರ್ವಹಿಸತಕ್ಕದ್ದು.

2. ಹಿಂದಿನ ಸಭೆಯ ನಡವಳಿಗಳನ್ನು ಮುಂದಿನ ಪ್ರತಿಯೊಂದು ಸಭೆಯ ಪ್ರಾರಂಭವಾಗುವಾಗ ಓದತಕ್ಕದ್ದು ಮತ್ತು ಅದಕ್ಕೆ ಅಂಥ ಸಭೆಯ ಅಧ್ಯಕ್ಷರು ಸ್ಥಿರೀಕರಿಸಿ ಸಹಿ ಮಾಡತಕ್ಕದ್ದು.

3. ಈ ನಡವಳಿಗಳನ್ನು ಯಾರೇ ಸದಸ್ಯರು ಪರಿವೀಕ್ಷಣೆ ಮಾಡುವುದಕ್ಕಾಗಿ ಸದಸ್ಯ-ಕಾರ್ಯದರ್ಶಿಯವರ ಕಚೇರಿಯಲ್ಲಿ ಮುಕ್ತವಾಗಿರಿಸತಕ್ಕದ್ದು.

**18.** ಸಭೆಗಳಲ್ಲಿ ಕ್ರಮಬದ್ಧತೆಯನ್ನು ಪಾಲಿಸುವುದು .- ಅಧ್ಯಕ್ಷರು ಸಭೆಗಳಲ್ಲಿ ಕ್ರಮಬದ್ಧತೆಯನ್ನು ಪಾಲಿಸತಕ್ಕದ್ದು.

**19.** ಸಭೆಯು ನಿರ್ವಹಿಸಬೇಕಾದ ವ್ಯವಹರಣೆಗಳು.- ಯಾವುದೇ ಸಭೆಯಲ್ಲಿ ಅಧ್ಯಕ್ಷರ ಅನುಮತಿಯ ಮೇರೆಗೆ ಅನ್ಯಥಾ ನಿರ್ಣಯಿಸಿದ ಹೊರತು, ವ್ಯವಹರಣೆಯನ್ನು ಅದು ಕಾರ್ಯಸೂಚಿಯಲ್ಲಿ ದಾಖಲಿಸಿರುವ ಕ್ರಮದಲ್ಲಿಯೇ ನಿರ್ವಹಿಸತಕ್ಕದ್ದು.

**20.** ಬಹುಮತದ ಮೂಲಕ ತೀರ್ಮಾನ.- ಸಮಿತಿಯಲ್ಲಿ ಪರಿಶೀಲಿಸಲಾದ ಎಲ್ಲಾ ಪ್ರಶ್ನೆಗಳಿಗೆ ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಬಹುಮತವನ್ನು ಆಧರಿಸಿ ನಿರ್ಣಯಿಸಬೇಕು ಮತ್ತು ಸಮಾನವಾಗಿ ಮತಗಳು ಬಿದ್ದಾಗ ಅಧ್ಯಕ್ಷರು ತಮ್ಮ ನಿರ್ಣಾಯಕ ಮತ ಚಲಾಯಿಸತಕ್ಕದ್ದು.

**21.** ರಾಜ್ಯ ಕಾರ್ಯಕಾರಿ ಸಮಿತಿಗೆ ವ್ಯಕ್ತಿಗಳನ್ನು ಸಹ ಸದಸ್ಯನಾಗಿ ಸೇರಿಸಿಕೊಳ್ಳುವ ವಿಧಾನ ಮತ್ತು ಉದ್ದೇಶ .- 1. ರಾಜ್ಯ ಕಾರ್ಯಕಾರಿ ಸಮಿತಿಯು, ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವುದರಲ್ಲಿ ಯಾರೇ ವ್ಯಕ್ತಿಯ ನೆರವು ಅಥವಾ ಮಾರ್ಗದರ್ಶನ

ಅಗತ್ಯವಾಗಿದೆಯೆಂದು ಭಾವಿಸಿದರೆ ಅವರ ಯಾವುದೇ ಸಭೆಯ ಚರ್ಚೆಗಳಲ್ಲಿ ಆತ ಭಾಗವಹಿಸುವಂತೆ ಆಹ್ವಾನಿಸಬಹುದು.

2. (1)ನೇ ಉಪನಿಯಮದ ಅಡಿಯಲ್ಲಿ ರಾಜ್ಯ ಕಾರ್ಯಕಾರಿ ಸಮಿತಿಗೆ ಹಾಗೆ ಸಹ ಸದಸ್ಯನಾದ ವ್ಯಕ್ತಿಯು ಅಧಿಕಾರೇತರ ಸದಸ್ಯನಾಗಿದ್ದರೆ ಆತನಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ಅನುಬಂಧ-ಎನಲ್ಲಿ ನಿರ್ದಿಷ್ಟಪಡಿಸಿರುವಂತೆ ದಿನಭತ್ಯೆ, ಪ್ರಯಾಣಭತ್ಯೆ ಮತ್ತು ಸಭಭತ್ಯೆಗಳನ್ನು ನೀಡತಕ್ಕದ್ದು.

3. ಅಂಥ ವ್ಯಕ್ತಿಯು, ರಾಜ್ಯ ಕೇಂದ್ರ ಕಾರ್ಯಸ್ಥಾನದ ನಿವಾಸಿಯಲ್ಲದಿದ್ದರೆ ಆತನಿಗೆ ಹಾಗೆ ನಡೆಯುವ ಸಭೆಯ ಪ್ರತಿಯೊಂದು ದಿನಕ್ಕೂ ರಾಜ್ಯ ಸರ್ಕಾರದ ಗ್ರೂಪ್-ಎ ಅಧಿಕಾರಿಗೆ ಅನುಮತಿಸಿರುವಷ್ಟು ದಿನಭತ್ಯೆ ಮತ್ತು ಪ್ರಯಾಣಭತ್ಯೆಯನ್ನು ಸಂದಾಯ ಮಾಡತಕ್ಕದ್ದು.

4. ಅಂಥ ವ್ಯಕ್ತಿಯು ಸರ್ಕಾರಿ ನೌಕರ ಅಥವಾ ರಾಜ್ಯ ಸರ್ಕಾರಿ ಉದ್ಯಮದ ನೌಕರನಾಗಿದ್ದ ಪಕ್ಷದಲ್ಲಿ ಆತ, ಅದೇ ಪ್ರಯಾಣ ಅಥವಾ ತಂಗುವಿಕೆಗೆ ಸಂಬಂಧಿಸಿದಂತೆ ಯಾವುದೇ ಇತರ ಸರ್ಕಾರಿ ಮೂಲಗಳಿಂದ ಯಾವುದೇ ಅಂಥ ಭತ್ಯೆಯನ್ನು ಪಡೆದಿಲ್ಲವೆಂದು ಆತ ಪ್ರಮಾಣಪತ್ರ ಹಾಜರುಪಡಿಸುವುದರ ಮೇಲೆ ಆತನಿಗೆ ಅನ್ವಯಿಸುವ ಸಂಬಂಧಪಟ್ಟ ನಿಯಮಗಳ ಅಡಿಯಲ್ಲಿ ಅನುಮತಿಸಿರುವ ದರಗಳಲ್ಲಿ ಮಾತ್ರ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

**22.** ಸಹಸದಸ್ಯನಿಗೆ ಸಂಬಂಧಿಸಿದ ಶುಲ್ಕ.– ನಿಯಮ 21ರಲ್ಲಿ ಏನೇ ಇದ್ದರೂ, ರಾಜ್ಯ ಕಾರ್ಯಕಾರಿ ಸಮಿತಿಯು ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ 22ನೇ ಪ್ರಕರಣದ ಅಡಿಯಲ್ಲಿ ವಹಿಸಿಕೊಟ್ಟಿರುವ ಕಾರ್ಯದ ಸ್ವರೂಪ ಮತ್ತು ಸಹ ಸದಸ್ಯನಾಗಿ ಸೇರಿಸಿಕೊಂಡಿರುವ ವ್ಯಕ್ತಿಯ ವಿದ್ಯಾರ್ಹತೆ ಮತ್ತು ಅನುಭವಗಳನ್ನಾಧರಿಸಿ ಯುಕ್ತವೆಂದು ನಿರ್ಧರಿಸಬಹುದಾದಷ್ಟು ಶುಲ್ಕವನ್ನು ಸಮಿತಿಗೆ ಸೇರಿಸಿಕೊಂಡ ವ್ಯಕ್ತಿಗೆ ಪಾವತಿಸಬಹುದು.

ಆದರೆ, ರಾಜ್ಯ ಕಾರ್ಯಕಾರಿ ಸಮಿತಿಯು, ಸಹ ಸದಸ್ಯನಾಗಿ ಸೇರಿಸಿಕೊಳ್ಳುವಿಕೆಯ ಅವಧಿ ನಾಲ್ಕು ತಿಂಗಳಿಗಿಂತ ಹೆಚ್ಚಾಗುವಂತಿದ್ದರೆ ಅಥವಾ ಆತನಿಗೆ ಸಂದಾಯಿಸಬೇಕಿರುವ ಶುಲ್ಕ ತಿಂಗಳಿಗೆ ಮೂರು ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗುವಂತಿದ್ದರೆ ರಾಜ್ಯ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ಯಾರೇ ವ್ಯಕ್ತಿಯನ್ನು ಸೇರಿಸಿಕೊಳ್ಳತಕ್ಕದ್ದಲ್ಲ.

## ಅಧ್ಯಾಯ –IV

### ಉದ್ಯೋಗ

**23.** ಖಾಲಿಹುದ್ದೆಗಳನ್ನು ಲೆಕ್ಕ ಹಾಕುವುದು.– ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಅಸಮತೆಯನ್ನು ಹೊಂದಿರುವ ವ್ಯಕ್ತಿಗಳಿಗೆ ಸಂಬಂಧಿಸಿದ ಖಾಲಿ ಹುದ್ದೆಗಳನ್ನು ಲೆಕ್ಕ ಹಾಕುವುದಕ್ಕೆ ಅನ್ವಯಿಸತಕ್ಕದ್ದು.

**24.** ವಿಶೇಷ ಉದ್ಯೋಗ ವಿನಿಮಯಕ್ಕೆ ಕೇಂದ್ರಗಳಿಗೆ ಸಂಬಂಧಿಸಿದಂತೆ ಖಾಲಿ ಹುದ್ದೆಗಳ ಅಧಿಸೂಚನೆ.–

1. ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರವು ಸಮುಚಿತವಾಗಿರುವಾಗ ಅಂಥ ರಾಜ್ಯ ಸರ್ಕಾರದ ಸಂಬಂಧದಲ್ಲಿನ ಸ್ಥಾಪನೆಗಳಲ್ಲಿ ಉಂಟಾಗುವ ತಾಂತ್ರಿಕ ಮತ್ತು ವೈಜ್ಞಾನಿಕ ಸ್ವರೂಪದ ಹುದ್ದೆಗಳ ಖಾಲಿ ಹುದ್ದೆಗಳನ್ನು ರಾಜ್ಯ ಸರ್ಕಾರ ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಶೇಷ ಉದ್ಯೋಗ ವಿನಿಮಯ ಕೇಂದ್ರಗಳಿಗೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಬಹುದು.
2. (1)ನೇ ಉಪನಿಯಮದಲ್ಲಿ ನಿರ್ದಿಷ್ಟಪಡಿಸಿರುವುಗಳನ್ನು ಹೊರತುಪಡಿಸಿ, ಇತರ ಖಾಲಿಹುದ್ದೆಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಸ್ಥಳೀಯ ವಿಶೇಷ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಅಧಿಸೂಚನೆ ಹೊರಡಿಸತಕ್ಕದ್ದು.
3. ಈ ನಿಯಮಗಳು ಜಾರಿಯಾದ ತರುವಾಯ ರಾಜ್ಯದಲ್ಲಿನ ಸಾರ್ವಜನಿಕ ವಲಯದ ಪ್ರತಿಯೊಂದು ಉದ್ಯಮ ಸಂಸ್ಥೆಯ ನಿಯೋಜಕರ ಸಂಸ್ಥೆಯಲ್ಲಿರುವ ಯಾವುದೇ ಖಾಲಿಹುದ್ದೆಗಳನ್ನು ತುಂಬುವುದಕ್ಕೆ ಮೊದಲು ಆ ಖಾಲಿ ಹುದ್ದೆಯನ್ನು ಸಂಬಂಧಪಟ್ಟ ವಿಶೇಷ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಅಧಿಸೂಚಿಸತಕ್ಕದ್ದು.



8

**25.** ಅಂಗವಿಕಲರಿಗಾಗಿ ಮೀಸಲಿರಿಸಿರುವ ಖಾಲಿ ಹುದ್ದೆಗಳನ್ನು ತುಂಬುವ ಅಧಿಸೂಚನೆಯನ್ನು ಹೊರಡಿಸುವ ರೀತಿ ಮತ್ತು ವಿಧಾನ .– ಅಂಗವಿಕಲರಿಗೆ ಮೀಸಲಿರಿಸಿರುವ ಖಾಲಿ ಹುದ್ದೆಗಳನ್ನು ಸಾಧ್ಯವಿರುವೆಡೆಗಳಲ್ಲಿ ಪ್ರತಿಯೊಂದು ವಿಧದ ಖಾಲಿಹುದ್ದೆಗೆ ಸಂಬಂಧಿಸಿದಂತೆಯೂ ನಮೂನೆ-IIರಲ್ಲಿ ವಿವರಗಳನ್ನು ತುಂಬಿ ಸಮುಚಿತ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಲಿಖಿತ ರೂಪದಲ್ಲಿ ಅಧಿಸೂಚಿಸತಕ್ಕದ್ದು.

**26.** ಖಾಲಿಹುದ್ದೆಗಳನ್ನು ಅಧಿಸೂಚಿಸುವುದಕ್ಕೆ ಸಂಬಂಧಿಸಿದ ಕಾಲಮಿತಿ.– 1) 25ನೇ ನಿಯಮದ ಅಡಿಯಲ್ಲಿ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಅಧಿಸೂಚಿಸಬೇಕಿರುವ ಖಾಲಿ ಹುದ್ದೆಗಳನ್ನು, ಸಂದರ್ಶನಗಳನ್ನು ನಡೆಸುವಂಥ ಸಂದರ್ಭದಲ್ಲಿ ಅರ್ಜಿದಾರರನ್ನು ಸಂದರ್ಶಿಸುವ ಅಥವಾ ಪರೀಕ್ಷಿಸುವ ದಿನಾಂಕಕ್ಕಿಂತ ಕನಿಷ್ಠ ನಾಲ್ಕುವಾರ ಮುಂಚಿತವಾಗಿ, ಅಥವಾ ಸಂದರ್ಶನಗಳನ್ನು ನಡೆಸದಿರುವ ಸಂದರ್ಭದಲ್ಲಿ ಯಾವ ದಿನಾಂಕದಂದು ಖಾಲಿ ಹುದ್ದೆಗಳನ್ನು ತುಂಬಲು ಉದ್ದೇಶಿಸಲಾಗಿದೆಯೋ ಆ ದಿನಾಂಕದಂದು ಅಧಿಸೂಚಿಸತಕ್ಕದ್ದು.

2) ನಿಯೋಜಕನು, ಆಯ್ಕೆ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಆಯ್ಕೆ ಫಲಿತಾಂಶಗಳನ್ನು ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಒದಗಿಸತಕ್ಕದ್ದು.

**27.** ವರದಿ ಸಲ್ಲಿಕೆ.– ನಿಯೋಜಕನು, ಸ್ಥಳೀಯ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ನಮೂನೆ-III (ಡಿಪಿಇಆರ್-I)ರಲ್ಲಿ ತ್ರೈಮಾಸಿಕ ವರದಿಗಳನ್ನು ಮತ್ತು ನಮೂನೆ-IV (ಡಿಪಿಇಆರ್-II)ರಲ್ಲಿ ಅರ್ಧವಾರ್ಷಿಕ ವರದಿಗಳನ್ನು ಒದಗಿಸತಕ್ಕದ್ದು. ತ್ರೈಮಾಸಿಕ ವರದಿಗಳನ್ನು ಕೊನೆ ದಿನಾಂಕಗಳ ಮೂವತ್ತು ದಿನಗಳಷ್ಟು ಮುಂಚಿತವಾಗಿ ಎಂದರೆ 31ನೇ ಮಾರ್ಚ್, 30ನೇ ಜೂನ್, 30ನೇ ಸೆಪ್ಟೆಂಬರ್ ಮತ್ತು 31ನೇ ಡಿಸೆಂಬರ್‌ಗಳಂದು ಮತ್ತು ಅರ್ಧವಾರ್ಷಿಕ ವರದಿಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸಿರುವ ಕೊನೆಯ ದಿನಾಂಕಕ್ಕಿಂತ ಮೂವತ್ತು ದಿನಗಳೊಳಗಾಗಿ ಒದಗಿಸತಕ್ಕದ್ದು.

**28.** ನಿಯೋಜಕನು ನಿರ್ವಹಿಸಬೇಕಿರುವ ದಾಖಲೆಯ ನಮೂನೆ.– ನಿಯೋಜಕನು ಅಂಗವಿಕಲ ಉದ್ಯೋಗಿಗಳ ದಾಖಲೆಯನ್ನು ನಮೂನೆ-ೞ (ಡಿಪಿಇಆರ್-III)ರಲ್ಲಿ ನಿರ್ವಹಿಸತಕ್ಕದ್ದು.

## ಅಧ್ಯಾಯ-V

### ಅಂಗವಿಕಲ ವ್ಯಕ್ತಿಗಳ ಸಂಸ್ಥೆಗಳಿಗೆ- ಮಾನ್ಯತೆ ನೀಡುವುದು

**29.** ಅರ್ಜಿ ನಮೂನೆ.– ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ಸಂಸ್ಥೆಯ ನೋಂದಣಿ ಪ್ರಮಾಣಪತ್ರ ನೀಡುವುದಕ್ಕೆ ಸಂಬಂಧಿಸಿದ ಪ್ರತಿಯೊಂದು ಅರ್ಜಿಯನ್ನು ನಮೂನೆ-VI ರಲ್ಲಿ ಸಕ್ಷಮ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು.

**30.** ಪ್ರಮಾಣಪತ್ರ ನೀಡುವಿಕೆಯನ್ನು ನಿರಾಕರಿಸುವ ಆದೇಶ.– ಸಕ್ಷಮ ಪ್ರಾಧಿಕಾರಿಯು, ಪ್ರಮಾಣಪತ್ರ ನೀಡುವಿಕೆಯನ್ನು ನಿರಾಕರಿಸುವ ಆದೇಶವನ್ನು ಅರ್ಜಿದಾರನಿಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸತಕ್ಕದ್ದು.

**31.** ನೋಂದಾಯಿತ ಪ್ರಮಾಣಪತ್ರದ ಸಿಂಧುತ್ವ.–52ನೇ ಪ್ರಕರಣದ ಅಡಿಯಲ್ಲಿ ನೀಡಲಾದ ನೋಂದಣಿ ಪ್ರಮಾಣಪತ್ರವು 53ನೇ ಪ್ರಕರಣದ ಅಡಿಯಲ್ಲಿ ರದ್ದಾಗುವ ತನಕ ಮೂರು ವರ್ಷಗಳವರೆಗೆ ಚಾಲ್ತಿಯಲ್ಲಿರತಕ್ಕದ್ದು.

**32.** ಅಪೀಲು.– ಪ್ರಮಾಣಪತ್ರ ನೀಡುವುದಕ್ಕೆ ನಿರಾಕರಿಸಿ ಅಥವಾ ಪ್ರಮಾಣಪತ್ರ ರದ್ದುಪಡಿಸಿ ಸಕ್ಷಮ ಪ್ರಾಧಿಕಾರ ಹೊರಡಿಸಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಂಥ ನಿರಾಕರಣೆ ಅಥವಾ ರದ್ದುಪಡಿಸುವಿಕೆಯ ವಿರುದ್ಧವಾಗಿ ಮೂವತ್ತು ದಿನಗಳೊಳಗೆ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

## ಅಧ್ಯಾಯ-VI

ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ಆಯುಕ್ತರು

**33.** **ಆಯುಕ್ತರ ಸಂಬಳ ಮತ್ತು ಭತ್ಯೆ.–** ಅಂಗವಿಕಲರ ಆಯುಕ್ತರು ರಾಜ್ಯ ಸರ್ಕಾರದ ಕಾರ್ಯದರ್ಶಿಗೆ ದೊರೆಯುವಷ್ಟು ಸಂಬಳ, ಭತ್ಯೆ ಮತ್ತು ಇತರ ಸೌಲಭ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

**34.** **ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಕೆ.–** ಆಯುಕ್ತರು, 61ನೇ ಪ್ರಕರಣದ (ಡಿ) ಖಂಡದ ಅಡಿಯಲ್ಲಿ ಅಧಿನಿಯಮವನ್ನು ಜಾರಿಗೊಳಿಸಿದರ ಕುರಿತು, ನಮೂನೆ–vii ರಲ್ಲಿ ಒಂದು ಹಣಕಾಸು ವರ್ಷದಲ್ಲಿ ಕನಿಷ್ಠ ಎರಡು ವರದಿಗಳನ್ನು ಸಲ್ಲಿಸುವ ರೀತಿಯಲ್ಲಿ ಆರು ತಿಂಗಳ ಮಧ್ಯಂತರದಲ್ಲಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಬೇಕು.

**35.** **ವಾರ್ಷಿಕ ವರದಿ ಸಲ್ಲಿಕೆ.–** (1) ಆಯುಕ್ತರು, ಹಣಕಾಸು ವರ್ಷ ಅಂತ್ಯಗೊಂಡ ನಂತರ ಮತ್ತು ಮುಂದಿನ ವರ್ಷದಲ್ಲಿನ ಸೆಪ್ಟೆಂಬರ್ 30ಕ್ಕಿಂತ ಮುಂಚಿತವಾಗಿ ಸಾಧ್ಯವಾದಷ್ಟು ಬೇಗನೆ ನಮೂನೆ–VIIIರಲ್ಲಿ ಸದರಿ ಹಣಕಾಸು ವರ್ಷಾವಧಿಯಲ್ಲಿ ಆತ ನಿರ್ವಹಿಸಿದ ಕಾರ್ಯಚಟುವಟಿಕೆಗಳ ವಿವರಗಳನ್ನು ನೀಡಿರುವಂಥ ವಾರ್ಷಿಕ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕು.

2). ನಿರ್ದಿಷ್ಟವಾಗಿ, (1)ನೇ ಉಪನಿಯಮದಲ್ಲಿ ಹೇಳಿರುವ ವಾರ್ಷಿಕ ವರದಿಯು ಈ ಮುಂದಿನ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಿರಬೇಕು, ಎಂದರೆ:–

ಎ) ಮಂಡಲಿಯ ಸಿಬ್ಬಂದಿಯ ಅಧಿಕಾರಿಗಳ ಹೆಸರುಗಳು ಮತ್ತು ಸಂಸ್ಥೆಯ ರಚನೆಯನ್ನು ತೋರಿಸುವ ಕೋಷ್ಟಕ.

ಬಿ) 61 ಮತ್ತು 62ನೇ ಪ್ರಕರಣಗಳ ಅಡಿಯಲ್ಲಿ ಆಯುಕ್ತರಿಗೆ ಅಧಿಕಾರ ನೀಡಿರುವ ಪ್ರಕಾರ್ಯಗಳು ಮತ್ತು ಈ ಸಂಬಂಧದಲ್ಲಿ ಆಗಿರುವ ಕಾರ್ಯನಿರ್ವಹಣೆಯ ಮುಖ್ಯಾಂಶಗಳು.

ಸಿ) ಆಯುಕ್ತರು ಮಾಡಿರುವ ಪ್ರಮುಖ ಶಿಫಾರಸ್ಸುಗಳು.

ಡಿ) ಅಧಿನಿಯಮವನ್ನು ಜಾರಿಗೊಳಿಸುವುದರಲ್ಲಾಗಿರುವ ಪ್ರಗತಿ.

ಇ) ಆಯುಕ್ತರು ಸೇರಿಸಲು ಯುಕ್ತವೆಂದು ಭಾವಿಸಿರುವ ಯಾವುದೇ ಇತರ ವಿಷಯ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಆರ್.ಎಂ. ಚಂದ್ರಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸುವುದು ಮತ್ತು 1000 ಪ್ರತಿಗಳನ್ನು ಈ ಇಲಾಖೆಗೆ ಒದಗಿಸುವುದು.

ಪ್ರತಿಗಳು:

1. ಮಹಾಲೇಖಪಾಲರು, ಬೆಂಗಳೂರು.
2. ಭಾರತ ಸರ್ಕಾರದ ಕಾರ್ಯದರ್ಶಿ, ಸಾಮಾಜಿಕನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ಶಾಸ್ತ್ರಿ ಭವನ, ನವದೆಹಲಿ.
3. ಅಂಗವಿಕಲರ ಮುಖ್ಯ ಆಯುಕ್ತರು, ಸಾಮಾಜಿಕನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ಭಾರತ ಸರ್ಕಾರ, ದಾಸ್ ರಸ್ತೆ, ನವದೆಹಲಿ–110001.
4. ಅಂಗವಿಕಲ ವ್ಯಕ್ತಿಗಳ ಆಯುಕ್ತರು, ಕರ್ನಾಟಕ, ಸಂಖ್ಯೆ 40, ತಿಂಬುಚೆಟ್ಟಿ ರಸ್ತೆ, ಕಾಕ್ಸ್‌ಟೌನ್, ಬೆಂಗಳೂರು.
5. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

6. ನಿರ್ದೇಶಕರು, ಅಂಗವಿಕಲರ ಕಲ್ಯಾಣ ಇಲಾಖೆ, ಬೆಂಗಳೂರು.

7. ಜಿಲ್ಲಾ ಪುನರ್ವಸತಿ ಅಧಿಕಾರಿ, ಜಿಲ್ಲಾ ಪುನರ್ವಸತಿ ಕೇಂದ್ರ, ಮೈಸೂರು.

## ನಮೂನೆ-I
### (3ನೇ ನಿಯಮ ನೋಡಿ)

ಪ್ರಮಾಣ ಪತ್ರ ಸಂಖ್ಯೆ: ———— ದಿನಾಂಕ ————

### ಅಂಗವಿಕಲ ವ್ಯಕ್ತಿಗಳಿಗೆ ನೀಡುವ ಪ್ರಮಾಣಪತ್ರ

ಶ್ರೀ ———— ರವರ ಮಗ / ಮಗಳು / ಹೆಂಡತಿಯಾದ ಶ್ರೀ / ಶ್ರೀಮತಿ / ಕುಮಾರಿ ———— ವಯಸ್ಸು ————ವರ್ಷದವರಿದ್ದು ಅವರ ನೋಂದಣಿ ಸಂಖ್ಯೆ ———— ಇರುವ ಇವರು ದೈಹಿಕ ವಿಕಲತೆ / ದೃಷ್ಟಿ ದೋಷ / ವಾಕ್ ಮತ್ತು ಶ್ರವಣ ದೋಷವನ್ನು ಹೊಂದಿದ್ದಾರೆ. ಅವನ / ಅವಳ ದೈಹಿಕ ವೈಕಲ್ಯ / ದೃಷ್ಟಿದೋಷ / ವಾಕ್ ಮತ್ತು ಶ್ರವಣ ದೋಷಕ್ಕೆ ಸಂಬಂಧಿಸಿದಂತೆ ಶಾಶ್ವತ ನ್ಯೂನತೆಯ ಪ್ರಮಾಣವು ————% (ಶೇಕಡಾ————) ರಷ್ಟಿರುತ್ತದೆಂದು ಪ್ರಮಾಣೀಕರಿಸಲಾಗಿದೆ.

**ಸೂಚನೆ:**

1. ಸ್ಥಿತಿಯು ಪ್ರಗತಿದಾಯಕವಾಗಿದೆ / ಪ್ರಗತಿದಾಯಕವಲ್ಲದ್ದು / ಸುಧಾರಿಸುವ ಸಂಭವವಿರುವಂಥದ್ದು / ಸುಧಾರಿಸುವ ಸಂಭವವಿಲ್ಲದಿರುವುದು *

2. ಪುನರ್ ನಿರ್ಧರಣೆಗೆ ಶಿಫಾರಸ್ಸು ಮಾಡಿಲ್ಲ/ ಅದು □ತಿಂಗಳುಗಳ / ವರ್ಷಗಳ ನಂತರ ಪುನರ್ ನಿರ್ಧರಣೆ ಮಾಡಬೇಕೆಂದು ಶಿಫಾರಸು ಮಾಡಲಾಗಿದೆ *

* ಅನ್ವಯವಾಗದಿರುವುದನ್ನು ಹೊಡೆದು ಹಾಕಿರಿ.

| | | |
|---|---|---|
| ಸಹಿ/– | ಸಹಿ/– | ಸಹಿ/– |
| (ನಿರ್ದೇಶಕ) | (ನಿರ್ದೇಶಕ) | (ನಿರ್ದೇಶಕ) |
| ಮೊಹರು | ಮೊಹರು | ಮೊಹರು |

ರೋಗಿಯ ಸಹಿ/
ಹೆಬ್ಬೆಟ್ಟಿನ ಗುರುತು

ವೈದ್ಯಕೀಯ ಅಧೀಕ್ಷಕರು / ಮುಖ್ಯ ವೈದ್ಯಾಧಿಕಾರಿ
ಆಸ್ಪತ್ರೆ ಮುಖ್ಯಸ್ಥರ ಮೇಲುರುಜು
(ಮೊಹರು ಸಮೇತ)

ಇಲ್ಲಿ ಸೂಚಿಸಲಾದ ಅಂಗವಿಕಲತೆಯನ್ನು
ತೋರಿಸುವ ಇತ್ತೀಚಿನ ದೃಢೀಕೃತ ಛಾಯಾಚಿತ್ರ.

## ನಮೂನೆ – II

(25ನೇ ನಿಯಮ ನೋಡಿ)

1. ನಿಯೋಜಕರ ಹೆಸರು ಮತ್ತು ವಿಳಾಸ
2. ನಿಯೋಜಕರ ದೂರವಾಣಿ ಸಂಖ್ಯೆಯೇನಾದರೂ ಇದ್ದರೆ ಅದನ್ನು ನೀಡಬೇಕು :
3. ಹುದ್ದೆಯ ಸ್ವರೂಪ :
   - ಎ. ಅಗತ್ಯಪಡಿಸಲಾದ ಕೆಲಸಗಾರರ ಬಗೆ (ಹುದ್ದೆ)
   - ಬಿ. ಕರ್ತವ್ಯಗಳ ಲಕ್ಷಣ
   - ಸಿ. ಅಗತ್ಯಪಡಿಸಿದ ವಿದ್ಯಾರ್ಹತೆಗಳು
     - (i) ಅವಶ್ಯಕವಾದುದು
     - (ii) ಅಪೇಕ್ಷಣೀಯ
   - ಡಿ. ವಯೋಮಿತಿಯೇನಾದರೂ ಇದ್ದರೆ ಅದು
   - ಇ. ಮಹಿಳೆಯರು ಅರ್ಹರೇ?
4. ಹುದ್ದೆಗಳ ಸಂಖ್ಯೆ :
   - ಎ. ಖಾಯಂ
   - ಬಿ. ತಾತ್ಕಾಲಿಕ
5. ವೇತನ ಮತ್ತು ಭತ್ಯೆಗಳು
6. ಕರ್ತವ್ಯ ನಿರ್ವಹಿಸಬೇಕಾದ ಸ್ಥಳ (ಅದು ಇರುವ ಪಟ್ಟಣ / ಗ್ರಾಮ ಮತ್ತು ಜಿಲ್ಲೆಯ ಹೆಸರು)
7. ಖಾಲಿ ಹುದ್ದೆಯನ್ನು ಭರ್ತಿ ಮಾಡಬಹುದಾದ ಸಂಭಾವನೀಯ ದಿನಾಂಕ :
8. ಅರ್ಜಿದಾರರ ಸಂದರ್ಶನ / ಪರೀಕ್ಷೆಗೆ ಸಂಬಂಧಿಸಿದಂತೆ ವಿವರಗಳು :
   - ಎ. ಸಂದರ್ಶನ / ಪರೀಕ್ಷೆಯ ದಿನಾಂಕ
   - ಬಿ. ಸಂದರ್ಶನ / ಪರೀಕ್ಷೆಯ ಸಮಯ
   - ಸಿ. ಸಂದರ್ಶನ / ಪರೀಕ್ಷೆ ನಡೆಯುವ ಸ್ಥಳ
   - ಡಿ. ಅರ್ಜಿದಾರರು ಯಾರ ಮುಂದೆ ಹಾಜರಾಗಿ ವರದಿ ಮಾಡಿಕೊಳ್ಳಬೇಕೋ ಅವರ ಹುದ್ದೆ ಮತ್ತು ವಿಳಾಸ
9. ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕಾದಾಗ ದೈಹಿಕ ಅಂಗವಿಕಲ ವ್ಯಕ್ತಿಗಳಿಗೆ ಆದ್ಯತೆ ಕಡ್ಡಾಯವೇ ಅಥವಾ ಅದೊಂದು ವ್ಯವಸ್ಥೆಯೇ ? ಹಾಗಿರುವಲ್ಲಿ ಅಂಥ ವ್ಯಕ್ತಿಗಳನ್ನು ಭರ್ತಿ ಮಾಡಬೇಕಾದ ಖಾಲಿ ಹುದ್ದೆಗಳ ಸಂಖ್ಯೆ
10. ಯಾವುದೇ ಇತರ ಸುಸಂಬದ್ಧ ಮಾಹಿತಿ-

(1)ನೆಯ ಉಪನಿಯಮದ ಮೇರೆಗೆ ವಿಶೇಷ ಉದ್ಯೋಗ ವಿನಿಮಯಕ್ಕೆ ಈಗಾಗಲೇ ಸಲ್ಲಿಸಲಾದ ವಿವರಗಳಲ್ಲಿ ಯಾವುದೇ ಬದಲಾವಣೆಯಿರುವಲ್ಲಿ, ಸಮುಚಿತ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಲಿಖಿತದಲ್ಲಿ ಖಾಲಿ ಹುದ್ದೆಗಳ ಬಗ್ಗೆ

# ನಮೂನೆ – III

(ನೇಮಕಗೊಂಡ ಅಂಗವಿಕಲ ವ್ಯಕ್ತಿಗಳು ಡಿಪಿಎಲ್‌ಆರ್– Iಕ್ಕೆ ಸಲ್ಲಿಸಬೇಕಾದ ವಿವರಗಳು)
(27ನೇ ನಿಯಮ ನೋಡಿ)

———————— ರಂದು ಮುಕ್ತಾಯಗೊಳ್ಳುವ ಸಮಯಕ್ಕೆ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಸಲ್ಲಿಸಬೇಕಾದ ಮೂರು ತಿಂಗಳ ಅವಧಿಯ ವಿವರಗಳನ್ನು ಸಲ್ಲಿಸುವುದು. ನಿಯೋಜಕರ ಹೆಸರು ಮತ್ತು ವಿಳಾಸ, ಅದು ಮುಖ್ಯ ಕಚೇರಿಯ, ಶಾಖಾ ಕಚೇರಿಯ ಕಾರ್ಯಸ್ವರೂಪ / ಪ್ರಮುಖ ಕಾರ್ಯಾಚರಣೆಗಳು ————————

**1. (ಎ) ಉದ್ಯೋಗ :**

ಕಾರ್ಯನಿರತ ಮಾಲೀಕರು / ಪಾಲುದಾರರು / ಕಮೀಷನರು / ಏಜೆಂಟರು / ಸಾದಿಲ್ವಾರು ಸಂದಾಯದ ಹಾಗೂ ಗುತ್ತಿಗೆ ಮೇಲೆ ಕೆಲಸ ಮಾಡುವ ಕೆಲಸಗಾರರು, ಅಲ್ಪಕಾಲಿಕ ಕೆಲಸಗಾರರು ಮತ್ತು ಅಪ್ರೆಂಟಿಸರನ್ನು ಹೊರತುಪಡಿಸಿದಂತೆ ವೇತನ ಪಟ್ಟಿಯಲ್ಲಿರುವ ಸಿಬ್ಬಂದಿಯನ್ನು ಒಳಗೊಂಡಂತೆ ಒಟ್ಟು ಕೆಲಸ ಮಾಡುವ ವ್ಯಕ್ತಿಗಳ ಸಂಖ್ಯೆ (ನೀಡುವ ಅಂಕಿ ಅಂಶಗಳು ಪ್ರತಿಯೊಬ್ಬ ವ್ಯಕ್ತಿಗೆ ಸಂಸ್ಥೆಯಿಂದ ಸಂದಾಯವಾಗುವ ಮಜೂರಿ ಅಥವಾ ವೇತನವನ್ನು ಒಳಗೊಂಡಿರತಕ್ಕದ್ದು).

| | ಹಿಂದಿನ ತ್ರೈಮಾಸಿಕ ಅವಧಿಯ ಕೆಲಸದ ಕೊನೆಯ ದಿನದಂದು | | | ವರದಿಯ ಮೇರೆಗೆ ಹಿಂದಿನ ತ್ರೈಮಾಸಿಕ ಅವಧಿಯ ಕೊನೆಯ ಕೆಲಸದ ದಿನದಂದು | | |
|---|---|---|---|---|---|---|
| | ದೈಹಿಕ ವಿಕಲತೆ | ದೃಷ್ಟಿ ದೋಷವುಳ್ಳವರು | ಶ್ರವಣ ದೋಷವುಳ್ಳವರು | ದೈಹಿಕ ವಿಕಲತೆ | ದೃಷ್ಟಿ ದೋಷವುಳ್ಳವರು | ಶ್ರವಣ ದೋಷವುಳ್ಳವರು |
| ಅಂಗವಿಕಲ ಪುರುಷರು | | | | | | |
| ಅಂಗವಿಕಲ ಮಹಿಳೆಯರು | | | | | | |

(ಬಿ) ತ್ರೈಮಾಸಿಕ ಅವಧಿಯಲ್ಲಿ ನೇಮಕಾತಿಯಲ್ಲಿ ಶೇಕಡಾ 5ಕ್ಕಿಂತ ಹೆಚ್ಚು ಪ್ರಮಾಣದ ಏರಿಕೆಯಾದ ಅಥವಾ ಇಳಿಕೆಯಾದಲ್ಲಿ, ಆ ಯಾವುದೇ ಏರಿಕೆಯ ಅಥವಾ ಇಳಿಕೆಯ ಮುಖ್ಯ ಕಾರಣಗಳನ್ನು ದಯವಿಟ್ಟು ತೋರಿಸಿ.

**2. ಖಾಲಿ ಸ್ಥಾನಗಳು :** ಖಾಲಿ ಸ್ಥಾನಗಳು, ಪ್ರತಿ ತಿಂಗಳಿಗೆ ಮತ್ತು ಮೂರು ತಿಂಗಳ ಅವಧಿ ಮೀರಿ ಕನಿಷ್ಠ ಮಜೂರಿ ಪಡೆಯುತ್ತಿರುವ ಒಟ್ಟು ನೇಮಕಾತಿಗಳನ್ನು ಒಳಗೊಳ್ಳುತ್ತವೆ.

ಎ. ತ್ರೈಮಾಸಿಕ ಅವಧಿಯಲ್ಲಿ ಉಂಟಾದ ಖಾಲಿಸ್ಥಾನಗಳ ಸಂಖ್ಯೆ ಹಾಗೂ ಆ ತ್ರೈಮಾಸಿಕ ಅವಧಿಯಲ್ಲಿ ಭರ್ತಿ ಮಾಡಿಕೊಂಡ ಸ್ಥಾನಗಳ ಸಂಖ್ಯೆ. (ಅಂಗವಿಕಲ ಪುರುಷರು ಮತ್ತು ಅಂಗವಿಕಲ ಮಹಿಳೆಯರ ಸಂಖ್ಯೆಯನ್ನು ಪ್ರತ್ಯೇಕವಾಗಿ ನೀಡಬಹುದು)

ಈ ಅಧಿನಿಯಮದ ವ್ಯಾಪ್ತಿಯಲ್ಲಿ ಬರುವ ಖಾಲಿಸ್ಥಾನಗಳ ಸಂಖ್ಯೆ

| ಉಂಟಾದ ಖಾಲಿ ಸ್ಥಾನಗಳು | ಅಧಿಸೂಚಿತವಾದವುಗಳು | ಭರ್ತಿ ಮಾಡಿದವುಗಳು | ಮೂಲಗಳು(ಯಾವ ಮೂಲದಿಂದ ಭರ್ತಿ ಮಾಡಲಾಯಿತೆಂಬುದರ ವಿವರ ನೀಡಿ) | |
|---|---|---|---|---|
| | ಸ್ಥಳೀಯ ವಿಶೇಷ ಉದ್ಯೋಗ ವಿನಿಮಯ ಕೇಂದ್ರ | | ಸಾಮಾನ್ಯ ಉದ್ಯೋಗ ವಿನಿಮಯ ಕೇಂದ್ರ | |
| 1 | 2 | 3 | 4 | 5 |

ಬಿ.     ವರದಿಯ ಮೇರೆಗೆ ತ್ರೈಮಾಸಿಕ ಅವಧಿಯಲ್ಲಿ ಉಂಟಾದ ಎಲ್ಲ ಖಾಲಿ ಸ್ಥಾನಗಳನ್ನು ಅಧಿಸೂಚಿತಗೊಳಿಸದಿರುವ ಬಗ್ಗೆ ಇರುವ ಕಾರಣಗಳು, ಮೇಲ್ಕಂಡ 2(ಎ) ನೋಡಿ.

3.     ಮಾನವ ಶಕ್ತಿಯ ಕೊರತೆ :

ಸೂಕ್ತ ಅಭ್ಯರ್ಥಿಗಳ ಕೊರತೆಯ ಕಾರಣದಿಂದಾಗಿ ಖಾಲಿ ಸ್ಥಾನಗಳು ಉಂಟಾಗಿವೆ / ಹುದ್ದೆಗಳನ್ನು ಭರ್ತಿ ಮಾಡಲಾಗಿಲ್ಲ.

ಅಂಗವಿಕಲತೆವಾರು ಖಾಲಿ ಸ್ಥಾನಗಳನ್ನು /ಹುದ್ದೆಗಳನ್ನು ತುಂಬಲಾಗಿಲ್ಲದ ಉದ್ಯೋಗದ ಹೆಸರು ಅಥವಾ ಹುದ್ದೆಯ ಹೆಸರು.

| | ಅಗತ್ಯವಿರುವ ವಿದ್ಯಾರ್ಹತೆ | ಅಗತ್ಯ ಅನುಭವ | ಅನುಭವದ ಅಗತ್ಯವಿಲ್ಲದೆ ಇರುವುದು |
|---|---|---|---|
| 1 | 2 | 3 | 4 |

ಸೂಕ್ತ ಅಭ್ಯರ್ಥಿಗಳನ್ನು ಪಡೆಯುವಲ್ಲಿ ಇತ್ತೀಚೆಗೆ ಯಾವುದೇ ತೊಂದರೆ ಅನುಭವಿಸುವ ಸಂಸ್ಥೆಯ ಯಾವುದೇ ಇತರ ಉದ್ಯೋಗಗಳನ್ನು ದಯವಿಟ್ಟು ಪಟ್ಟಿ ಮಾಡಿರಿ.

ನಿಯೋಜಕರ ಸಹಿ.

ಇವರಿಗೆ:

ಉದ್ಯೋಗ ವಿನಿಮಯ ಕೇಂದ್ರ

______________________

______________________

ಸೂಚನೆ: ಈ ವಿವರಣೆಯು 31ನೇ ಮಾರ್ಚ್ / 30ನೇ ಜೂನ್ / 30ನೇ ಸೆಪ್ಟೆಂಬರ್ ಮತ್ತು 31ನೇ ಡಿಸೆಂಬರ್‌ಗಳಲ್ಲಿ ಮುಕ್ತಾಯವಾಗುವ ತ್ರೈಮಾಸಿಕ ಅವಧಿಗೆ ಸಂಬಂಧಿಸಿದ್ದಾಗಿದ್ದು ಮತ್ತು ಅದನ್ನು ಸಂಬಂಧಿಸಿದ ತ್ರೈಮಾಸಿಕ ಅವಧಿಯ ಮುಕ್ತಾಯದ ಮೂವತ್ತು ದಿನಗಳೊಳಗಾಗಿ ಸ್ಥಳೀಯ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಸಲ್ಲಿಸತಕ್ಕದ್ದು.

## ನಮೂನೆ – IV

### (ನೇಮಕಗೊಂಡ ಅಂಗವಿಕಲ ವ್ಯಕ್ತಿಗಳ ವಿವರಗಳು ಡಿಪಿಇಆರ್ –II)

(27ನೇ ನಿಯಮ ನೋಡಿ)

ಸ್ಥಳೀಯ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಉದ್ಯೋಗ ನೀಡಿದ ವಿವರಣೆಯನ್ನು 2 ವರ್ಷದಲ್ಲಿ ಒಂದು ಬಾರಿ ಸಲ್ಲಿಸತಕ್ಕದ್ದು.

ನಿಯೋಜಕರ ಹೆಸರು ಮತ್ತು ವಿಳಾಸ :

ವ್ಯವಹಾರದ ಸ್ವರೂಪ :

(ಸಂಸ್ಥೆಯು ನಡೆಸುವ ತನ್ನ ಮುಖ್ಯ ಕಾರ್ಯಚಟುವಟಿಕೆಗಳ ವಿವರ)

1.     —— ರಂದು (ದಿನಾಂಕ ನಮೂದಿಸಿ) ಇರುವಂತೆ ——(ಅಂಕಿ ಅಂಶಗಳಲ್ಲಿ) ಸಂಸ್ಥೆಯಿಂದ ಸಂದಾಯವಾಗುವ ಪ್ರತಿಯೊಬ್ಬ ವ್ಯಕ್ತಿಯ ಮಜೂರಿ ಅಥವಾ ವೇತನವನ್ನೊಳಗೊಂಡಂತೆ ಸಂಸ್ಥೆಯ ವೇತನ ಪಟ್ಟಿಯಲ್ಲಿರುವ ವ್ಯಕ್ತಿಗಳ ಒಟ್ಟು ಸಂಖ್ಯೆ. (ಅಂಗವಿಕಲ ಪುರುಷರು ಮತ್ತು ಅಂಗವಿಕಲ ಮಹಿಳೆಯರಿಗೆ ಸಂಬಂಧಿಸಿದ ಅಂಕಿಅಂಶಗಳು ಪ್ರತ್ಯೇಕವಾಗಿರಬೇಕು)

2.     ಮೇಲ್ಕಂಡ ಬಾಬು-Iರಲ್ಲಿ ನೀಡಿದಂತೆ ಎಲ್ಲ ನೌಕರರ ವೃತ್ತಿಯ ವರ್ಗೀಕರಣ. ಪ್ರತಿಯೊಂದು ವೃತ್ತಿಯಲ್ಲಿ ಇರುವ ನೌಕರರ ಸಂಖ್ಯೆಯನ್ನು ಪ್ರತ್ಯೇಕವಾಗಿ ದಯವಿಟ್ಟು ಈ ಕೆಳಕಂಡಂತೆ ನೀಡಿ:

| ವೃತ್ತಿ<br>ಸರಿ ಹೊಂದುವ ಪದಗಳನ್ನು ಬಳಸಿರಿ | ನೌಕರರ ಸಂಖ್ಯೆ | | | | | | | |
|---|---|---|---|---|---|---|---|---|
| | ಅಂಗವಿಕಲ ಪುರುಷರು | | | ಅಂಗವಿಕಲ ಮಹಿಳೆಯರು | | | | ಒಟ್ಟು |
| ಎಂಜಿನಿಯರ್ (ಮೆಕ್ಯಾನಿಕಲ್), ಶಿಕ್ಷಕ (ಗೃಹಕೃತ್ಯ / ವೈಜ್ಞಾನಿಕ) ವರ್ಗಪ್ಪದ ಮೇಲಿರುವ ಅಧಿಕಾರಿ (ವಾಸ್ತವವಾಗಿ); ಸಹಾಯಕ ನಿರ್ದೇಶಕ (ಲೋಹಶಾಸ್ತ್ರ) ವೈಜ್ಞಾನಿಕ ಸಹಾಯಕ (ಔಷಧ ಶಾಸ್ತ್ರ) ಸಂಶೋಧನಾಧಿಕಾರಿ | ದೈಹಿಕ ಅಂಗ ವಿಕಲತೆ ವುಳ್ಳವು | ದೃಷ್ಟಿ ದೋಷ ವುಳ್ಳವು | ಶ್ರವಣ ದೋಷ ವುಳ್ಳವು | ದೈಹಿಕ ಅಂಗ ವಿಕಲತೆ | ದೃಷ್ಟಿ ದೋಷ ವುಳ್ಳವು | ಶ್ರವಣ ದೋಷ ವುಳ್ಳವು | ಒಟ್ಟು | ನಿವೃತ್ತಿಯ ಕಾರಣದಿಂದಾಗಿ ಮುಂದಿನ ಕ್ಯಾಲೆಂಡರ್ ವರ್ಷದಲ್ಲಿ ನೀವು ಭರ್ತಿ ಮಾಡುವ ಸಂಭವವಿರುವ ಪ್ರತಿಯೊಂದು ವೃತ್ತಿಗೆ ಸಂಬಂಧಿಸಿದಂತೆ ದಯವಿಟ್ಟು ಸಾಧ್ಯವಾದ ಮಟ್ಟಿಗೆ ಖಾಲಿ ಹುದ್ದೆಗಳ ಸಂಖ್ಯೆಯನ್ನು ನೀಡಿರಿ |
| 1 | 2 | 3 | 4 | 5 | 6 | 7 | 8 | 9 |
| ಮೇಲ್ವಿಚಾರಕ(ದರ್ಜಿ) ಫಿಟ್ಟರ್ (ಆಂತರಿಕ ಸಂಯೋಜಿತ ಎಂಜಿನ್ನು); ತಪಾಸಕ (ಆರೋಗ್ಯ); ಅಧೀಕ್ಷಕ (ಕಚೇರಿ) ಅಪ್ರೆಂಟೀಸ್ (ಎಲೆಕ್ಟ್ರೀಷಿಯನ್) | | | | ಸಿವಿಷ್ಯೆ | | ಸಿವಿಷ್ಯೆ | | |
| ಒಟ್ಟು | | | | | | | | |

ದಿನಾಂಕ:————

ನಿಯೋಜಕರ ಸಹಿ

ಇವರಿಗೆ:

ಉದ್ಯೋಗ ವಿನಿಮಯ ಕೇಂದ್ರ ————

(ದಯವಿಟ್ಟು ಇಲ್ಲಿ ನಿಮ್ಮ ಸ್ಥಳೀಯ ವಿಶೇಷ ಉದ್ಯೋಗ ವಿನಿಮಯ ಕೇಂದ್ರದ ವಿಳಾಸ ಭರ್ತಿ ಮಾಡಿರಿ).

**ಸೂಚನೆ:** 7ನೇ ಬಾಬಿನ ಅಡಿ 8ನೇ ಅಂಕಣದ ಒಟ್ಟು ಮೊತ್ತವು ಬಾಬು–1ರಲ್ಲಿ ನೀಡಲಾದ ಅಂಕಿ ಅಂಶಗಳಿಗೆ ಸಂವಾದಿಯಾಗಿರತಕ್ಕದ್ದು.

## ನಮೂನೆ – V

(ನೇಮಕಗೊಂಡ ಅಂಗವಿಕಲ ವ್ಯಕ್ತಿಗಳ ವಿವರಗಳು– ಇಐಇಆರ್ –III)

(28ನೇ ನಿಯಮ ನೋಡಿ)

1. ನಿಯೋಜಕರ ಹೆಸರು ಮತ್ತು ವಿಳಾಸ :
2. ಕೇಂದ್ರ ಕಚೇರಿ ————

   ಶಾಖಾ ಕಚೇರಿ ————
3. ಕೆಲಸದ ಸ್ವರೂಪ / ಪ್ರಮುಖ ಕಾರ್ಯಗಳು ————
4. ಸಂಸ್ಥೆಯ ವೇತನ ಪಟ್ಟಿಯಲ್ಲಿರುವ ವ್ಯಕ್ತಿಗಳ ಒಟ್ಟು ಸಂಖ್ಯೆ

(ಈ ಸಂಖ್ಯೆಯಲ್ಲಿ ಸಂಸ್ಥೆಯು ಮಜೂರಿ ಅಥವಾ ವೇತನ ಸಂದಾಯ ಮಾಡಿದ ಪ್ರತಿಯೊಬ್ಬ ವ್ಯಕ್ತಿ ಸೇರಿರತಕ್ಕದ್ದು).

5. ಸಂಸ್ಥೆಯ ವೇತನ ಪಟ್ಟಿಯಲ್ಲಿರುವ ಅಂಗವಿಕಲ ವ್ಯಕ್ತಿಗಳ (ಅಂಗವಿಕಲತಾವಾರು) ಒಟ್ಟು ಸಂಖ್ಯೆ (ಈ ಸಂಖ್ಯೆಯಲ್ಲಿ ಸಂಸ್ಥೆಯು ಮಜೂರಿ ಅಥವಾ ವೇತನವನ್ನು ಸಂದಾಯ ಮಾಡಿದ ಪ್ರತಿಯೊಬ್ಬ ವ್ಯಕ್ತಿ ಸೇರಿರತಕ್ಕದ್ದು).
6. ಮೇಲಿನ 5ನೇ ಬಾಬಿನಲ್ಲಿ ನೀಡಲಾದಂತೆ ಎಲ್ಲಾ ಉದ್ಯೋಗಿಗಳ ಉದ್ಯೋಗಾರ್ಹತೆ. (ಪ್ರತಿಯೊಂದು ಉದ್ಯೋಗದ, ಉದ್ಯೋಗಿಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ಈ ಕೆಳಗೆ ದಯವಿಟ್ಟು ಒದಗಿಸಿ).

| ವೃತ್ತಿ | ಉದ್ಯೋಗಿಗಳ ಸಂಖ್ಯೆ | | | | | | | |
|---|---|---|---|---|---|---|---|---|
| ನಿಖರವಾದ ಹುದ್ದೆಗಳನ್ನು ಹೆಸರಿಸಿ | ಅಂಗವಿಕಲ ಪುರುಷರು | | | | ಅಂಗವಿಕಲ ಮಹಿಳೆಯರು | | | ಒಟ್ಟು |
| ಎಂಜಿನಿಯರ್ ಮೊದಲಾದಂಥ (ಮೆಕ್ಯಾನಿಕಲ್), ಶಿಕ್ಷಕ (ಗ್ರಾಫಿಕ್ಸ್ / ವೈಜ್ಞಾನಿಕ) ಕರ್ತವ್ಯದಲ್ಲಿರುವ ಅಧಿಕಾರಿ (ವಾಸ್ತವವಾಗಿ); ಸಹಾಯಕ ನಿರ್ದೇಶಕರು (ಲೋಹವಿಜ್ಞಾನ) ಸ್ವಯಂಕೃತ ನಿರ್ದೇಶಕ (ರಸಾಯನ ಶಾಸ್ತ್ರ)ಸಂಶೋಧನಾಧಿಕಾರಿ (ಅರ್ಥಶಾಸ್ತ್ರ) ಮೇಲ್ವಿಚಾರಕ (ದರ್ಜೆ) ಶೋಧನಾ ಪರಿಶೀಲಕ (ಅಂತರ್ಧಾನ ಯಂತ್ರ) | ದೈಹಿಕ ಅಂಗ ವಿಕಲರು | ದೃಷ್ಟಿ ದೋಷ ಉಳ್ಳವರು | ಶ್ರವಣ ದೋಷ ಉಳ್ಳವರು | ದೈಹಿಕ ಅಂಗ ವಿಕಲತೆ | ದೃಷ್ಟಿ ದೋಷ ಉಳ್ಳವರು | ಶ್ರವಣ ದೋಷ ಉಳ್ಳವರು | ಒಟ್ಟು | ನಿವೃತ್ತಿಯ ಕಾರಣದಿಂದಾಗಿ ಮುಂದಿನ ಮುಂದಿನ ಇಡೀ ವರ್ಷದ ಅವಧಿಯಲ್ಲಿ ನೀವು ಭರ್ತಿ ಮಾಡಬಹುದಾದ ಪ್ರತಿಯೊಂದು ಖಾಲಿ ಸ್ಥಾನಗಳ ಸಂಖ್ಯೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ದಯವಿಟ್ಟು ಒದಗಿಸಿ. |
| 1 | 2 | 3 | 4 | 5 | 6 | 7 | 8 | 9 |

ಬಿ. ತ್ರೈಮಾಸಿಕ ಅವಧಿಯಲ್ಲಿ ಉದ್ಯೋಗದಲ್ಲಿ ಏರಿಕೆ ಅಥವಾ ಇಳಿಕೆಯಾಗಿದ್ದರೆ, ಆ ಏರಿಕೆಗೆ ಅಥವಾ ಇಳಿಕೆಗೆ ಪ್ರಮುಖ ಕಾರಣಗಳನ್ನು , ಏರಿಕೆ ಅಥವಾ ಇಳಿಕೆಯು ಶೇ.ಕ್ಕಿಂತ ಹೆಚ್ಚಾಗಿದ್ದಲ್ಲಿ, ದಯವಿಟ್ಟು ಅದನ್ನು ಸೂಚಿಸಿ.

7. ಖಾಲಿಸ್ಥಾನಗಳು: ತಿಂಗಳಿಗೆ ಹಾಗೂ ಮೂರು ತಿಂಗಳಿಗೂ ಮೀರಿದ ಅವಧಿಗೆ, ಕನಿಷ್ಠ ಮಜೂರಿ ಪಡೆಯುವ ಒಟ್ಟು ಉಪಲಬ್ಧಿಗಳನ್ನು ಒಳಗೊಂಡ ಖಾಲಿ ಸ್ಥಾನಗಳು.

ಎ. ತ್ರೈಮಾಸಿಕದ ಅವಧಿಯಲ್ಲಿ ಇರುವ ಅಥವಾ ಅಧಿಸೂಚಿಸಿದ್ದ ಖಾಲಿಸ್ಥಾನಗಳ ಸಂಖ್ಯೆ ಮತ್ತು ತ್ರೈಮಾಸಿಕ ಅವಧಿಯಲ್ಲಿ ಭರ್ತಿ ಮಾಡಲಾದ ಖಾಲಿಸ್ಥಾನಗಳ ಸಂಖ್ಯೆ.

| ಅಧಿನಿಯಮದ ವ್ಯಾಪ್ತಿಯೊಳಗೆ ಬರುವ ಖಾಲಿ ಸ್ಥಾನಗಳ ಸಂಖ್ಯೆ | | | | | |
|---|---|---|---|---|---|
| ಖಾಲಿ ಇರುವ ಹುದ್ದೆಗಳು | ಅಧಿಸೂಚಿತ ವಿಶೇಷ ಉದ್ಯೋಗ ವಿನಿಮಯ ಕೇಂದ್ರ | ಸ್ಥಳೀಯ | ಸಾಮಾನ್ಯ ಉದ್ಯೋಗ | ಭರ್ತಿ ಮಾಡಲ್ಪಟ್ಟದ್ದು | ಮೂಲ (ಯಾವ ಮೂಲದಿಂದ ತುಂಬಲಾಗಿದೆಯೋ ಅದನ್ನು ವಿವರಿಸಿ. |
| 1 | 2 | | 3 | 4 | 5 |
| | | | | | |
| ಒಟ್ಟು | | | | | |

ಬಿ. ವರದಿಯ ತ್ರೈಮಾಸಿಕದ ಅವಧಿಯಲ್ಲಿ ಎಲ್ಲಾ ಖಾಲಿಸ್ಥಾನಗಳನ್ನು ಅಧಿಸೂಚಿಸದೇ ಇರುವುದಕ್ಕೆ ಕಾರಣಗಳು ಮೇಲೆ (ಎ) 2————————ನೋಡಿ.

8. ಮಾನವ ಶಕ್ತಿ ಕೊರತೆ.–

ಸೂಕ್ತ ಅಭ್ಯರ್ಥಿಗಳ ಕೊರತೆಯ ಕಾರಣದಿಂದ ಭರ್ತಿ ಮಾಡದಿರುವ ಖಾಲಿಸ್ಥಾನಗಳು / ಹುದ್ದೆಗಳು.

| ಉದ್ಯೋಗದ ಹೆಸರು ಅಥವಾ ಹುದ್ದೆಗಳ ನೇಮಕ / ಹೆಸರು | ಭರ್ತಿ ಮಾಡದಿರುವ ಖಾಲಿ ಸ್ಥಾನಗಳು / ಹುದ್ದೆಗಳ ಸಂಖ್ಯೆ | | | |
|---|---|---|---|---|
| | ಅಗತ್ಯ ಅರ್ಹತೆ | ಅಗತ್ಯ ಅನುಭವ | ಅವಶ್ಯ ಅನುಭವ | ಅಥವಾವುದೂ ಇಲ್ಲದಿರುವುದು |
| 1 | 2 | 3 | 4 | |

ಸಂಸ್ಥೆಯು, ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯುವಲ್ಲಿ ಇತ್ತೀಚೆಗೆ ಯಾವುದೇ ತೊಂದರೆಯನ್ನು ಎದುರಿಸಿದ ಇತರ ಯಾವುದೇ ಹುದ್ದೆಗಳನ್ನು ದಯವಿಟ್ಟು ಪಟ್ಟಿಮಾಡಿ.

ನಿಯೋಜಕನ ಸಹಿ.

## ನಮೂನೆ – VI

(29ನೇ ನಿಯಮ ನೋಡಿ)

1. ಅರ್ಜಿದಾರ ಸಂಸ್ಥೆಯ ಹೆಸರು
2. ವಿಳಾಸ ಮತ್ತು ದೂರವಾಣಿ ಸಂಖ್ಯೆ
3. ಅರ್ಜಿದಾರನು :
   - ಎ) ಸಂಘಗಳ ನೋಂದಣಿ ಅಧಿನಿಯಮ, 1860 (1860ರ ಅಧಿನಿಯಮ XXI)ರ ಅಡಿಯಲ್ಲಿ ನೋಂದಾಯಿತವಾದ ಸಂಸ್ಥೆ
   - ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿತವಾದ ಒಂದು ಸಾರ್ವಜನಿಕ ನ್ಯಾಸ
   - ಸಿ) ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಅಥವಾ ಅದರ ಶಾಖೆಗಳು
   - ಡಿ) ಕಂಪನಿಗಳ ಅಧಿನಿಯಮ, 1956ರ 25ನೇ ಪ್ರಕರಣದ ಅಡಿಯಲ್ಲಿ ನೋಂದಾಯಿತವಾದ ಕಂಪನಿ
   - ಇ) ಯಾವುದೇ ಇತರ ಸಂಸ್ಥೆ (ಯಾವ ಅಧಿನಿಯಮದ ಹೆಸರಿನಲ್ಲಿ ನೋಂದಾಯಿತವಾಗಿದೆಯೋ ಅದರ ಹೆಸರಿನೊಂದಿಗೆ ನೋಂದಾಯಿತ ವಿವರಗಳು), ಈ ಯೋಜನೆಯ ಉದ್ದೇಶಕ್ಕಾಗಿ ಇರುವ ಮಂತ್ರಾಲಯ (ಈ ಅಧಿನಿಯಮದ ಹೆಸರಿನೊಂದಿಗೆ ನೋಂದಾಯಿತವಾದ ವಿವರಗಳು).
4. ಸಂಸ್ಥೆ ಸ್ಥಾಪನೆಯಾದ ದಿನಾಂಕ
5. ಸಂಸ್ಥೆಯ ಸ್ವರೂಪ (ಈ ಸಂಸ್ಥೆಯು ಶಿಕ್ಷಣ ಸಂಸ್ಥೆಯಾಗಿದೆಯೇ ಅಥವಾ ಕಿವುಡ, ದೈಹಿಕ ವಿಕಲ ಅಥವಾ ಮಾನಸಿಕ ಅಸ್ವಸ್ಥ ವ್ಯಕ್ತಿಗಳು, ಮೊದಲಾದವರಿಗೆ ತರಬೇತಿ ನೀಡುವ ಸಂಸ್ಥೆಯಾಗಿದೆಯೇ ಎಂಬುದನ್ನು ದಯವಿಟ್ಟು ಸ್ಪಷ್ಟವಾಗಿ ತಿಳಿಸಿ)
6. ಸಂಸ್ಥೆಯ ಸಂಕ್ಷಿಪ್ತ ಇತಿಹಾಸ ಮತ್ತು ಅದರ ಗುರಿಗಳು ಮತ್ತು ಕಾರ್ಯ ಚಟುವಟಿಕೆಗಳು
7. ರಾಜ್ಯ ಸರ್ಕಾರದ ಮಾನ್ಯತೆ ಪಡೆದಿದೆಯೇ?
8. ಈ ಸಂಸ್ಥೆಯು ಅಖಿಲ ಭಾರತ ಮಟ್ಟದ ಸ್ಥಾನ ಹೊಂದಿದೆಯೇ, ಹಾಗಿದ್ದರೆ ಅದರ ಅಖಿಲ ಭಾರತ ಕಾರ್ಯಚಟುವಟಿಕೆಗಳ ಸ್ವರೂಪವನ್ನು ನೀಡಿರಿ.
9. ತನ್ನ ಸ್ವಂತ ಕಟ್ಟಡದಲ್ಲಿದೆಯೇ / ಬಾಡಿಗೆ ಕಟ್ಟಡದಲ್ಲಿದೆಯೇ?
10. ಅಂಗವಿಕಲ ಫಲಾನುಭವಿಗಳ ಸಧ್ಯದ ಸಂಖ್ಯೆ

11. ಯೋಜನೆ ಪ್ರಾರಂಭಗೊಳ್ಳುವ ಮತ್ತು ಮುಕ್ತಾಯಗೊಳ್ಳುವ ಸಂಭವನೀಯ ದಿನಾಂಕಗಳು

12. ಈ ಯೋಜನೆಯು ಕೆಲವು ಇತರ ಸರ್ಕಾರದಿಂದ ನೆರವು ಪಡೆಯುವ ಅಥವಾ ಸರ್ಕಾರೇತರರಿಂದ ನೆರವನ್ನು ಪಡೆಯುವ ಸಂಭವವಿದೆಯೇ?

13. ಉದ್ದೇಶಿತ ಕಟ್ಟಡಕ್ಕೆ ಅಗತ್ಯವಾದ ಭೂಮಿ ಲಭ್ಯವಿದೆಯೇ? ಹಾಗಿದ್ದರೆ, ವಿವರಗಳನ್ನು ಕೊಡಿ. (ಜಾಗದ ಸ್ಥಳವನ್ನು ತಿಳಿಸಿ. ಮತ್ತು ಕಟ್ಟಡ ನಿರ್ಮಾಣಕ್ಕಾಗಿ ಸಕ್ಷಮ ಪ್ರಾಧಿಕಾರ ನೀಡಿರುವ ಅನುಮತಿ ಇತ್ಯಾದಿಗಳ ಪ್ರಮಾಣ ಪತ್ರವನ್ನು ಲಗತ್ತಿಸಿ)

14. ಎ. ಯೋಜನೆಯನ್ನು ಕೈಗೊಳ್ಳಲು ತರಬೇತಿ ಹೊಂದಿದ ಸಿಬ್ಬಂದಿ ಮತ್ತು ಇತರ ಸೂಕ್ತ ಸೌಲಭ್ಯಗಳು ದೊರೆಯುತ್ತವೆಯೇ? ಹಾಗಿದ್ದರೆ ಅವುಗಳ ವಿವರಗಳನ್ನು ನೀಡಿ.

ಬಿ. ಹೊಸ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದ್ದಲ್ಲಿ ಈ ಉದ್ದೇಶಕ್ಕಾಗಿ ನಿಯಮಿಸಲಾಗಿದ್ದ, ಶೈಕ್ಷಣಿಕ ವಿದ್ಯಾರ್ಹತೆ, ಉದ್ಯೋಗ, ಅನುಭವಗಳ ವಿವರಗಳನ್ನು ನೀಡಿರಿ.

ಸಿ. ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳ ಸಂಖ್ಯೆ

15. ಲಗತ್ತಿಸಬೇಕಾದ ಕಾಗದ ಪತ್ರಗಳು / ವಿವರ ಪಟ್ಟಿಕೆಗಳು

ಎ. ಗುರಿಗಳು ಮತ್ತು ಉದ್ದೇಶಗಳು / ಕಾರ್ಯಚಟುವಟಿಕೆಗಳನ್ನು ನೀಡಿದ ಸಂಸ್ಥೆಯ ಪರಿಚಯ ಪತ್ರ ಅಥವಾ ಸಂಕ್ಷಿಪ್ತ ವಿವರಣೆ.

ಬಿ. ಸಂಸ್ಥೆಯ ರಚನೆ

ಸಿ. ಪ್ರತಿಯೊಬ್ಬ ಸದಸ್ಯನ ವಿವರಗಳನ್ನೊಳಗೊಂಡ ವ್ಯವಸ್ಥಾಪಕ ಮಂಡಳಿಯ ರಚನೆ.

ಡಿ. ಇತ್ತೀಚಿನ ಲಭ್ಯ ವರದಿ

ಇ. ಸಂಸ್ಥೆಯ ಕಳೆದ ಎರಡು ವರ್ಷಗಳಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಸರ್ಕಾರಿ ಲೆಕ್ಕ ಪರಿಶೋಧಕನು ಕ್ರಮವಾಗಿ / ಸರಿಯಾಗಿ ಪರಿಶೋಧಿಸಿದ ಜಮೆ ಮತ್ತು ಸಂದಾಯ ಲೆಕ್ಕಗಳು ಮತ್ತು ಆದಾಯ ಮತ್ತು ವೆಚ್ಚದ ಪೂರ್ಣ ಲೆಕ್ಕಗಳು. (ಇಡೀ ಸಂಸ್ಥೆಯ ಹಿಂದಿನ ಹಣಕಾಸು ವರ್ಷದ ದೃಢೀಕೃತ ಆಯವ್ಯಯ ಪಟ್ಟಿಯ ಪ್ರತಿಯೊಂದಿಗೆ)

ಎಫ್. ಕೇಂದ್ರ / ರಾಜ್ಯ ಸರ್ಕಾರ, ಕೇಂದ್ರ ಸಮಾಜ ಕಲ್ಯಾಣ ಮಂಡಳಿ, ಸ್ಥಳೀಯ ಸಂಸ್ಥೆಗಳು ಅಥವಾ ಯಾವುದೇ ಇತರ ಅರೆ ಸರ್ಕಾರಿ ಸಂಸ್ಥೆ, ಇವುಗಳಲ್ಲಿ ಪರಿಶೀಲನೆಯಲ್ಲಿರುವ ಯೋಜನೆಗಳು ಅಥವಾ ಯಾವುದೇ ಇತರ ಯೋಜನೆಗಳ ಸಲುವಾಗಿ ಯಾವುದಾದರೂ ಒಂದಕ್ಕೆ ಅಥವಾ ಯಾವುದೇ ಇತರ ಸಂಸ್ಥೆಗೆ ಮಾಡಿಕೊಂಡಿರುವ ಕೋರಿಕೆಯ ಜೊತೆಗಿನಂತೆ ಕಳೆದ ಐದು ವರ್ಷಗಳ ಅವಧಿಯಲ್ಲಿ ನೆರವನ್ನು ಪಡೆದ ವಿವರಗಳನ್ನು (ವರ್ಷ, ಉದ್ದೇಶ, ಮೊತ್ತಗಳು ಮೊದಲಾದವು) ನೀಡುವ ಒಂದು ವಿವರಪಟ್ಟಿ

ಜಿ. ಯೋಜನೆಯಲ್ಲಿ ಅಂದಾಜು ಮಾಡಿದ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳ ವಿಷಯವಾರು ಮತ್ತು ಬಾಬ್ತುವಾರು ವಿವರಗಳನ್ನು ನೀಡುವ ಒಂದು ವಿವರಪಟ್ಟಿ

ಹೆಚ್. ಉದ್ದೇಶಿತ ಕಟ್ಟಡದ ಪ್ರತಿಯೊಂದು ಯೋಜನೆಯ (ನಿರ್ಮಾಣವಾಗಲಿರುವ ಕಟ್ಟಡ ಮತ್ತು ಕಟ್ಟಡಕ್ಕಾಗಿ ಬಳಸಿಕೊಳ್ಳುವ ಪ್ರದೇಶ ಮತ್ತು ನಿರ್ಮಾಣದ ಅಂದಾಜು ವೆಚ್ಚದ ಸ್ಥೂಲ ಸೂಚನೆಯನ್ನು ನೀಡುವ ರೂಪುರೇಷೆ) ಮತ್ತು

ಐ. ಈಗಾಗಲೇ ಲಭ್ಯವಿರುವ ; ಮತ್ತು ಸಮಾಜ ಕಲ್ಯಾಣ ಮಂತ್ರಾಲಯದಿಂದ ಪ್ರತ್ಯೇಕ ನೆರವು ಪಡೆದ ಸಾಧನ ಸಾಮಗ್ರಿಗಳು, ಸಲಕರಣೆಗಳು, ಪೀಠೋಪಕರಣಗಳು, ಗ್ರಂಥಾಲಯ ಪುಸ್ತಕಗಳು, ಇತ್ಯಾದಿಗಳನ್ನು ತೋರಿಸುವ ಒಂದು ವಿವರಣೆ ; (ವಿವರಗಳನ್ನು ಸಂಖ್ಯೆಯ ಮೂಲಕ ನೀಡಲು ಸಾಧ್ಯವಾಗುವ ವಿವರ) ಮತ್ತು

ಜೆ. ಸಹಾಯ ಧನವನ್ನು ಕೋರಲಾದ ವರ್ಷದ ಅವಧಿಯಲ್ಲಿ ಅಂದಾಜು ಸ್ವೀಕೃತಿಗಳು ಮತ್ತು ವೆಚ್ಚವನ್ನು ತೋರಿಸುವ ಇಡೀ ಸಂಸ್ಥೆಯ ಸವಿವರ ಆಯ-ವ್ಯಯ ಅಂದಾಜು ಪಟ್ಟಿ

16. ಹೆಚ್ಚುವರಿ ಕಾಗದ ಪತ್ರಗಳ ಪಟ್ಟಿ ಇದ್ದರೆ,

17. ಹೆಚ್ಚುವರಿ ಮಾಹಿತಿ ಇದ್ದರೆ,

**GOVERNMENT OF KARNATAKA**

No. WCD.08.PHP.2006

Karnataka Government Secretariat,
M.S. Building,
Bangalore, dated: 9th November, 2006.

**NOTIFICATION**

In exercise of powers conferred by sub-section (1) of section 73 read with sections 33 and 43 of the Persons With Disabilities [Equal Opportunities, Protection of Rights and Full Participation] Act, 1995 (Central Act 1 of 1996), the Government of Karnataka hereby makes the following rules further to amend the Person With Disabilities (Equal Opportunities, Protection of Rights and Full Participation) (Karnataka) Rules, 2003, namely :-

**RULES**

**1. Title and Commencement :**

1. These rules may be called the Persons With Disabilities (Equal Opportunities, Protection of Rights and Full Participation) (Karnataka Amendment) Rules, 2006.

2. They shall come into force on the date of their publication in the Official Gazette.

**2. Insertion of new chapter IVA:-** After chapter IV of the Persons with Disabilities (Equal Opportunities, Protection of Rights and Full Participation) Rules, 2003, hereinafter referred to as, the said rules the following new chapter shall be inserted namely, :-

**CHAPTER - IV-A**

"**Rule 28A. Benefit of Persons With Disabilities** :- All the State Government Departments, Boards, Corporations, Zilla Panchayats, Taluk Panchayats, Town Panchayats, Gram Panchayats, Municipal Corporations, Municipal Councils, Local Bodies, Urban Development Authorities and other Establishments of the State Government and other aided Institutions shall, :-

(i) provide for 3% reservation in-Group A and B posts and 5% reservation in Group C and D posts or in such ratio as specified by the State Government from time to time in any Order, Circular or Notifications.

(ii) ensure that in all State Sector / District Sector Schemes implemented by them not less than 3% of the fund allocation in all poverty alleviation schemes / development programmes, welfare schemes, education, Health and research programmes including central and externally aided schemes and projects, is spent on providing relief to persons with disabilities.

(iii) ensure that when allotment of land is made for the following purposes :-

a. House / Site,
b. Setting up of business,
c. Setting up of special recreation centers,
d. Establishment of special schools,
e. Establishment of research centers,
f. Establishment of factories by entrepreneurs with disabilities,

(i) not less than 3% of the allottees are persons with disabilities;

(ii) the rate charged to such persons is made concessional.

Not withstanding anything contained in any other law for the time being in force a report in compliance of clauses (i) to (iii) shall be furnished at regular intervals to the Commissioner for Persons With Disabilities for review and further necessary direction.

By Order in the name of the
Governor of Karnataka,

**R.M. CHANDRAMMA**
Under Secretary to Government,
Women and Child Development Department.

* * * * *